Swabhimani Sahakari

Pages : 40, 12 ₹

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 15
Issue - 11
November - 2018


ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ



## ಕನ್ನಡ ರಾಜ್ಯೋತ್ಸವ ಹಾಗೂ ಬೆಳಕಿನ ಹಬ್ಬ ದೀಪಾವಳಿಯ ಶುಭಾಶಯಗಳು

ಬೆಳಕಿನಸ್ತಿತ್ವವನೆ
ಅಣಕಿಸುವ ಕತ್ತಲೆಗೆ
ತಕ್ಕ ಉತ್ತರವಲ್ಲಿ ಕೇಳಿಬರಲಿ !
ದೀಪಾವಳಿಯ ಜ್ಯೋತಿ
ಅಭಯ ಹಸ್ತವನೆತ್ತಿ
ಎಲ್ಲರಿಗೆ ಎಲ್ಲಕ್ಕೆ ಶುಭಕೋರಲಿ !

– ಕೆ.ಎಸ್. ನರಸಿಂಹಸ್ವಾಮಿ



ಸೌಹಾರ್ದ ಸಹಕಾರಿಗಳ ಸಂಖ್ಯೆ : 4432

ಇ-ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 1188



ಬಿ.ಹೆಚ್. ಕೃಷ್ಣಾರೆಡ್ಡಿ

> ಆದಾಯ ತೆರಿಗೆ ಇಲಾಖೆಯ ಎಲ್ಲ ಪ್ರಮುಖ ಅಧಿಕಾರಿಗಳನ್ನು ಭೇಟಿ ಮಾಡಿ ವಿವರಿಸಲಾಗಿದೆ. ಸಹಕಾರಿಗಳ ನಿಬಂಧಕರಿಂದ ಸೌಹಾರ್ದ ಸಹಕಾರಿಗಳು ಸಹಕಾರಿ ಸಂಸ್ಥೆಗಳು ಎಂಬುದರ ಬಗ್ಗೆ ಪತ್ರವನ್ನು ಆದಾಯ ತೆರಿಗೆ ಇಲಾಖೆಗೆ ನೀಡಲಾಗಿದೆ. ಸೌಹಾರ್ದ ಸಹಕಾರಿ ಕಾಯ್ದೆಗೆ ಅಗತ್ಯ ತಿದ್ದುಪಡಿ ಮಾಡಿಸಲು ಮಾನ್ಯ ಸಹಕಾರ ಸಚಿವರ ಗಮನಕ್ಕೆ ತರಲಾಗಿದೆ.

# ಆದಾಯ ತೆರಿಗೆ ಇಲಾಖೆಯ ತೊಂದರೆಗಳಿಂದ ಸೌಹಾರ್ದ ಸಹಕಾರಿಗಳಿಗೆ ಶಾಶ್ವತ ಪರಿಹಾರಕ್ಕೆ ಸಂಯುಕ್ತ ಸಹಕಾರಿಯ ಆದ್ಯತೆ

**ಆತ್ಮೀಯ ಸಹಕಾರಿ ಬಂಧುಗಳೇ,**

ಸಮಸ್ತ ಸಹಕಾರಿ ಬಂಧುಗಳಿಗೆ ದೀಪಗಳ ಹಬ್ಬ ದೀಪಾವಳಿಯ ಹಾರ್ದಿಕ ಶುಭಾಶಯಗಳು. ದೀಪಾವಳಿ ಹಬ್ಬದ ಸಂಭ್ರಮದ ಸಡಗರದ ಆಚರಣೆಯು ಎಲ್ಲರಲ್ಲಿ ನವಚೈತನ್ಯವನ್ನು ತರಲಿ. ಎಲ್ಲರ ಬಾಳಲ್ಲಿ ಸುಖ, ಶಾಂತಿ, ನೆಮ್ಮದಿ ಇರಲಿ. ವಿಶೇಷವಾಗಿ ಸೌಹಾರ್ದ ಸಹಕಾರಿ ಕ್ಷೇತ್ರದ ತೊಡಕುಗಳ ನಿವಾರಣೆಯಾಗಿ ಸಮಗ್ರ ಅಭಿವೃದ್ಧಿಗೆ ಶ್ರಮಿಸುವಂತಾಗಲಿ ಎಂದು ಹಾರೈಸುತ್ತೇನೆ.

ರಾಜ್ಯದ ಸಹಕಾರಿ ಕ್ಷೇತ್ರದಲ್ಲಿ ವಿಶೇಷವಾಗಿ ಸೌಹಾರ್ದ ಸಹಕಾರಿಗಳಿಗೆ ಆದಾಯ ತೆರಿಗೆ ಇಲಾಖೆಯಿಂದ ನೋಟೀಸುಗಳು ಬರುತ್ತಿರುವುದು, ಟಿ.ಡಿ.ಎಸ್. ಕಡಿತಕ್ಕೆ ವಿವರ ಕೇಳುವುದು ಇತ್ಯಾದಿ ವಿಷಯಗಳು ಸಹಕಾರಿಗಳನ್ನು ಆತಂಕದಲ್ಲಿರಿಸಿವೆ. ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರೂ ಆತಂಕಪಡುವಂತಾಗಿದೆ. ಹೀಗಾಗಿ ಇದಕ್ಕೊಂದು ಶಾಶ್ವತ ಪರಿಹಾರ ಕಂಡುಕೊಳ್ಳಲು ಸಂಯುಕ್ತ ಸಹಕಾರಿಯು ಕ್ರಮವಿಡುತ್ತಿದೆ. ಸೌಹಾರ್ದ ಸಹಕಾರಿಗಳು ಆತಂಕಪಡದೆ ತಮ್ಮ ಸಂಪೂರ್ಣ ಬೆಂಬಲ ನೀಡಲು ಮುಂದಾಗುವುದು ಅವಶ್ಯಕ. ಎಲ್ಲ ಹಂತಗಳಲ್ಲೂ ಅವಶ್ಯಕವಿರುವ ಕ್ರಮಗಳನ್ನು ಸಂಯುಕ್ತ ಸಹಕಾರಿಯು ತೆಗೆದುಕೊಳ್ಳುತ್ತಿದೆ.

ಆದಾಯ ತೆರಿಗೆ ಇಲಾಖೆಯ ಎಲ್ಲ ಪ್ರಮುಖ ಅಧಿಕಾರಿಗಳನ್ನು ಭೇಟಿ ಮಾಡಿ ವಿವರಿಸಲಾಗಿದೆ. ಸಹಕಾರಿಗಳ ನಿಬಂಧಕರಿಂದ ಸೌಹಾರ್ದ ಸಹಕಾರಿಗಳು ಸಹಕಾರಿ ಸಂಸ್ಥೆಗಳು ಎಂಬುದರ ಬಗ್ಗೆ ಪತ್ರವನ್ನು ಆದಾಯ ತೆರಿಗೆ ಇಲಾಖೆಗೆ ನೀಡಲಾಗಿದೆ. ಸೌಹಾರ್ದ ಸಹಕಾರಿ ಕಾಯ್ದೆಗೆ ಅಗತ್ಯ ತಿದ್ದುಪಡಿ ಮಾಡಿಸಲು ಮಾನ್ಯ ಸಹಕಾರ ಸಚಿವರ ಗಮನಕ್ಕೆ ತರಲಾಗಿದೆ. ಮಾನ್ಯ ಸಹಕಾರ ಸಚಿವರು ಅಗತ್ಯ ತಿದ್ದುಪಡಿ ಮಾಡಿಕೊಡಲು ಭರವಸೆ ನೀಡಿದ್ದಾರೆ, ಈ ಎಲ್ಲಾ ವಿವರಗಳನ್ನು ಪರಿಶೀಲಿಸಿದ ಆದಾಯ ತೆರಿಗೆ ಅಧಿಕಾರಿಗಳು ಈ ಗೊಂದಲವನ್ನು ಸರಿಪಡಿಸಿಕೊಳ್ಳುವ ನಿಟ್ಟಿನಲ್ಲಿ ಅಗತ್ಯ ಕ್ರಮವಿಡಲು ಡಿಸೆಂಬರ ವರೆಗೆ ನಮಗೆ ಸಮಯ ನೀಡಿದ್ದಾರೆ. ಅಲ್ಲಿಯ ವರೆಗೆ ಆದಾಯ ತೆರಿಗೆ ಇಲಾಖೆಯಿಂದ ಯಾವುದೆ ತಗಾದೆಗಳನ್ನು ಸ್ಥಗಿತಗೊಳಿಸಲಾಗುವುದು ಎಂದು ತಿಳಿಸಿದ್ದಾರೆ.

ಈ ವಿಷಯದ ಬಗ್ಗೆ ಮಾಹಿತಿ ಇರದೇ ಕೆಲವು ಆದಾಯ ತೆರಿಗೆ ಅಧಿಕಾರಿಗಳು ಒಂದೆರಡು ಸೌಹಾರ್ದ ಸಹಕಾರಿಗಳಿಗೆ ಭೇಟಿ ನೀಡಿ ತಗಾದೆ ಮಾಡಿರುವುದು ಸಂಯುಕ್ತ ಸಹಕಾರಿಯ ಗಮನಕ್ಕೆ ಬಂದಾಗ ಅದರ ಬಗ್ಗೆ ತುರ್ತಾಗಿ ಮೇಲಾಧಿಕಾರಿಗಳೊಡನೆ ಮಾತಾಡಿ ಅವರನ್ನು ಹಿಂದಕ್ಕೆ ಕರೆಯಿಸುವಂತೆ ಕ್ರಮವಿಡಲಾಗಿದೆ. ಈ ಮಧ್ಯೆ ಕೇಂದ್ರದಲ್ಲಿ ಆದಾಯ ತೆರಿಗೆ ಕಾಯ್ದೆಯಲ್ಲಿ ಅಗತ್ಯ ತಿದ್ದುಪಡಿಗಳಿಗಾಗಿ ಮನವಿ ಸಲ್ಲಿಸಲಾಗಿದೆ. ಸಂಬಂಧಿಸಿದ ಗಣ್ಯರ ಜೊತೆಗೆ ಚರ್ಚಿಸಲಾಗಿದೆ. ಆದಾಯ ತೆರಿಗೆ ತೊಂದರೆಗಳಿಂದ ಸೌಹಾರ್ದ ಸಹಕಾರಿಗಳಿಗೆ ಶಾಶ್ವತ ಪರಿಹಾರ ಒದಗಿಸುವಲ್ಲಿ ಸಂಯುಕ್ತ ಸಹಕಾರಿಯು ತೆಗೆದುಕೊಳ್ಳುತ್ತಿರುವ ಕ್ರಮಗಳ ಬಗ್ಗೆ ಸೌಹಾರ್ದ ಸಹಕಾರಿಗಳಿಗೆ ನಿರಂತರ ಮಾಹಿತಿಯನ್ನು ಒದಗಿಸಲಾಗುವುದು. ನಿಮ್ಮ ಬೆಂಬಲ ಹಾಗೂ ಪ್ರೋತ್ಸಾಹ ನಿರಂತರವಾಗಿರಲಿ.

ಸ್ವಾಭಿಮಾನಿ ಸಹಕಾರಿ
ಸಂಪಾದಕ ಮಂಡಳಿ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ. ಪಾಟೀಲ್
ಸಂಪಾದಕರು

ಶ್ರೀ ವಿ.ಜೆ.ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾಣ ಭವನ", ಡಾ.ರಾಜಕುಮಾರ್ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ,
ಬೆಂಗಳೂರು-560010.
ದೂರವಾಣಿ/ ಫ್ಯಾಕ್ಸ್ :
080-23378375-80, 23474408, 23573291
ಇ-ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

## ಒಳಪುಟಗಳಲ್ಲಿ . . .

ಸಂಯುಕ್ತ ಸಹಕಾರಿ ಸಮಾಚಾರಗಳು................................................................... 5-16
ಸಹಕಾರ ಚುನಾವಣಾ ಪ್ರಾಧಿಕಾರದ ಅಧಿಸೂಚನೆ .........................................................18-29
ಸೌಹಾರ್ದ ಸಹಕಾರಿಗಳ ಸಮಾಚಾರಗಳು...30-37
ಲೇಖನ .............................................. 38
ಆರ್‌ಬಿಐ ನ್ಯೂಸ್.................................39-40

# ಸಂಪಾದಕೀಯ

## ಆದಾಯ ತೆರಿಗೆ ಇಲಾಖೆಯ ನಿಲುವು ಅಸಂವಿಧಾನಿಕ: ಸಹಕಾರಿಗಳು ಆತಂಕ ಪಡುವ ಅಗತ್ಯವಿಲ್ಲ

ಕಳೆದ ಹಲವಾರು ವರ್ಷಗಳಿಂದ ರಾಜ್ಯದ ವಿಶೇಷವಾಗಿ ಸೌಹಾರ್ದ ಸಹಕಾರಿಗಳಿಗೆ ಆದಾಯ ತೆರಿಗೆ ಇಲಾಖೆಯ ತಗಾದೆ ಸಹಕಾರಿಗಳಲ್ಲಿ ಸಹಕಾರ ಕ್ಷೇತ್ರದ ಬೆಳವಣಿಗೆಯ ಬಗ್ಗೆ ಆತಂಕವನ್ನುಂಟುಮಾಡಿದೆ. ಆದಾಯ ತೆರಿಗೆ ಕಾಯ್ದೆ ಸಮಗ್ರ ದೇಶಕ್ಕೆ ಸಂಬಂಧಿಸಿದ ಕಾಯ್ದೆ. ಆದರೆ ಅದು ಕರ್ನಾಟಕದ ಸೌಹಾರ್ದ ಸಹಕಾರಿಗಳಿಗೆ ಅನಗತ್ಯ ಆತಂಕವನ್ನುಂಟುಮಾಡುತ್ತಿರುವುದು ಗಮನಾರ್ಹ. ಈ ಆತಂಕ ನಿವಾರಣೆಗೆ ಅಗತ್ಯ ಕ್ರಮವಿಡುವುದು ಸದ್ಯದ ಅವಶ್ಯಕತೆ.

ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ಸೌಹಾರ್ದ ಸಹಕಾರಿಗಳಿಗೆ ಭೇಟಿ ನೀಡುವುದು ತೆರಿಗೆ ಪಾವತಿಸುವಂತೆ ನೋಟೀಸು ನೀಡುವುದು ಸೌಹಾರ್ದ ಸಹಕಾರಿಗಳು ಆದಾಯ ತೆರಿಗೆ ಇಲಾಖೆಯ ಮೇಲ್ಮನವಿ ಪ್ರಾಧಿಕಾರಕ್ಕೆ ಲೆಕ್ಕಪರಿಶೋಧಕರ ಮೂಲಕ ಮನವಿ ಸಲ್ಲಿಸುವುದು. ಮೇಲ್ಮನವಿ ಪ್ರಾಧಿಕಾರಗಳು ಸೌಹಾರ್ದ ಸಹಕಾರಿಗಳ ಪರವಾಗಿ ತೀರ್ಪು ನೀಡುವುದು. ಆದಾಯ ತೆರಿಗೆ ಪಾವತಿಗೆ ವಿನಾಯಿತಿ ಪಡೆಯುವುದು ನಡೆದು ಬರುತ್ತಿದೆ. ಹೀಗೆ ಹಲವಾರು ಪ್ರಮೇಯಗಳಲ್ಲಿ ಆಗಿರುವ ಮೇಲ್ಮನವಿ ಪ್ರಾಧಿಕಾರದ ತೀರ್ಪುಗಳನ್ನು ಸಂಬಂಧಿಸಿದ ತೆರಿಗೆ ಅಧಿಕಾರಿಗಳ ಗಮನಕ್ಕೆ ತಂದಾಗ್ಯೂ ಅದನ್ನು ಗಮನಿಸಿಯೂ ಮತ್ತೆ ಮತ್ತೆ ಸಹಕಾರಿ ಸಂಸ್ಥೆಗಳಿಗೆ ನೋಟೀಸು ನೀಡುವುದು ತಗಾದೆ ಮಾಡುವ ನಿಲುವು ಖಂಡನಾರ್ಹ.

ಮೇಲ್ಮನವಿ ಪ್ರಾಧಿಕಾರದಲ್ಲಿ ಸೌಹಾರ್ದ ಸಹಕಾರಿಗಳ ಪರವಾಗಿ ನೀಡಿರುವ ತೀರ್ಪುಗಳು ಇದೂ ಸಾಲದೆಂಬಂತೆ ಈಗ ಸೌಹಾರ್ದ ಸಹಕಾರಿಗಳು ಸಹಕಾರಿ ಸಂಸ್ಥೆಗಳೇ ಎಂಬ ಪ್ರಶ್ನೆಯನ್ನು ಹುಟ್ಟುಹಾಕಿರುವುದು ವಿಪರ್ಯಾಸ. ರಾಷ್ಟ್ರಪತಿಯವರ ಅಂಕಿತ ಪಡೆದು ಜಾರಿಗೆ ಬಂದಿರುವ ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ಶಾಸನ ಬದ್ಧವಾಗಿ ನೊಂದಣೆಯಾಗಿ ಕಾರ್ಯನಿರ್ವಹಿಸುತ್ತಿರುವ ಸೌಹಾರ್ದ ಸಹಕಾರಿಗಳು ಸಹಕಾರಿ ಸಂಸ್ಥೆಗಳೇ ಅಲ್ಲ ಎಂಬ ನಿಲುವನ್ನು ತಳೆದಿರುವ ಆದಾಯ ಇಲಾಖೆಯ ಟ್ರಿಬ್ಯುನಲ್‌ನವರು ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಆಘಾತವನ್ನುಂಟುಮಾಡಿದೆ. ಸೌಹಾರ್ದ ಸಹಕಾರಿಗಳು ಸಹಕಾರಿ ಸಂಸ್ಥೆಗಳು ಎಂದು ಈ ಟ್ರಿಬ್ಯುನಲ್ ಅಧಿಕಾರಿಗಳಿಗೆ ಮನವರಿಕೆಯಾಗುವಂತೆ ಅಗತ್ಯ ಕ್ರಮವನ್ನು ಸಂಯುಕ್ತ ಸಹಕಾರಿಯಿಂದ ಮಾಡಿದೆ. ಇದಕ್ಕೆ ಶಾಶ್ವತ ಪರಿಹಾರಕ್ಕಾಗಿ ಸದರಿ ಸೌಹಾರ್ದ ಸಹಕಾರಿ ಕಾಯ್ದೆಯನ್ನು ತಿದ್ದುಪಡಿ ಮಾಡಲು ಪ್ರಯತ್ನಿಸಲಾಗುತ್ತಿದೆ ಹಾಗೂ ತಕ್ಷಣ ಪರಿಹಾರಕ್ಕಾಗಿ ಮಾನ್ಯ ಉಚ್ಚನ್ಯಾಯಾಲಯದ ಮೊರೆ ಹೋಗಲಾಗುತ್ತಿದೆ. ಅದ್ದರಿಂದ ಯಾವುದೇ ಸೌಹಾರ್ದ ಸಹಕಾರಿಗಳು ಆತಂಕ ಪಡುವ ಅಗತ್ಯವಿಲ್ಲ.

## "ತಾಳ್ಮೆ, ಆತ್ಮವಿಶ್ವಾಸ ಯಶಸ್ಸಿನ ಮೂಲ"

ಆರು ಮುನಿದು ನಮ್ಮನೇನ ಮಾಡುವರು?
ಊರು ಮುನಿದು ನಮ್ಮನೇಂತು ಮಾಡುವರು?
ನಮ್ಮ ಕುವರಂಗೆ ಕೂಸ ಕೊಡಬೇಡ
ಆನೆಯ ಮೇಲೆ ಹೋಹನ ಶ್ವಾನ ಕಚ್ಚಬಲ್ಲುದೆ?
ನಮ್ಮ ಕೂಡಲ ಸಂಗನುಳ್ಳನ್ನಕ್ಕ॥

ಎಲ್ಲಿಯವರೆಗೆ ಕೂಡಲಸಂಗನ್ನು ನಂಬಿಕೊಡಿರುವೆವೋ ಅಲ್ಲಿಯವರೆಗೆ ನಮ್ಮನ್ನು ಯಾರೂ ಏನೂ ಮಾಡಲಾರರು. ಆನೆಯ ಮೇಲೆ ಹೋಗುತ್ತಿರುವವರನ್ನು ಹೇಗೆ ಶ್ವಾನವು ಕಚ್ಚಲಾರದೋ ಹಾಗೆ ಶಿವಪಥದಲ್ಲಿ ತಾಳ್ಮೆವಹಿಸಿ ಆತ್ಮವಿಶ್ವಾಸದಿಂದ ಹೆಜ್ಜೆಗಳನ್ನಿರಿಸಿ ಸಾಗುತ್ತಿರುವವರನ್ನು ಇಡೀ ಊರಿಗೆ ಊರೇ ಮುನಿದು ಕೆಂಡವಾದರೂ ಯಾವುದೇ ಅಪಾಯ ಕಾಡಲಾರದು. ಹೀಗೆ 12ನೇ ಶತಮಾನದ ಬಸಣ್ಣನವರು ನಮ್ಮಲ್ಲಿರುವ ತಾಳ್ಮೆಯೇ ಯಶಸ್ಸಿನ ಹಾದಿ ಎಂದು ತಿಳಿಸಿದ್ದಾರೆ.

ನಮಗೆ ಅನ್ನಿಸುತ್ತದೆ ಯಾರಾದರೂ ನಮ್ಮ ಅರ್ಹತೆಯ ಬಗ್ಗೆ ಸಂದೇಹಪಟ್ಟರೆ ಬೇಸರ ಮಾಡಿಕೊಳ್ಳಬಾರದು ಯಾಕೆಂದರೆ ಚಿನ್ನದ ಪರಿಶುದ್ಧತೆಯ ಬಗ್ಗೆ ಸಂದೇಹಿಸುತ್ತಾರೆಯೇ ಹೊರತು ಕಬ್ಬಿಣದಲ್ಲ. ನಾವು ಮಾಡುವ ಉದ್ಯೋಗ ಅಥವಾ ಕೆಲಸ ಇತರರಲ್ಲಿ ಬೆಳಕು ಚೆಲ್ಲುವ ಮತ್ತು ಒಂದು ಉತ್ತಮ ಪ್ರಪಂಚವನ್ನು ಕಟ್ಟುವ ಒಂದು ಉತ್ತಮ ಅವಕಾಶ ನಮ್ಮದಾಗುವವರೆಗೂ ತಾಳ್ಮೆ ಬೆಳೆಸಿಕೊಳ್ಳುವುದು ಉತ್ತಮ.

ಒಬ್ಬ ತಾಯಿ ತನ್ನ ಇಬ್ಬರು ಮಕ್ಕಳಿಗೆ ಒಂದೇ ಕಂಪನಿಯ ಎರಡು ಬಣ್ಣಗಳ ಪೆನ್ಸಿಲ್‌ನನ್ನು ಕೊಡುತ್ತಾರೆ ಆದರೆ ಅವರಿಬ್ಬರಲ್ಲಿ ಜಗಳ ಉಂಟಾಗಿ ತಮ್ಮ ಅಕ್ಕನಲ್ಲಿ ಪೆನ್ಸಿಲ್‌ನನ್ನು ಕಿತ್ತುಕೊಳ್ಳುವ ಬರದಲ್ಲಿ ಓಡಿ ಕಾಲಿಗೆ ಗಾಯವಾಗುತ್ತದೆ. ಅದರ ಚಿಕಿತ್ಸೆಗಾಗಿ ಆಸ್ಪತ್ರೆಯವರೆಗೆ ಬರುವಂತಾಗುತ್ತದೆ. ಇದೆಲ್ಲ ನೋಡಿ ತಾಯಿ ಕಣ್ಣೀರಿಡುವಂತಾಗುತ್ತದೆ. ಅವನ ಅಕ್ಕ ಇದನೆಲ್ಲ ಒಂದು ಕಡೆ ನಿಂತು ಮೌನವಾಗಿ ನೋಡುತ್ತಿದ್ದಳು. ಇದಾದ ಕೆಲ ದಿನ ಶಾಲೆಯಲ್ಲಿ ಇಬ್ಬರಿಗೂ ಪ್ರಾಜೆಕ್ಟ್‌ಗಾಗಿ ಬಣ್ಣ ಹಾಳೆಗಳನ್ನು ತರಲು ಹೇಳಿದ್ದರು. ತೆಗೆದುಕೊಳ್ಳಿ ಮಕ್ಕಳ ಎಂದು ತಾಯಿ ಮುಂದೆ ಇಟ್ಟಾಗ ಅಕ್ಕ ಹಿಂದೆ ನಡೆದ



## ಜ್ಞಾನ ಜ್ಯೋತಿ

ಘಟನೆಯನ್ನು ನೆನೆದು ಮೊದಲು ತಮ್ಮ ತೆಗದುಕೊಳ್ಳಲಿ ನಂತರ ನಾನು ತೆಗೆದುಕೊಳ್ಳುತ್ತೇನೆ ಎಂದು ಹೇಳುತ್ತಾಳೆ. ಇದನ್ನು ಕೇಳಿ ತಾಯಿ, ನನ್ನ ಮಗಳು ತಾಳ್ಮೆ ಹಾಗೂ ತಮ್ಮನ ವಿಶ್ವಾಸ, ಪ್ರೀತಿಯನ್ನು ಗೆಲ್ಲುವಲ್ಲಿ ಯಶಸ್ಸು ಪಡೆಯುವುದು ತಾನಾಗಿಯೇ ಕಲಿತ್ತಿದ್ದಾಳೆ ಎಂದು ತಾಯಿ ಆನಂದ ಭಾಷ್ಪ ಸುರಿಸಿದಳು. ಇದೇ ತಾಳ್ಮೆ.

ವರ್ಷಗಟ್ಟಲೇ ಶ್ರಮಿಸಿ ಬಲ್ಬ್ ಕಂಡು ಹಿಡಿದಿದ್ದ ಥಾಮಸ್ ಅಲ್ವಾ ಎಡಿಸನ್ ಅದನ್ನು ಹೋಲ್ಡರ್‌ಗೆ ಸಿಕ್ಕಿಸಬೇಕಿತ್ತು. ಹೋಲ್ಡರ್ ಇದ್ದುದು ಮಹಡಿಯ ಮೇಲೆ "ಹೋಗಿ ಅದಕ್ಕೆ ಸಿಕ್ಕಿಸಿ ಬಾ ಎಂದು ತನ್ನ ಸಹಾಯಕನೊಬ್ಬನಿಗೆ ಹೇಳಿದ ಎಡಿಸನ್ ಹುಡುಗ ಎಷ್ಟು ನರ್ವಸ್ ಆಗಿದ್ದನೆಂದರೆ ಮೆಟ್ಟಿಲು ಹತ್ತುವುದರೊಳಗಾಗಿ ಅವನ ಕೈ ನಡುಗಿ ಆಗಷ್ಟೇ ಕಷ್ಟಪಟ್ಟು ತಯಾರಿಸದ್ದ ಬಲ್ಬ್ ಬಿದ್ದು ಒಡೆದುಹೋಯಿತು."

ಎಡಿಸನ್ ಸಿಟ್ಟಗಲಿಲ್ಲ ಮತ್ತೊಂದು ಬಲ್ಬ್ ತಯಾರಿಸಿದ ಅದಕ್ಕೆ ಪೂರ್ತಿ ಇಪ್ಪಾತ್ನಾಲ್ಕು ತಾಸು ಹಿಡಿದವು. ಅವನ ಟೀಮಿನ ಅಷ್ಟೂ ಸಹಾಯಕರು ಅದಕ್ಕಾಗಿ ದುಡಿದಿದ್ದರು. ಎಲ್ಲಾ ಆದ ಮೇಲೆ ಮತ್ತೆ ಅದೇ ಹುಡುಗನ್ನು ಕರೆದು ಈ ಸಲವೂ ನೀನೇ ಸಿಕ್ಕಿಸಿ ಬಾ ಎಂದ ಉಳಿದ ಸಹಾಯಕರು ಇರಸು ಮುರಿಸಿಗೆ ಒಳಗಾದರು. ಈ ಹುಡುಗ ಮತ್ತೆ ಬಲ್ಬ್ ಒಡೆದರೆ, ಅದನ್ನು ತಯಾರಿಸಲು ಮತ್ತೆ 24 ತಾಸು ಬೇಕು. ಎಡಿಸನ್ ಯಾಕಿಂತ ರಿಸ್ಕು ತೆಗೆದುಕೊಳ್ಳುತ್ತಿದ್ದಾನೆ ಅದಕ್ಕೆ ಎಡಿಸನ್ ಹೇಳಿದ ನೋಡಿ ಅಂಥ ಸಾವಿರ ಬಲ್ಬ್‌ಗಳನ್ನು ಸಾವಿರ ದಿನ ಕೆಲಸ ಮಾಡಿ ತಯಾರಿಸಬಹುದು ಆದರೆ ಆ ಹುಡುಗನ ತಾಳ್ಮೆಯಿಂದ ಮಾಡುವ ಅಭ್ಯಾಸ ಹಾಗೂ ಆತ್ಮವಿಶ್ವಾಸ ನಾಶವಾಗಿ ಬಿಟ್ಟರೆ ಅದನ್ನು ಮತ್ತೆ ತುಂಬಿಕೊಡುವುದು ಸುಲಭವಲ್ಲ ಎಂದು ಹೇಳಿದರು.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಬೆಳಗಾವಿ ವಿಭಾಗದಿಂದ 3381 ಮತ್ತು ಬೆಂಗಳೂರು, ಮೈಸೂರು ಹಾಗೂ ಕಲಬುರಗಿ ವಿಭಾಗಗಳಿಂದ 2263 ಪ್ರಕರಣಗಳು ಸೇರಿದಂತೆಒಟ್ಟು 5644 ದಾವಾ ಪ್ರಕರಣಗಳು ದಾಖಲಾಗಿವೆ. ಇವುಗಳ ಪೈಕಿ 2968 ಪ್ರಕರಣಗಳು ಇತ್ಯರ್ಥಗೊಂಡಿವೆ.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 1139 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ ಪ್ರಕರಣಗಳು ಇತ್ಯರ್ಥಗೊಂಡಿದೆ. 170 ಪ್ರಕರಣಗಳು ಪ್ರಗತಿಯಲ್ಲಿದ್ದು, 177 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 765 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು, 57 ಪ್ರಕರಣಗಳು ಇತ್ಯರ್ಥಗೊಂಡಿವೆ.

# ಸಂಯುಕ್ತ ಸಹಕಾರಿಯ ನಿರ್ದೇಶಕರ ಆಡಳಿತ ಪರಿಣಿತಿ ತರಬೇತಿ






ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸದಸ್ಯರಿಗೆ ಕೇರಳ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ತರಬೇತಿ ಕೇಂದ್ರದವರು ಏರ್ಪಡಿಸಿದ ತರಬೇತಿ/ಅಧ್ಯಯನ ಪ್ರವಾಸ ದಿನಾಂಕ : 26.10.2018 ರಿಂದ 30.10.2018 ರವರೆಗೆ ಅಂಡಮಾನಿನ ಪೋರ್ಟ್‌ಬ್ಲೇರ್ ಎ.ಟಿ. ವಿಲ್ಲಾದಲ್ಲಿ ಯಶಸ್ವಿಯಾಗಿ ನಡೆಯಿತು.

ದಿನಾಂಕ : 26.1.2018 ರಂದು ಮಧ್ಯಾಹ್ನ ಅಂಡಮಾನ್ ನಿಕೋಬಾರ್ ಅಪೆಕ್ಸ್ ಬ್ಯಾಂಕಿಗೆ ಭೇಟಿ ನೀಡಲಾಯಿತು. ಭೇಟಿ ಸಂದರ್ಭದಲ್ಲಿ ಬ್ಯಾಂಕಿನ ಉಪಾಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು, ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದು ಬ್ಯಾಂಕಿನ ಬೆಳವಣಿಗೆ ಕುರಿತು ವಿವರಿಸಿದರು. ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರೊಡನೆ ಚರ್ಚೆಯಲ್ಲಿ ಭಾಗವಹಿಸಿದರು. ನಂತರ ಅಂಡಮಾನಿನ ಸೆಲ್ಯೂಲರ್ ಜೈಲಿನ ಲೈಟ್ ಮತ್ತು ಸೌಂಡ್ ಪ್ರದರ್ಶನವನ್ನು ವೀಕ್ಷಿಸಲಾಯಿತು.

ಎರಡನೇ ದಿನ (27.10.2018)ದಂದು ಬೆಳಿಗ್ಗೆ ಹ್ಯಾವ್‌ಲಾಕ್ ದ್ವೀಪಕ್ಕೆ ಭೇಟಿ ನೀಡಲಾಯಿತು. ಮಧ್ಯಾಹ್ನದ ನಂತರ ಕೇರಳದ ಕೃಷಿ ಸಹಕಾರಿಗಳ ಸಿಬ್ಬಂದಿ ತರಬೇತಿ ಸಂಸ್ಥೆಯ ನಿರ್ದೇಶಕರಾದ ಶ್ರೀ ಪರಂಜ್ಯೋತಿರವರು ಸುಸ್ಥಿರ ಅಭಿವೃದ್ಧಿ (sustainable development) ಕುರಿತು ಉಪನ್ಯಾಸ ನೀಡಿದರು.

ಮೂರನೇ ದಿನ (28.10.2018)ದಂದು ಬೆಳಿಗ್ಗೆ ಅಂಡಮಾನಿನ ಆದಿವಾಸಿ ಜಾರವಾ ಜನಾಂಗವನ್ನು ವೀಕ್ಷಿಸಿ, ನಂತರ ಸುಣ್ಣದ ಕಲ್ಲಿನ ಗುಹೆಯನ್ನು ವೀಕ್ಷಿಸಲಾಯಿತು. ಸಂಜೆ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರು ಹಾಗೂ ನಿವೃತ್ತ ಅಪರ ನಿಬಂಧಕರಾದ ಶ್ರೀ ಸಿ.ಎನ್. ಪರಶಿವಮೂರ್ತಿಯವರು ಸಂಯುಕ್ತ ಸಹಕಾರಿಯ ನಿರ್ದೇಶಕರ ಕರ್ತವ್ಯಗಳ ಕುರಿತು ಉಪನ್ಯಾಸ ನೀಡಿದರು.

ನಾಲ್ಕನೇ ದಿನ (29.10.2018)ದಂದು ಬೆಳಿಗ್ಗೆ ನಾರ್ತ್ ಬೇ ದ್ವೀಪ ಮತ್ತು ರೋಸ್ ದ್ವೀಪಗಳಿಗೆ ಭೇಟಿ ನೀಡಲಾಯಿತು. ರೋಸ್ ದ್ವೀಪದಲ್ಲಿ ಬ್ರಿಟಿಷರ ಆಡಳಿತ ಕಛೇರಿಗಳನ್ನು ವೀಕ್ಷಿಸಲಾಯಿತು.ಮಧ್ಯಾಹ್ನ ಶ್ರೀ ಸಿ.ಎನ್. ಪರಶಿವಮೂರ್ತಿಯವರು ಸಹಕಾರ ಚಳುವಳಿಯಲ್ಲಿ ಪ್ರಮುಖ ಬೆಳವಣಿಗೆಗಳ ಕುರಿತು ಉಪನ್ಯಾಸ ನೀಡಿದರು. ಆ ನಂತರ ಸಂಯುಕ್ತ ಸಹಕಾರಿಯ ಮುಂದಿನ ಹತ್ತು ವರ್ಷಗಳ ಕಾರ್ಯಯೋಜನೆ ಕುರಿತು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿರವರ ಅಧ್ಯಕ್ಷತೆಯಲ್ಲಿ ಚರ್ಚಿಸಲಾಯಿತು.

ಐದನೇ ದಿನ (30.10.2018)ದಂದು ಬೆಳಿಗ್ಗೆ ಅಂಡಮಾನಿನ ಸೆಲ್ಯೂಲರ್ ಜೈಲಿಗೆ ಭೇಟಿ ನೀಡಲಾಯಿತು. ಜೈಲಿನ ರಚನೆ, ಅಲ್ಲಿನ ಖೈದಿಗಳು, ಸ್ವಾತಂತ್ರ ಚಳುವಳಿಯ ಜೊತೆ ಸಂಬಂಧ ಇತ್ಯಾದಿ ವಿಷಯಗಳ ಕುರಿತು ಮಾಹಿತಿ ಪಡೆದುಕೊಳ್ಳಲಾಯಿತು.

ಅಧ್ಯಯನ ಪ್ರವಾಸದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರುಗಳು, ವ್ಯವಸ್ಥಾಪಕ ನಿರ್ದೇಶಕರು, ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರಾದ ಶ್ರೀ ಸಿ.ಎನ್ ಪರಶಿವಮೂರ್ತಿಯವರು ಮತ್ತು ಉಪಪ್ರಧಾನ ವ್ಯವಸ್ಥಾಪಕ ಶ್ರೀ ನಾರಾಯಣ ಹೆಗಡೆ ರವರುಗಳು ಭಾಗವಹಿಸಿದ್ದರು.



**ಬೆಂಗಳೂರು :** ಸಂಯುಕ್ತ ಸಹಕಾರಿ ಅಡಳಿತ ಮಂಡಳಿ ನಿರ್ದೇಶಕರಿಂದ ವಿಧಾನ ಪರಿಷತ್ ಸದಸ್ಯರು ಹಾಗೂ ಯಶಸ್ವಿನಿ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ವೇಣುಗೋಪಾಲ ರವರಿಗೆ ಸನ್ಮಾನ

**ಬೆಂಗಳೂರು :** ಸಂಯುಕ್ತ ಸಹಕಾರಿ ಅಡಳಿತ ಮಂಡಳಿ ನಿರ್ದೇಶಕರಿಂದ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು ಇದರ ಅಧ್ಯಕ್ಷರಾದ ಶ್ರೀ ಗಂಗಣ್ಣ ರವರಿಗೆ ಸನ್ಮಾನ.



# 65ನೇ ಅಖಿಲ ಭಾರತ ಸಹಕಾರ ಸಪ್ತಾಹ – 2018

**ಸಪ್ತಾಹದ ಧ್ಯೇಯ: "ಗ್ರಾಮೀಣ ಸಮೃದ್ಧಿಗಾಗಿ ಸಹಕಾರ ಸಂಸ್ಥೆಗಳ ಮೂಲಕ ಉತ್ತಮ ಆಡಳಿತ ಮತ್ತು ಸರ್ವರನ್ನೊಳಗೊಂಡ (ಅಂತರ್ಗತ) ಬೆಳವಣಿಗೆ"**

**"Inclusive Growth and Good Governance through cooperatives for Rural Prosperity"**

| 7 ದಿನಗಳ ಆಚರಣೆಯ ಶೀರ್ಷಿಕೆಗಳು | | | |
|---|---|---|---|
| ದಿನಾಂಕ | ವಿವರಗಳು | ನೇತೃತ್ವ | ಸ್ಥಳ |
| 14–11–2018 | ಸಹಕಾರಿ ಮಾರಾಟ, ಸಂಸ್ಕರಣ ಮತ್ತು ಶೇಖರಣೆ | ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು ಹಾಗೂ ಸ್ಥಳೀಯ ಸಹಕಾರ ಸಂಸ್ಥೆಗಳು. | ಬೀದರ |
| 15–11–2018 | ಸಾವಯವ ಕೃಷಿ ಮತ್ತು ಶೂನ್ಯ ಬಂಡವಾಳದ ಕೃಷಿಯಲ್ಲಿ ಸಹಕಾರ ಸಂಸ್ಥೆಗಳ ಪ್ರಮುಖ ಪಾತ್ರ | ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ಹಾಗೂ ಸ್ಥಳೀಯ ಸಹಕಾರ ಸಂಸ್ಥೆಗಳು. | ಶಿರಸಿ, ಉತ್ತರ ಕನ್ನಡ |
| 16–11–2018 | ಸಹಕಾರ ಸಂಸ್ಥೆಗಳ ಮೂಲಕ ಮೌಲ್ಯವರ್ಧನೆ ಮತ್ತು ಬ್ರಾಂಡ್ ನಿರ್ಮಾಣ | ಕರ್ನಾಟಕ ಹಾಲು ಮಹಾಮಂಡಳ ನಿ., ಬೆಂಗಳೂರು ಹಾಗೂ ಸ್ಥಳೀಯ ಸಹಕಾರ ಸಂಸ್ಥೆಗಳು. | ರಾಯಚೂರು |
| 17–11–2018 | ಸಾರ್ವಜನಿಕ, ಖಾಸಗಿ, ಸಹಕಾರಿ ಸಹಭಾಗಿತ್ವ ನಿರ್ಮಾಣ | ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ., ಹಾಗೂ ಸ್ಥಳೀಯ ಸಹಕಾರ ಸಂಸ್ಥೆಗಳು. | ಮೈಸೂರು |
| 18–11–2018 | ಸಹಕಾರ ಸಂಸ್ಥೆಗಳ ಮೂಲಕ ಸರಕಾರಿ ಯೋಜನೆಗಳು ಮತ್ತು ಆದಾಯೋತ್ಪನ್ನ ಕುರಿತು ಜಾಗೃತಿ ಮೂಡಿಸುವುದು. | ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಸಂಘಗಳ ಮಹಾಮಂಡಳ ನಿ., ಹಾಗೂ ಸ್ಥಳೀಯ ಸಹಕಾರ ಸಂಸ್ಥೆಗಳು. | ಹಾವೇರಿ |
| 19–11–2018 | ಯುವಜನ, ಮಹಿಳಾ ಮತ್ತು ಅಬಲವರ್ಗಕ್ಕಾಗಿ ಸಹಕಾರ ಸಂಸ್ಥೆಗಳು | ಕರ್ನಾಟಕ ರಾಜ್ಯ ಎಣ್ಣೆ ಬೀಜ ಸಹಕಾರ ಸಂಘಗಳ ಮಹಾಮಂಡಳ ನಿ., ಕರ್ನಾಟಕ ರಾಜ್ಯ ವಸತಿ ಮಹಾಮಂಡಳ ನಿ., ಹಾಗೂ ಸ್ಥಳೀಯ ಸಹಕಾರ ಸಂಸ್ಥೆಗಳು. | ಚಿತ್ರದುರ್ಗ |
| 20–11–2018 | ಸಹಕಾರ ಸಂಸ್ಥೆಗಳ ಮೂಲಕ ಕೌಶಲ್ಯ, ತಾಂತ್ರಿಕತೆ ವೃದ್ಧಿಪಡಿಸುವುದು. | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಇದರ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ ಬೆಂಗಳೂರು, ಕರ್ನಾಟಕ ರಾಜ್ಯ ಉಣ್ಣೆ ಕೈಮಗ್ಗ ನೇಕಾರರ ಸಹಕಾರ ಮಹಾಮಂಡಳ ನಿ, ಕರ್ನಾಟಕ ರಾಜ್ಯ ಕುಕ್ಕುಟ ಸಹಕಾರ ಮಹಾಮಂಡಳ ನಿ, ಕರ್ನಾಟಕ ರಾಜ್ಯ ನೂಲಿನ ಗಿರಣಿಗಳ ಸಹಕಾರ ಮಹಾಮಂಡಳ ನಿ ಬೆಂಗಳೂರು, ಹಾಗೂ ಸ್ಥಳೀಯ ಸಹಕಾರ ಸಂಸ್ಥೆಗಳು. | ಶಿವಮೊಗ್ಗ |

## ಸೌಹಾರ್ದ ಸಹಕಾರಿಗಳಲ್ಲಿ ಮನವಿ

ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ಸಹಕಾರ ಸಪ್ತಾಹವನ್ನು ಅರ್ಥಪೂರ್ಣವಾಗಿ ಆಚರಿಸಲು ಕ್ರಮವಿಡುವುದು. ಈ ದಿನಗಳಲ್ಲಿ ಸಹಕಾರದ ಸಪ್ತ ವರ್ಣದ ಧ್ವಜವನ್ನು ಹಾರಿಸುವುದು, ಸಹಕಾರಿಯ ಸದಸ್ಯತ್ವವನ್ನು ಹೆಚ್ಚಿಸುವ ಬಗ್ಗೆ ಅಭಿಯಾನ ಆರಂಭಿಸುವುದು, ಸಾಲ ವಸೂಲಾತಿ ಕಾರ್ಯಕ್ರಮ ಹಮ್ಮಿಕೊಳ್ಳುವುದು, ಸಹಕಾರಿಯಲ್ಲಿ ಹೊಸ ಬಗೆಯ ಕಾರ್ಯಕ್ರಮಗಳನ್ನು ಪ್ರಾರಂಭಿಸುವುದು, ಹಿರಿಯ ಸಹಕಾರಿಗಳನ್ನು ಸನ್ಮಾನಿಸುವುದು, ಶಾಲಾ ಕಾಲೇಜುಗಳಲ್ಲಿ ಸಹಕಾರ ಹಾಗೂ ಜ್ವಲಂತ ವಿಷಯಗಳ ಬಗ್ಗೆ ಪ್ರಬಂಧ ಸ್ಪರ್ಧೆ ಏರ್ಪಡಿಸುವುದು, ಚರ್ಚಾಸ್ಪರ್ಧೆ ಏರ್ಪಡಿಸುವುದು, ಸಭೆ ಸಮಾರಂಭಗಳನ್ನು ಏರ್ಪಡಿಸುವುದು,

ತಜ್ಞರಿಂದ ವಿವಿಧ ವಿಷಯಗಳ ಬಗ್ಗೆ ಉಪನ್ಯಾಸಗಳನ್ನು ಏರ್ಪಡಿಸುವುದು, ಭಿತ್ತಿ ಪತ್ರಗಳ ಮೂಲಕ ಸಾಧನೆಗಳನ್ನು ಪ್ರಚಾರ ಮಾಡುವುದು, ಪ್ರಭಾತ ಫೇರಿ (ಬೆಳಗಿನ ಜಾವದಲ್ಲಿ ಬೀದಿಗಳಲ್ಲಿಸಹಕಾರ ಚಳುವಳಿಯ ಘೋಷಣೆಗಳನ್ನು ಹೇಳುತ್ತಾ ಮೆರವಣಿಗೆ ಬರುವುದು) ಹೀಗೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಹಕಾರ ಕ್ಷೇತ್ರದ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳುವ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ತಿಳಿಸಿದೆ.

# ದಿನಾಂಕ : 14 ನವೆಂಬರ್ 2018 ರಿಂದ 20 ನವೆಂಬರ್ 2018ರವರೆಗೆ ರಾಷ್ಟ್ರದಾದ್ಯಂತ 65ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆಗೆ ಮನವಿ

## 20.11.2018ರ "ಸಹಕಾರ ಸಂಸ್ಥೆಗಳ ಮೂಲಕ ಕೌಶಲ್ಯ ಹಾಗೂ ತಂತ್ರಜ್ಞಾನ ವೃದ್ಧಿಪಡಿಸುವುದು"

### ದಿನಾಚರಣೆಯ ಕಾರ್ಯಚಟುವಟಿಕೆಗಳು

ಸಹಕಾರ ಎಂದರೆ ಸಾಮಾನ್ಯ ಅರ್ಥದಲ್ಲಿ ಒಂದು ಕೆಲಸದಲ್ಲಿ ಒಬ್ಬರಿಗೆ ಇನ್ನೊಬ್ಬರು ನೆರವು ನೀಡುವುದು, ಕೂಡಿ ಕೆಲಸ ಮಾಡುವುದು. ಜಂಟಿಯಾಗಿ ಒಡೆತನ ಮತ್ತು ಅವರ ಸಾಮಾನ್ಯ ಆರ್ಥಿಕ, ಸಮಾಜಿಕ ಮತ್ತು ಸಾಂಸ್ಕೃತಿಕ ಅಗತ್ಯಗಳನ್ನು ಪೂರೈಸುತ್ತದೆ. ನಮ್ಮ ಭಾರತದಲ್ಲಿ ಸಹಕಾರ ಚಳುವಳಿಯು ದೊಡ್ಡದಾಗಿ ಬೆಳೆದಿದೆ. ಸುಮಾರು 8ಲಕ್ಷ ಸಹಕಾರ ಸಂಘಗಳಿವೆ, 25 ಕೋಟಿಗಿಂತ ಹೆಚ್ಚು ಸದಸ್ಯರನ್ನು ಹೊಂದಿದೆ. ಭಾರತದಲ್ಲಿ ಸಾರ್ವಜನಿಕ ವಲಯದ ನಂತರ, ಸಹಕಾರ ಕ್ಷೇತ್ರವೇ 2ನೇ ಅತೀ ದೊಡ್ಡ ಕ್ಷೇತ್ರವಾಗಿದೆ, ಅನೇಕರಿಗೆ ಉದ್ಯೋಗ ಪೂರೈಸುವುದರಲ್ಲಿಯೂ ಪ್ರಮುಖ ಪಾತ್ರ ವಹಿಸಿದೆ. ಕೌಶಲ್ಯ ಅಭಿವೃದ್ಧಿಯಿಂದ ಉದ್ಯೋಗ ಸೃಷ್ಟಿಗೆ ಸಹಾಯವಾಗಿ ಬಡತನದ ನಿರ್ಮೂಲನೆಗೆ ಕಾರಣವಾಗಿದೆ. ಅನೌಪಚಾರಿಕ ಕಾರ್ಯಕರ್ತರು, ಉದ್ಯೋಗ ಕೌಶಲ್ಯದ ಕೊರತೆ, ಕಾರ್ಮಿಕರ ಮಾರುಕಟ್ಟೆಯ ಅಡಿಯಲ್ಲಿ ಉನ್ನತ ಮಟ್ಟದ ಕಾನೂನು ಕ್ರಮಗಳಿಂದ ಭಾರತದಲ್ಲಿನ ಉದ್ಯೋಗ ವಲಯವು ಅದರ ಸೃಷ್ಟಿಯಲ್ಲಿ ಅತೀ ದೊಡ್ಡ ಸವಾಲನ್ನು ಹೊಂದಿದೆ.

ಒಬ್ಬ ವ್ಯಕ್ತಿಯ ಉದ್ಯೋದ ಯಶಸ್ಸಿಗೆ ಅವರ ವೃತ್ತಿ ಶಿಕ್ಷಣ ಮತ್ತು ತರಬೇತಿಯು ಬಹಳ ಮುಖ್ಯವಾಗಿದೆ. ಒಟ್ಟು ಕಾರ್ಮಿಕ ಶಕ್ತಿಯ 93%ರಷ್ಟು ಅಸಂಘಟಿತ ವಲಯದಲ್ಲಿದೆ. ಕೌಶಲ್ಯ ಅಭಿವೃದ್ಧಿಯ ಪ್ರಮುಖ ಉದ್ದೇಶವು ಸಹಕಾರಿ ಕ್ಷೇತ್ರದ ಉದೋಗಿಗಳಿಗೆ ಅಗತ್ಯವಾದ ವಿಷಯಗಳ ಬಗ್ಗೆ ತರಬೇತಿ ನೀಡುವುದು, ವೃತ್ತಿಪರ ಕೌಶಲ್ಯವನ್ನು ಬೆಳೆಸುವುದು, ಇದರಿಂದ ತಮ್ಮ ಕ್ಷೇತ್ರದ ಬಗ್ಗೆ ಪೂರ್ಣ ಪರಿಣಿತಿಯನ್ನು ಹೊಂದಿ ಇನ್ನಷ್ಟು ಉತ್ತಮವಾಗಿ ಕಾರ್ಯ ನಿರ್ವಹಿಸಬಹುದಾಗಿರುತ್ತದೆ. ಈ ಕೌಶಲ್ಯ ಅಭಿವೃದ್ಧಿಯಿಂದ ಒಬ್ಬ ವ್ಯಕ್ತಿಯು ತನ್ನ ಉದ್ಯೋಗ ಕ್ಷೇತ್ರದಲ್ಲಿ ಮಾತ್ರವಲ್ಲದೆ ತನ್ನ ವೈಯಕ್ತಿಕ ಜೀವನದಲ್ಲಿಯೂ ಸಹ ಅಭಿವೃದ್ಧಿಯನ್ನು ಹೊಂದುತ್ತಾನೆ.

ಉತ್ತಮ ಶಿಕ್ಷಣ ಮತ್ತು ತರಬೇತಿಯ ಕೊರತೆಯು ಸಮಾಜದ ವಿವಿಧ ಭಾಗಗಳ ಅಂಚಿನಲ್ಲಿರುವ ವಲಯಗಳಲ್ಲಿ ಅಂದರೆ, ಉದ್ಯೋಗ ಸಮಸ್ಯೆ, ಬಡತನದಲ್ಲಿ ಮುಖ್ಯ ಪಾತ್ರ ವಹಿಸುತ್ತದೆ. ಗ್ರಾಮೀಣ ಬಡವರು, ಯುವಕರು, ವ್ಯಕ್ತಿಗಳನ್ನು ಒಳಗೊಂಡ ಗುಂಪು ಅಂದರೆ, ವಿಕಲಾಂಗರು, ವಲಸಿಗ ಕಾರ್ಮಿಕರು ಇತ್ಯಾದಿಗಳಿಗೆ ಉತ್ತಮವಾದ ಕೌಶಲ್ಯ, ತರಬೇತಿಯು ಅಗತ್ಯವಾಗಿರುತ್ತದೆ.

ಭಾರತ ಸರ್ಕಾರವು 2022ರ ವೇಳೆಗೆ ಭಾರತದಲ್ಲಿ 40 ಕೋಟಿ (400 ದಶಲಕ್ಷ) ಜನರನ್ನು ವಿವಿಧ ಕೌಶಲ್ಯಗಳಲ್ಲಿ ತರಬೇತಿ ನೀಡುವ ಗುರಿಯನ್ನು ಹೊಂದಿದೆ ಇದು ಭಾರತದ ಕೌಶಲ್ಯ ಅಭಿವೃದ್ಧಿ ಅಭಿಯಾನ ಎಂದು ಘೋಷಿಸಿದೆ. ನಿರುದ್ಯೋಗಿ ಯುವಕರನ್ನು ಹಲವಾರು ಕೌಶಲ್ಯ ಅಭಿವೃದ್ಧಿ ಉಪಕ್ರಮಗಳನ್ನು ಉಪಯೋಗಿಸಿಕೊಂಡು ಭಾರತವನ್ನು ವಿಶ್ವದ ಕೌಶಲ್ಯ ರಾಜಧಾನಿಯನ್ನಾಗಿ ಮಾಡುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ.

#### ಈ ನಿಟ್ಟಿನಲ್ಲಿ ಕೆಲವು ಆಯೋಜಿಸಬಹುದಾದ ಕ್ರಮಗಳು

- ಕೌಶಲ್ಯ ಅಭಿವೃದ್ಧಿಯ ಮೂಲಕ ಯುವಕರ ಉದ್ಯೋಗವನ್ನು ಹೆಚ್ಚಿಸುವ ದೃಷ್ಟಿಯಿಂದ ಭಾರತದಲ್ಲಿ ಮೊದಲ ಬಾರಿಗೆ "ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯ (MSDE) ರಚನೆ ಮಾಡಲಾಗಿದೆ.
- ಭಾರತದಲ್ಲಿ ಕೌಶಲ್ಯಗಳನ್ನು ವೇಗವರ್ಧನೆಯ ಪ್ರಾಥಮಿಕ ಆದೇಶದೊಂದಿಗೆ "ಭಾರತದ ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ನಿಗಮ"ವನ್ನು ಸ್ಥಾಪಿಸಲಾಗಿದೆ.
- ಭಾರತವು ಹೆಚ್ಚು ಯುವಕರನ್ನು ಹೊಂದಿರುವ ದೇಶವಾಗಿದೆ, ಯುವಕರಿಗೆ ಹೆಚ್ಚಿನ ಕೌಶಲ್ಯ ತರಬೇತಿಯನ್ನು ನೀಡಿ ಉತ್ತಮವಾದ ಜೀವನೋಪಾಯವನ್ನು ಪಡೆದುಕೊಳಲು ಸಹಾಯಮಾಡುವ ಉದ್ದೇಶದಿಂದ ಹಾಗೂ ರಾಷ್ಟ್ರೀಯ ಕೌಶಲ್ಯಾಭಿವೃದ್ಧಿ ವಲಯಗಳಿಂದ "ಪ್ರಧಾನ ಮಂತ್ರಿ ಕೌಶಲ್ ವಿಕಾಸ್ ಯೋಜನೆ"ಯನ್ನು ಭಾರತ ಸರ್ಕಾರವು ರೂಪಿಸಿದೆ.
- "ಪ್ರಧಾನ ಮಂತ್ರಿ ಕೌಶಲ್ ವಿಕಾಸ್ ಯೋಜನೆ"ಗಳು, ಕೌಶಲ್ಯ ಭಾರತ ಮಿಷನ್ ಯೋಜನೆಯನ್ನು ರೂಪಿಸುತ್ತದೆ. ಸುಮಾರು 415 ಜಿಲ್ಲೆಗಳಲ್ಲಿ 432 "ಪ್ರಧಾನ ಮಂತ್ರಿ ಕೌಶಲ್ ವಿಕಾಸ್ ಕೇಂದ್ರಗಳು" ಇದೆ. ವಾರ್ಷಿಕವಾಗಿ ಕನಿಷ್ಠ ಒಂದು ಲಕ್ಷ ಅಭ್ಯರ್ಥಿಗಳಿಗೆ ತರಬೇತಿಯನ್ನು ನೀಡುವ ಗುರಿಹೊಂದಿದೆ.

ಸಹಕಾರ ಸಂಸ್ಥೆಗಳು ತಾತ್ವಿಕ ಆಧಾರಿತ ಉದ್ಯಮಗಳಾಗಿವೆ, ಅದು ಅನ್ವೇಷಣೆಗಿಂತ ಜನರನ್ನು ಉತ್ತೇಜನಗೊಳಿಸುತ್ತದೆ. ಅವರ ವ್ಯವಹಾರ ಕೇಂದ್ರ ಬಿಂದುವು ಸಹಕಾರಿ ಮಾದರಿ ಯುವಜನರಿಗೆ ಕೊಡುಗೆ ನೀಡುತ್ತದೆ. ಉದ್ಯೋಗವು ಅವರಿಗೆ ಸಂಬಳವನ್ನು ಮಾತ್ರ ನೀಡುವುದಲ್ಲದೆ ಉದ್ಯೋಗದ ಸೃಷ್ಟಿಗೂ ಸಹ ಅನುಕೂಲವಾಗುತ್ತದೆ. ಕೌಶಲ್ಯ ಅಭಿವೃದ್ಧಿಯು ಮುಖ್ಯ ಗುರಿಯು ಯುವಕರಿಗೆ ಕೌಶಲ್ಯ ಅಭಿವೃದ್ಧಿಯ ಜೊತೆಗೆ ಸ್ವಯಂ ಉದ್ಯೋಗ ನೀಡುವುದು. ಭಾರತದಲ್ಲಿ ಕಾರ್ಮಿಕ ಸಹಕಾರ ಸಂಘ ಉತ್ತಮವಾದ ಉದಾಹರಣೆಯಾಗಿದೆ. ಆದರೆ ಕಾರ್ಮಿಕ ಸಹಕಾರ ಸಂಘ ದೊಡ್ಡ ಸವಾಲನ್ನು ಎದುರಿಸುತ್ತಿವೆ. ಇಲ್ಲಿ ಕೌಶಲ್ಯ ರಹಿತ ಅಥವಾ ಉತ್ತಮ ತರಬೇತಿ ಪಡೆಯದವರು ಇಲ್ಲಿ ಹೆಚ್ಚಾಗಿದ್ದು ಕೌಶಲ್ಯ ಅಭಿವೃದ್ಧಿಯ ಪಾತ್ರ ಪ್ರಮುಖವಾಗಿರುತ್ತದೆ. ಉದ್ಯೋಗಿಗಳಿಗೆ ಕೌಶಲ್ಯಗಳನ್ನು ಪರಿಷ್ಕರಿಸುವುದರಿಂದ ಉತ್ತಮ ಉದ್ಯೋಗದ ಅವಕಾಶಗಳನ್ನು ಸೃಷ್ಟಿಸಲಾಗುತ್ತದೆ. ಸೇವೆಗಳಿಗೆ ಹಾಗೂ ಉತ್ತಮವಾದ ಗುಣಮಟ್ಟವನ್ನು ಸುಧಾರಿಸಲು ಸಹಕಾರ ಸಂಸ್ಥೆಗಳಲ್ಲಿ ಸಹಕಾರಿಗಳು ಹಾಗೂ ಉದ್ಯೋಗಿಗಳು ಉತ್ತಮವಾದ ತರಬೇತಿ ಹಾಗೂ ಕೌಶಲ್ಯಗಳನ್ನು ಸಹ ಪಡೆದು ಕೊಳ್ಳಬೇಕಾಗುತ್ತದೆ. ಕೌಶಲ್ಯವು ಸಹಕಾರಿಗಳಿಗೆ ಉತ್ತಮ ಕೊಡುಗೆ ನೀಡುವ ಪಾತ್ರವನ್ನು ವಹಿಸುತ್ತದೆ. ಇತ್ತೀಚೆಗೆ ಮಧ್ಯಪ್ರದೇಶದ ಸಹಕಾರ ಸಂಘ "ಪ್ರಧಾನ ಮಂತ್ರಿ ಕೌಶಲ್ ವಿಕಾಸ್ ಯೋಜನೆ"ಯಡಿಯಲ್ಲಿ ಸುಮಾರು 2000 ಕಾರ್ಮಿಕ ಸಹಕಾರಿಗಳಿಗೆ ತರಬೇತಿಯನ್ನು ನೀಡಿದೆ.

ಸಣ್ಣ ಮತ್ತು ಮಧ್ಯಮ ಉಧ್ಯಮಗಳಲ್ಲಿನ ತಂತ್ರಜ್ಞಾನ ಮತ್ತು ನವೀನತೆಯ

ಪ್ರಕ್ರಿಯೆಗಳು, ಸಹಕಾರ ಸಂಸ್ಥೆಗಳು ಸೇರಿದಂತೆ ದೊಡ್ಡ ಸಂಸ್ಥೆಗಳಲ್ಲಿ ನಡೆಯುವ ಕಾರ್ಯಗಳು ಭಿನ್ನವಾಗಿರುತ್ತದೆ. ಅವರು ಸೃಷ್ಟಿಸುವ ಕಾರ್ಯತಂತ್ರಗಳನ್ನು ಅಭಿವೃದ್ಧಿ ಪಡಿಸದೇ ದೊಡ್ಡ ಸಂಸ್ಥೆಗಳಿಗಿಂತ ಹೆಚ್ಚು ಪರಿಣಾಮಕಾರಿ ಹಾಗೂ ಸಂಶೋಧನೆ ಮತ್ತು ಅಭಿವೃದ್ಧಿ ಮಾಡುವುದರ ಮೂಲಕ ಹೆಚ್ಚಿನ ತಮ್ಮ ಪರಿಸರದಲ್ಲಿ ಅವಲಂಬಿತರಾಗಿತ್ತಾರೆ. ಹೀಗೆ ಕೌಶಲ್ಯವು ತಂತ್ರಜ್ಞಾನ ಮತ್ತು ನಾವಿನ್ಯತೆ ಪ್ರಕ್ರಿಯ ವಿಭಿನ್ನವಾದ ತಂತ್ರಜ್ಞಾನದ ಏಕೀಕರಣಕ್ಕೆ ಕರೆ ನೀಡುತ್ತದೆ.

ಆರ್ಥಿಕತೆಯ ಎಲ್ಲಾ ಕ್ಷೇತ್ರಗಳಲ್ಲಿನ ತಂತ್ರಜ್ಞಾನದ ಅಭಿವೃದ್ಧಿಯು ದೊಡ್ಡ ಸವಾಲಾಗಿದೆ. ತಂತ್ರಜ್ಞಾನದ ಬೆಳವಣಿಗೆಯು ಸರ್ಕಾರದ ಮುಖ್ಯ ಉದ್ದೇಶವಾಗಿದೆ. ಸರ್ಕಾರದ ಡಿಜಿಟಲ್ ಇಂಡಿಯಾದ ಮೂಲಕ ಎಲ್ಲಾ ಕ್ಷೇತ್ರದಲ್ಲಿ ತಾಂತ್ರಿಕತೆಯನ್ನು ಹೊಂದುವುದು ಇದರ ಮುಖ್ಯ ಉದ್ದೇಶವಾಗಿದೆ. ಕಳೆದ ವರ್ಷ ಸಹಕಾರ ಸಪ್ತಾಹದಲ್ಲಿ ಎನ್‌ಸಿಐಯು "ಸಹಕಾರಗಳ ಡಿಜಿಟಲೀಕರಣದ ಮೂಲಕ ಸಾರ್ವಜನಿಕರ ಅಧಿಕಾರ" ಎಂಬ ದಿನವನ್ನು ಆಚರಣೆ ಮಾಡುವ ಮೂಲಕ ಸಹಕಾರಿಗಳಿಗೆ ತರಬೇತಿ ನೀಡಿದೆ. ಸಹಕಾರ ಕ್ಷೇತ್ರದಲ್ಲಿ ಡಿಜಿಟಲೀಕರಣವನ್ನು ಸಾರ್ವಜನಿಕರು ಹೇಗೆ ಉಪಯೊಗಿಸಬೇಕೆಂದು ಹಾಗೂ ಅದರ ಉಪಯೋಗಳ ಬಗ್ಗೆ ತಿಳಿಸಲಾಗಿದೆ.

ಉತ್ತಮವಾದ ಕೌಶಲ್ಯ ಅಭಿವೃದ್ಧಿ ಹಾಗೂ ತರಬೇತಿಯನ್ನು ಹಮ್ಮಿಕೊಳ್ಳುವುದರಿಂದ ಸಹಕಾರ ಸಂಸ್ಥೆಗಳು ಖಾಸಗಿ ಸಂಸ್ಥೆಗಳೊಂದಿಗೆ ಸಾರ್ವಜನಿಕ ವಲಯದಲ್ಲಿ ಪಾಲುದಾರರಾಗಬಹುದು. ಸಹಕಾರ ಸಂಸ್ಥೆಗಳು ಹಲವಾರು ಕೌಶಲ್ಯ ಹಾಗೂ ತರಬೇತಿಗಳನ್ನು ಹೊಂದುವುದರಿಂದ ಸಂಭಾವತ್ಯತೆಯನ್ನು ಹೊಂದಲು ಸಾಧ್ಯವಾಗುತ್ತದೆ. ಆರ್ಥಿಕ ಯುಗದಲ್ಲಿ ರಾಷ್ಟ್ರ ಮಟ್ಟದ ಸಂಸ್ಥೆಗಳು, ಉನ್ನತ ಸಹಕಾರ ಸಂಸ್ಥೆಗಳು ಸರ್ಕಾರದ ಆರ್ಥಿಕ ನೀತಿಯನ್ನು ಅಂದರೆ ಕೌಶಲ್ಯಾಭಿವೃಧಿಯನ್ನು ಪಡೆಯುವುದು ದೇಶಕ್ಕೆ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯಲ್ಲಿ ಸಹಕಾರದ ಪ್ರಮುಖ ಪಾತ್ರವಾಗಿದೆ.

65ನೇ ಅಖಿಲ ಭಾರತ ಸಹಕಾರ ಸಪ್ತಹಾದ ಆಚರಣೆಗಳ ದಿನಗಳಲ್ಲಿ ಈ ಕೆಳಗಿನ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು ಅಗತ್ಯ.

- "ಸಹಕಾರ ಸಂಸ್ಥೆಗಳ ಮೂಲಕ ಕೌಶಲ್ಯ, ತಾಂತ್ರಿಕತೆ ವೃದ್ಧಿಪಡಿಸುವುದು" ಆಚರಣೆಯ ಮೂಲಕ ಸಹಕಾರಿಗಳಿಗೆ ತರಬೇತಿ ನೀಡುವುದು.
- ಸಾಮಾಜಿಕ ಮಾಧ್ಯಮ, ಡಿಜಿಟಲೀಕರಣದ ಅರಿವು, ತಾಂತ್ರಿಕತೆಯ ವೃದ್ಧಿಯನ್ನು ಸಹಕಾರಿಗಳ ಮೂಲಕ ವೃದ್ಧಿಪಡಿಸುವುದು.
- ಕೌಶಲ್ಯ ಹಾಗೂ ತಂತ್ರಜ್ಞಾನ ಅಭಿವೃದ್ಧಿಯ ಮೂಲಕ ಸಹಕಾರಿಗಳ ಉನ್ನತೀಕರಣವನ್ನು ಮಾಡುವ ಬಗ್ಗೆ ಕ್ರಿಯಾಯೋಜನೆ ರಚಿಸುವುದು.
- ಕೌಶಲ್ಯ ಮತ್ತು ಅಭಿವೃದ್ಧಿಯ ವಿಷಯಗಳ ಬಗ್ಗೆ ಕಾಲೇಜು ಮತ್ತು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಈ ಕುರಿತು ಹೆಚ್ಚಿನ ವಿಷಯವನ್ನು ಚರ್ಚಿಸುವುದು.
- ತಾಂತ್ರಿಕವಾಗಿ ಅಭಿವೃದ್ಧಿ ಹೊಂದಿರುವ ಸಹಕಾರ ಸಂಸ್ಥೆಯನ್ನು ಗುರುತಿಸುವುದು ಹಾಗೂ ಸನ್ಮಾನಿಸುವುದು.

## ದಿನಾಂಕ : 20.11.2018ರಂದು ಶಿವಮೊಗ್ಗದಲ್ಲಿ ಸಹಕಾರ ಸಪ್ತಾಹ : "ಸಹಕಾರ ಸಂಸ್ಥೆಗಳ ಮೂಲಕ ಕೌಶಲ್ಯ, ತಾಂತ್ರಿಕತೆ ವೃದ್ಧಿಪಡಿಸುವುದು." ದಿನಾಚರಣೆಯ ಪೂರ್ವಭಾವಿ ಸಿದ್ಧತಾ ಸಭೆ

65ನೇ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ ದಿನಾಂಕ 20.11.2018ರಂದು "ಸಹಕಾರ ಸಂಸ್ಥೆಗಳ ಮೂಲಕ ಕೌಶಲ್ಯ, ತಾಂತ್ರಿಕತೆ ವೃದ್ಧಿಪಡಿಸುವುದು" ದಿನಾಚರಣೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ನೇತೃತ್ವದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಕರ್ನಾಟಕ ರಾಜ್ಯ ಉಣ್ಣೆ ಕೈಮಗ್ಗ ನೇಕಾರರ ಸಹಕಾರ ಮಹಾಮಂಡಳ ನಿ, ಕರ್ನಾಟಕ ರಾಜ್ಯ ಕುಕ್ಕುಟ ಸಹಕಾರ ಮಹಾಮಂಡಳ ನಿ, ಕರ್ನಾಟಕ ರಾಜ್ಯ ನೂಲಿನ ಗಿರಣಿಗಳ ಸಹಕಾರ ಮಹಾಮಂಡಳ ನಿ ಬೆಂಗಳೂರು, ಹಾಗೂ ಸ್ಥಳೀಯ ಸಹಕಾರ ಸಂಸ್ಥೆಗಳು ಇವರುಗಳ ಸಹಯೋಗದೊಂದಿಗೆ ಜಿಲ್ಲೆಯ ಎಲ್ಲಾ ಸಹಕಾರ ಸಂಸ್ಥೆಗಳ ಹಾಗೂ ಸೌಹಾರ್ದ ಸಹಕಾರಿಗಳು ಸಂಯುಕ್ತವಾಗಿ ಆಚರಿಸಲು ದಿನಾಂಕ : 23.10.2018ರಂದು ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ ಆಪರೇಟಿವ್ ಮ್ಯಾನೇಜ್‌ಮೆಂಟ್, ಶಿವಮೊಗ್ಗದಲ್ಲಿ ಶ್ರೀ ಎಂ.ಡಿ.ನರಸಿಂಹಮೂರ್ತಿ, ಮಾನ್ಯ ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ನಡೆದ ಪೂರ್ವಭಾವಿ ಸಿದ್ಧಾತಾ ಸಭೆಯಲ್ಲಿ ತೀರ್ಮಾನಿಸಲಾಯಿತು.

ಈ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ನಿರ್ದೇಶಕರಾದ ಪ್ರಸನ್ನಕುಮಾರ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ, ಶಿವಮೊಗ್ಗ ಡಿಸಿಸಿ ಬ್ಯಾಂಕ್‌ನ ಅಧ್ಯಕ್ಷರಾದ




ಮಂಜುನಾಥ ಗೌಡ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ರಾಜಣ್ಣರೆಡ್ಡಿ, ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾದ ಶ್ರೀ ವಿದ್ಯಾಧರ್, ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷರಾದ ಶ್ರೀ ಹೆಚ್.ಎಲ್. ಷಡಕ್ಷರಿ, ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ತಿಪ್ಪೇಸ್ವಾಮಿ, ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಅಶ್ವತ್ಥ್, ಸಹಕಾರಿಗಳ ಸಹಾಯಕ ನಿಬಂಧಕರು, ಸಹಕಾರಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಜಿಲ್ಲೆಯ ಅನೇಕ ಪ್ರಮುಖ ಸಹಕಾರಿಗಳು, ಅಧಿಕಾರಿಗಳು ಭಾಗವಹಿಸಿದರು

ದಿನಾಂಕ : 20.11.2018ರಂದು ಶಿವಮೊಗ್ಗ ಆಚರಿಸಲಾಗುತ್ತಿರುವ "ಸಹಕಾರ ಸಂಸ್ಥೆಗಳ ಮೂಲಕ ಕೌಶಲ್ಯ, ತಾಂತ್ರಿಕತೆ ವೃದ್ಧಿಪಡಿಸುವುದು" ದಿನಾಚರಣೆಯಲ್ಲಿ ಶಿವಮೊಗ್ಗ ಜಿಲ್ಲೆಯ ಎಲ್ಲಾ ಸೌಹಾರ್ದ ಸಹಕಾರಿಗಳು ಸಕ್ರಿಯವಾಗಿ ಭಾಗವಹಿಸಿ, ಸಹಕಾರ ಸಪ್ತಾಹವನ್ನು ಯಶಸ್ವಿಯಾಗಿಸಲು ಸಂಯುಕ್ತ ಸಹಕಾರಿಯು ಕೋರುತ್ತದೆ.

## ಸೌಹಾರ್ದ ಸಹಕಾರಿಗಳು ಸಹಕಾರಿ ಸಂಘಗಳೇ ಎಂಬ ಆದಾಯ ತೆರಿಗೆ ಇಲಾಖೆಯ ಪ್ರಶ್ನೆಗೆ ಪರಿಹಾರ ಒದಗಿಸುವುದಕ್ಕಾಗಿ ಸಂಯುಕ್ತ ಸಹಕಾರಿಯ ನಿಯೋಗದಿಂದ ಆದಾಯ ತೆರಿಗೆ ಇಲಾಖೆಯ ಮುಖ್ಯಸ್ಥರ ಭೇಟಿ ನೋಟೀಸ ನೀಡುವುದಕ್ಕೆ, ಟಿ.ಡಿ.ಎಸ್ ಕಡಿತ ಮಾಡಲು ಕ್ರಮ ನಿಲ್ಲಿಸಲು ಡಿಸೆಂಬರ ವರೆಗೆ ಅವಕಾಶ



ಆದಾಯ ತೆರಿಗೆ ಇಲಾಖಾ ಪ್ರಿನ್ಸಿಪಲ್ ಚೀಫ್ ಕಮೀಷನರ್ ಶ್ರೀ ಬಿ.ಆರ್.ಬಾಲಕೃಷ್ಣನ್ ಇವರನ್ನು ಭೇಟಿ ಮಾಡಿ ವಿವರಣೆ ನೀಡಿ ಮನವಿ ಸಲ್ಲಿಸಿರುವುದು.



ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳೊಂದಿಗೆ ಸೌಹಾರ್ದ ಸಹಕಾರಿಗಳ ನಿಯೋಗ.

ಉದಯ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಂಗಳೂರು ಹಾಗೂ ಶ್ರೀ ಪ್ರಭುಲಿಂಗೇಶ್ವರ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ., ಜಮಖಂಡಿ, ಬಾಗಲಕೋಟ ಈ ಸೌಹಾರ್ದ ಸಹಕಾರಿಗಳಿಗೆ ಸಹಕಾರ ಸಂಘಗಳೇ ? ಎಂದು ಪ್ರಶ್ನಿಸಿ ಆದಾಯ ತೆರಿಗೆ ಇಲಾಖೆಯು ಆದೇಶ ಹೊರಡಿಸಿರುವ ಹಿನ್ನೆಲೆಯಲ್ಲಿ ಕಳೆದ ಹಲವು ದಿನಗಳಿಂದ ಸೌಹಾರ್ದ ಸಹಕಾರಿಗಳಿಗೆ ಆದಾಯ ತೆರಿಗೆ ಇಲಾಖೆಯ ಟಿಡಿಎಸ್ ವಿಭಾಗದಿಂದ ನೋಟೀಸುಗಳು ಹಾಗೂ ದೂರವಾಣಿ ಕರೆಗಳು ಬರುತ್ತಿರುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವತಿಯಿಂದ ನಿಯೋಗವು ಆದಾಯ ತೆರಿಗೆ ಇಲಾಖೆಯ ಪ್ರಿನ್ಸಿಪಲ್ ಚೀಫ್ ಕಮೀಷನರ್ ಶ್ರೀ ಬಿ.ಆರ್.ಬಾಲಕೃಷ್ಣನ್, ಚೀಫ್ ಕಮೀಷನರ್ ಆಫ್ ಟಿಡಿಎಸ್ ಶ್ರೀ ದುಬೇ, ಪ್ರಿನ್ಸಿಪಲ್ ಕಮೀಷನರ್ ಆಫ್ ಇನ್‌ಕಮ್ ಟ್ಯಾಕ್ಸ್ ಶ್ರೀ ರಮೇಶ್ ಪ್ರಭಾತ್, ಪ್ರಿನ್ಸಿಪಲ್ ಡೈರೆಕ್ಟರ್ ಆಫ್ ಇನ್‌ಕಮ್‌ಟ್ಯಾಕ್ಸ್ ಶ್ರೀ ರವಿಚಂದ್ರನ್, ಅಡಿಷನಲ್ ಕಮೀಷನರ್ ಆಫ್ ಇನ್‌ಕಮ್‌ಟ್ಯಾಕ್ಸ್ ಶ್ರೀ ವಿ.ಎಸ್. ಚಕ್ರಪಾಣಿ, ಪ್ರಿನ್ಸಿಪಲ್ ಕಮೀಷನರ್ ಆಫ್ ಟಿಡಿಎಸ್ ಶ್ರೀ ಸಂಜೀವ ಕುಮಾರ್ ಇವರುಗಳನ್ನು ಸಂಯುಕ್ತ ಸಹಕಾರಿಯ ನಿಯೋಗವು ಭೇಟಿ ಮಾಡಿ ಸೌಹಾರ್ದ ಸಹಕಾರಿಗಳಿಗೆ ಆಗುತ್ತಿರುವ ತೊಂದರೆಗಳನ್ನು ವಿವರಿಸಿ, ಕರ್ನಾಟಕ ರಾಜ್ಯದಲ್ಲಿ ಎರಡು ಸಹಕಾರಿ ಕಾಯ್ದೆಗಳು ಕಾರ್ಯನಿರ್ವಹಿಸುತ್ತಿವೆ. ಈ ಎರಡು ಸಹಕಾರಿ ಕಾಯ್ದೆಗಳ ಉದ್ದೇಶಗಳು ಸಹ ಸಮಾಜದಲ್ಲಿ ಆರ್ಥಿಕವಾಗಿ ದುರ್ಬಲರಾಗಿರುವ ವ್ಯಕ್ತಿಗಳನ್ನು ಸದೃಢಗೊಳಿಸುವುದು ಹಾಗೂ ಸಮಾನ ಮನಸ್ಕ ಸದಸ್ಯರ ಆರ್ಥಿಕ ಅಭಿವೃದ್ಧಿಯನ್ನು ಬಲಪಡಿಸುವುದಾಗಿರುತ್ತದೆ ಎಂದು ವಿವರಿಸಿದರು.

ಈ ಪ್ರಕರಣಕ್ಕೆ ಪೂರಕವಾಗಿ, ಸಹಕಾರಿಗಳ ನಿಬಂಧಕರಾದ ಶ್ರೀ ಎಂ.ಕೆ. ಅಯ್ಯಪ್ಪ, ಐಎಎಸ್ ಇವರು ಸಹ ವಿವರಣೆಯನ್ನು ನೀಡಿರುತ್ತಾರೆ. ಅದರಂತೆ, ಆದಾಯ ತೆರಿಗೆ ಇಲಾಖೆಗೆ ಸಂಬಂಧಿಸಿದಂತೆ ಸಹಕಾರಿಗಳು ಮತ್ತು ಸಹಕಾರಿ ಸಂಘಗಳು ಒಂದೇ ಅರ್ಥವನ್ನು ನೀಡುತ್ತದೆ ಎಂದು ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಸೌಹಾರ್ದ ಸಹಕಾರಿಗಳಿಗೆ ನೀಡುತ್ತಿರುವ ನೋಟೀಸುಗಳನ್ನು ತಡೆಹಿಡಿಯಬೇಕು ಹಾಗೂ ಸಹಕಾರಿಗಳಿಗೆ ಆಗುತ್ತಿರುವ ತೊಂದರೆಗಳನ್ನು ನಿವಾರಿಸಬೇಕು. ಸದಸ್ಯರ ಮಧ್ಯೆ ಆಗುವಂತಹ ವ್ಯವಹಾರಕ್ಕೆ ಟಿಡಿಎಸ್ ಅವಶ್ಯಕತೆ ಇರುವುದಿಲ್ಲ ಎಂದು ಕಾಯ್ದೆಯಲ್ಲಿ ತಿಳಿಸಿರುವುದರಿಂದ ಸಹಕಾರಿ ಸಂಘಗಳಿಗೆ ಇರುವ ಪ್ರಾವಧಾನವೇ ಸೌಹಾರ್ದ ಸಹಕಾರಿಗಳಿಗೂ ಅನ್ವಯಿಸುತ್ತದೆ. ಇದರಲ್ಲೇನಾದರೂ ತಮಗೆ ಸಂದೇಹವಿದ್ದಲ್ಲಿ ಸೂಕ್ತ ಪ್ರಾಧಿಕಾರದ ಮೂಲಕ ಸ್ಪಷ್ಟನೆಯನ್ನು ಒದಗಿಸಲಾಗುವುದು ಎಂದು ತಿಳಿಸಿ ಸಂಯುಕ್ತ ಸಹಕಾರಿಯು ವಿವರವಾದ ಮನವಿ ಪತ್ರವನ್ನು ಆದಾಯ ತೆರಿಗೆ ಇಲಾಖೆಯ ಪ್ರಿನ್ಸಿಪಲ್ ಚೀಫ್ ಕಮೀಷನರ್ ಶ್ರೀ ಬಿ.ಆರ್.ಬಾಲಕೃಷ್ಣನ್ ಇವರಿಗೆ ನೀಡಲಾಯಿತು.

ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ನಿರ್ದೇಶಕರಾದ ಶ್ರೀ ಬಿ.ಎಸ್.ಗುಂಡುರಾವ್, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಮಧುಕರ್ ಹೆಗಡೆ, ಉಚ್ಚ ನ್ಯಾಯಾಲಯದ ವಕೀಲರಾದ ಶ್ರೀ ರವಿ ಶಂಕರ್, ಸಹಕಾರಿಗಳ ಸಹಾಯಕ ನಿಬಂಧಕರಾದ ಶ್ರೀ ಎಂ.ಪಿ.ಮಂಜುನಾಥ್, ನವಕಲ್ಯಾಣ ಕರ್ನಾಟಕ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್‌ನ ಅಧ್ಯಕ್ಷರಾದ ಶ್ರೀ ವಿ.ಬಿ.ಪಾಟೀಲ್, ಉದಯ ಸೌಹಾರ್ದ ಪತ್ತಿನ ಸಹಕಾರಿ ನಿ., ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿ., ಶ್ರೀ ವರುಣ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಮತ್ತು ಶ್ರೀ ಯಶಸ್ವಿನಿ ಸೌಹಾರ್ದ ಪತ್ತಿನ ಸಹಕಾರಿ ನಿ., ಈ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.

ನಂತರ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿರವರು ಮಾತನಾಡಿ ಡಿಸೆಂಬರ್ 2018ರ ಅಂತ್ಯದವರೆಗೂ ಯಾವುದೇ ಸೌಹಾರ್ದ ಸಹಕಾರಿಗಳಿಗೆ ಈ ರೀತಿಯ ನೋಟೀಸುಗಳನ್ನು ನೀಡುವುದನ್ನು, ಸಹಕಾರಿಗಳಿಗೆ ಮಾಹಿತಿ ಕೇಳಿ ಭೇಟಿ ನೀಡುವುದನ್ನು ಮತ್ತು ದೂರವಾಣಿ ಕರೆ

ಮಾಡಿ ಟಿಡಿಎಸ್ ಕಡಿತ ಮಾಡುವ ಕುರಿತು ಮಾಹಿತಿಗಳನ್ನು ಒದಗಿಸುವಂತೆ ಸಹಕಾರಿಗಳಿಗೆ ಒತ್ತಾಯಿಸಬಾರದು ಎಂದು ಮನವಿ ಮಾಡಿದರು. ಇದಕ್ಕೆ ಪೂರಕವಾಗಿ ಧನಾತ್ಮಕವಾಗಿ ಸ್ಪಂದಿಸಿ ಮಾತನಾಡಿದ ಆದಾಯ ತೆರಿಗೆ ಇಲಾಖೆಯ ಉನ್ನತಾಧಿಕಾರಿಗಳು ಮಾನ್ಯ ಅಧ್ಯಕ್ಷರ ಮನವಿಗೆ ಒಪ್ಪಿಗೆ ಸೂಚಿಸಿದರು.

ಆದಾಯ ತೆರಿಗೆ ಅಧಿಕಾರಿಗಳು ಡಿಸೆಂಬರ 2018 ರವರೆಗೆ ಯಾವುದೇ ಕ್ರಮ ಜರುಗಿಸುವುದಿಲ್ಲ ಎಂದು ಭರವಸೆ ನೀಡಿದ್ದಾರೆ. ಈ ವಿಷಯದ ಬಗ್ಗೆ ಮಾಹಿತಿ ಇರದೇ ಕೆಲವು ಆದಾಯ ತೆರಿಗೆ ಅಧಿಕಾರಿಗಳು ಒಂದೆರಡು ಸೌಹಾರ್ದ ಸಹಕಾರಿಗಳಿಗೆ ಭೇಟಿ ನೀಡಿ ತಗಾದೆ ಮಾಡಿರುವುದು ಸಂಯುಕ್ತ ಸಹಕಾರಿಯ ಗಮನಕ್ಕೆ ಬಂದಾಗ ಅದರ ಬಗ್ಗೆ ತುರ್ತಾಗಿ ಮೇಲಾಧಿಕಾರಿಗಳೊಡನೆ ಮಾತಾಡಿ ಅವರನ್ನು ಹಿಂದಕ್ಕೆ ಕರೆಯಿಸುವಂತೆ ಕ್ರಮವಿಡಲಾಗಿದೆ. ಹೀಗಾಗಿ ಯಾವುದಾದರೂ ಸೌಹಾರ್ದ ಸಹಕಾರಿಗಳಿಗೆ ಈ ರೀತಿ ಆದಾಯ ತೆರಿಗೆ ಅಧಿಕಾರಿಗಳು ಬಂದು ಮಾಹಿತಿ ಕೇಳಿದರೆ ತುರ್ತಾಗಿ ಸಂಯುಕ್ತ ಸಹಕಾರಿಯ ಗಮನಕ್ಕೆ ತರಬೇಕೆಂದು ಮನವಿ ಮಾಡಲಾಗುತ್ತಿದೆ. ಆದ್ದರಿಂದ, ಆದಾಯ ತೆರಿಗೆ ಇಲಾಖೆಗೆ ಸಂಬಂಧಿಸಿದಂತೆ ಪ್ರಸ್ತುತ ಉಂಟಾಗಿರುವ ಸಮಸ್ಯೆ/ ಗೊಂದಲಗಳಿಗೆ ಸಹಕಾರಿಗಳು ಭಯಪಡದೇ ಇರಲು ಸಂಯುಕ್ತ ಸಹಕಾರಿಯು ಈ ಮೂಲಕ ತಿಳಿಸಿದೆ. ಸಂಯುಕ್ತ ಸಹಕಾರಿಯು ಇದಲ್ಲದೇ ಮಾನ್ಯ ಉಚ್ಚ ನ್ಯಾಯಾಲಯದ ಮೊರೆ ಹೋಗಿ ಅಗತ್ಯ ಕ್ರಮವನ್ನು ಆದ್ಯತೆ ಮೇರೆಗೆ ನಿರ್ವಹಿಸುತ್ತಿದೆ ಎಂಬುದನ್ನು ಸೌಹಾರ್ದ ಸಹಕಾರಿಗಳು ಗಮನಿಸಲು ಕೋರಿದೆ.

## ಬೀದರ್‌ನಲ್ಲಿ ಸಹಕಾರಿ ಸಪ್ತಾಹ ಆಚರಣೆಯ ಪೂರ್ವಸಿದ್ಧತಾ ಸಭೆ

**ಬೀದರ :** ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಬೀದರ ಕಛೇರಿಯಲ್ಲಿ ಸಹಕಾರ ಸಪ್ತಾಹ ಆಚರಣೆಯ ಕುರಿತು ಪೂರ್ವಭಾವಿ ಸಿದ್ದಾಂತ ಸಭೆಯು ನಡೆಯಿತು. ಸಭೆಯಲ್ಲಿ ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ, ಬೀದರ ಜಿಲ್ಲೆಯ ಉಪ ನಿಬಂಧಕರು ಹಾಗೂ ಸ್ಥಳೀಯ ಸಹಕಾರಿಗಳೂ ಉಪಸ್ಥಿತರಿದರು.



## ಗದಗ ಜಿಲ್ಲಾ ಸಂಪರ್ಕ ಕಛೇರಿ ಉದ್ಘಾಟನಾ ಕಾರ್ಯಕ್ರಮ





**ಗದಗ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಗದಗ ಜಿಲ್ಲಾ ಸಂಪರ್ಕ ಕಛೇರಿಯ ಉದ್ಘಾಟನಾ ಕಾರ್ಯಕ್ರಮವನ್ನು ದಿನಾಂಕ ; 10.10.2018 ರಂದು ದಿ ಮುಳಗುಂದ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ಗದಗ ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಛೇರಿಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ರವರು ನೇರವೇರಿಸಿದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ರಂಗಪ್ಪಯ್ಯ ದೇಶಪಾಂಡೆ ರವರು ಉಪಸ್ಥಿತರಿದ್ದರು. ಮಾನ್ಯ ಅಧ್ಯಕ್ಷರು ಮಾತನಾಡಿ ಗದಗ ಜಿಲ್ಲೆಯು ಕರ್ನಾಟಕಕ್ಕೆ ಮಾತ್ರವಲ್ಲ ಇಡೀ ಭಾರತ ದೇಶಕ್ಕೆ ಸಹಕಾರ ರಂಗದ ತವರೂರಾಗಿದ್ದು, ಈ ನಾಡಿನ ಸೌಹಾರ್ದ ಸಹಕಾರಿಗಳು ಪುಣ್ಯವಂತರಾಗಿರುತ್ತೀರಿ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾ ಸಂಪರ್ಕ ಕಛೇರಿಗಳು ಆರಂಭವಾಗುತ್ತಿದ್ದು, ಅಂತಿಮ ಹಂತಕ್ಕೆ ತಲುಪಿದ್ದೇವೆ. ಸಂಪರ್ಕ ಕಛೇರಿಯ ಉಪಯೋಗವನ್ನು ಪಡೆದುಕೊಳ್ಳಬೇಕೆಂದು ತಿಳಿಸಿದರು. ಗದಗ ಜಿಲ್ಲೆಯಲ್ಲಿ ಜಿಲ್ಲಾ ಒಕ್ಕೂಟವಾಗುವುದರಿಂದ ಸಹಕಾರ ರಂಗದ ಚಳುವಳಿಗೆ ಸಹಕಾರಿಯಾಗುತ್ತದೆ ಎಂದು ತಿಳಿಸಿದರು. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ತರಬೇತಿಯ ವ್ಯವಸ್ಥೆಯನ್ನು ಮಾಡಲಾಗುವುದೆಂದು ತಿಳಿಸಿದರು.

## "ಸಹಕಾರ ಹಾಗೂ ಬ್ಯಾಂಕಿಂಗ್ ಮೆನೇಜಮೆಂಟ ಡಿಪ್ಲೋಮಾ" ಸಮಗ್ರ ಸಹಕಾರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗೆ, ಸಾಮಾನ್ಯ ಸಹಕಾರಿಗಳಿಗೆ ಹಾಗೂ ದೇಶದ ಯುವಕ ಯುವತಿಯರಿಗೆ ಅನ್ವಯಿಸುವ, 6 ತಿಂಗಳ ದೂರ ಶಿಕ್ಷಣ ಕೋರ್ಸ" 1ನೇ ಜನವರಿ 2019 ರಿಂದ ಪ್ರಾರಂಭ

**"Diploma in Cooperation and Banking Management"**

**6 Months Distance Education Course starts from 1st January 2019**

**(For the employees working under all types of Cooperative Societies of 1959 Act and Cooperatives working under Souharda Cooperative Act of 1997, for General co-operators and youths of the Nation**

**(Recognised by National Committee for cooperative Training (NCCT) New Delhi)**

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವತಿಯಿಂದ ರಾಷ್ಟ್ರೀಯ ಸಹಕಾರ ಶಿಕ್ಷಣ ಸಮಿತಿ ನವದೆಹಲಿ National Commitee for cooperative Training (NCCT) New Delhi ಇವರ ಮಾನ್ಯತೆಯೊಂದಿಗೆ 6 ತಿಂಗಳ ದೂರ ಶಿಕ್ಷಣದಲ್ಲಿ **"ಡಿಪ್ಲೋಮಾ ಇನ್ ಕೋ-ಆಪರೇಶನ್ & ಬ್ಯಾಂಕಿಂಗ ಮೆನೇಜಮೆಂಟ"**ನ್ನು ಇದೇ ಜನವರಿ 2019 ರಿಂದ ಪ್ರಾರಂಭಿಸಲಾಗುತ್ತದೆ.

ಈ ತರಬೇತಿ ಪೂರ್ಣಗೊಳಿಸುವುದರಿಂದ ಸಹಕಾರಿ ಸಂಸ್ಥೆಗಳಲ್ಲಿ ಉದ್ಯೋಗ ಪಡೆಯಲು ಸಹಕಾರಿಯಾಗುತ್ತದೆ. ಹಾಗೂ ಹಾಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರಿ ಸಂಸ್ಥೆಗಳ ಸಿಬ್ಬಂದಿಯವರಿಗೆ ಸೇವೆ ಖಾಯಂಯಾಗಲು ಹಾಗೂ ಸೇವೆಯಲ್ಲಿ ಬಡ್ತಿ ಪಡೆಯಲು ಪ್ರಯೋಜನವಾಗಲಿದೆ.

ಕನಿಷ್ಠ ವಿದ್ಯಾರ್ಹತೆ ಪದವಿ ಪೂರ್ವ ಶಿಕ್ಷಣ (ಪಿ.ಯು.ಸಿ) ಪೂರ್ಣಗೊಂಡಿರಬೇಕು.

ಈ ಕೋರ್ಸ 6 ತಿಂಗಳು ಅವಧಿಯದ್ದಾಗಿದೆ. 6 ವಿಷಯಗಳಿರುತ್ತವೆ. ಒಂದು ಕೇಸ್‌ಸ್ಟಡಿ ಇರುತ್ತದೆ. ಪ್ರತಿ ವಿಷಯಕ್ಕೆ ತಲಾ 100 ಅಂಕಗಳು, ಕೇಸ್‌ಸ್ಟಡಿಗೆ 100 ಅಂಕಗಳು, ಒಟ್ಟು 700ಅಂಕಗಳು. ಪ್ರತಿ 2 ತಿಂಗಳಿಗೆ ಒಂದು ಬಾರಿ 3 ದಿನಗಳ ಒಂದು ಕಂಟ್ಯಾಕ್ಟ ಕ್ಲಾಸ್ ನಡೆಸಲಾಗುವುದು. 6 ತಿಂಗಳ ನಂತರ ಪರೀಕ್ಷೆ ನಡೆಸಲಾಗುವುದು. ನಂತರ ಫಲಿತಾಂಶ ಪ್ರಕಟಿಸಲಾಗುವುದು. ಅಂಕಪಟ್ಟಿ ಹಾಗೂ ಸರ್ಟಿಫಿಕೇಟ್ ನೀಡಲಾಗುವುದು.

ಈ ಕೋರ್ಸನ್ನು 1959 ರ ಸಹಕಾರ ಸಂಘಗಳ ಕಾಯ್ದೆಯಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಯವರು, 1997 ರ ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಯವರು, ಎಲ್ಲಾ ರೀತಿಯ ಸಹಕಾರಿಗಳು ಹಾಗೂ ಯುವಕ ಯುವತಿಯರು ಮಾಡಬಹುದಾಗಿದೆ.

**ಕೋರ್ಸ್ ಫೀ : ರೂ. 5000/- (ಪ್ರವೇಶ ಹಾಗೂ ವ್ಯವಸ್ಥಾಪನಾ ಶುಲ್ಕ ರೂ 2000/- ಕೋರ್ಸ ಮೆಟಿರಿಯಲ್ ರೂ. 2000/- ಪರೀಕ್ಷಾ ಫೀ 1000/-) ಅಧ್ಯಯನ ಸಾಹಿತ್ಯ ಕಲಿಕೆ ಹಾಗೂ ಪರೀಕ್ಷೆಗಳನ್ನು ಕನ್ನಡ ಅಥವಾ ಇಂಗ್ಲಿಷ್ ಭಾಷೆಯ ಆಯ್ಕೆಗೆ ಅವಕಾಶವಿರುತ್ತದೆ.**

3 ದಿನಗಳ 3 ಕಂಟ್ಯಾಕ್ಟ ತರಗತಿಗಳ ಊಟ ಉಪಹಾರ ವಸತಿ ವೆಚ್ಚ ತಲಾ ರೂ. 1500 ಗಳಂತೆ ಒಟ್ಟು ರೂ. 4500/- ಕಂಟ್ಯಾಕ್ಟ ತರಗತಿಗಳನ್ನು ಶಿಬಿರಾರ್ಥಿಗಳ ಸಂಖ್ಯೆಯ ಆಧಾರದ ಮೇಲೆ ಬೆಂಗಳೂರು, ಮೈಸೂರು, ಬೆಳಗಾವಿ ಹಾಗೂ ಕಲಬುರಗಿ ವಿಭಾಗೀಯ ಕೇಂದ್ರಗಳಲ್ಲಿ ಮತ್ತು ಸಂಯುಕ್ತ ಸಹಕಾರಿಯು ನಿಗದಿಪಡಿಸುವ ರಾಜ್ಯದ ಇತರೆ ಕೇಂದ್ರಗಳಲ್ಲಿಯೂ ಸಹ ನಡೆಸಲಾಗುವುದು.

**ನವೆಂಬರ 14 ರಿಂದ ಪ್ರವೇಶ ಅರ್ಜಿ ಫಾರ್ಮಗಳನ್ನು ಹಾಗೂ ಕೋರ್ಸ ವಿವರಣಾ ಪತ್ರವನ್ನು ನೀಡಲಾಗುತ್ತದೆ.**

**ಡಿಸೆಂಬರ 15 ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನವಾಗಿರುತ್ತದೆ.**

ಅರ್ಜಿ ಫಾರ್ಮ ಹಾಗೂ ಕೋರ್ಸ ವಿವರಣಾ ಪತ್ರ ಪಡೆಯಲು ಸ್ವವಿವರ ಹಾಗೂ ರೂ. 100 ಗಳನ್ನು ಪೋಸ್ಟಲ್ ಆರ್ಡರ್‌ನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿ., ಬೆಂಗಳೂರು ಇವರ ಹೆಸರಿಗೆ ಪಡೆದು ಕೇಂದ್ರ ಕಛೇರಿಗೆ ಅಥವಾ ಪ್ರಾಂತೀಯ ಕಛೇರಿಗಳಿಗೆ ಕಳುಹಿಸುವುದು.

ಹೆಚ್ಚಿನ ವಿವರಗಳಿಗೆ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ ಹಾಗೂ ಪ್ರಾಂತೀಯ ಕಛೇರಿಗಳನ್ನು ಸಂಪರ್ಕಿಸಬಹುದಾಗಿದೆ.

**ಸಂಪರ್ಕ ದೂರವಾಣಿ : ಕವಿತ -8884466722**

ಕೇಂದ್ರ ಕಛೇರಿ : 080-23378375-80, 23474408, 23573291, ಬೆಂಗಳೂರು ಪ್ರಾಂತೀಯ ಕಛೇರಿ: 080-23525546, ಮೈಸೂರು ಪ್ರಾಂತೀಯ ಕಛೇರಿ: 0821-2332299, ಬೆಳಗಾವಿ ಪ್ರಾಂತೀಯ ಕಛೇರಿ: 0831-2401551, ಕಲಬುರಗಿ ಪ್ರಾಂತೀಯ ಕಛೇರಿ: 08472-270222.

**ಸಹಿ/-**
**(ಶರಣಗೌಡ ಜಿ. ಪಾಟೀಲ)**
**ವ್ಯವಸ್ಥಾಪಕ ನಿರ್ದೇಶಕರು**

# ಹೊಸ ಸೌಹಾರ್ದ ಸಹಕಾರಿಗಳ ನೊಂದಣಿ ಅಭಿಯಾನ : 100 ಸೌಹಾರ್ದ ಸಹಕಾರಿಗಳ ಪ್ರಾರಂಭಿಸುವ ಗುರಿ ಮೈಸೂರು ಪ್ರಾಂತಿಯ ಕಛೇರಿಯಿಂದ 50 ವಲಯವಾರು ಪ್ರವರ್ತಕರ ಸಭೆಗಳು

ಮೈಸೂರು ವಿಭಾಗದ 8 ಜಿಲ್ಲೆಗಳ 44 ತಾಲ್ಲೂಕುಗಳಲ್ಲಿ 50 ಉದ್ದೇಶಿತ ಹೊಸ ಸೌಹಾರ್ದ ಸಹಕಾರಿಗಳ ಪ್ರವರ್ತಕರ ಸಭೆಗಳನ್ನು ಆಯೋಜಿಸಲಾಗಿದ್ದು 1ನೇ ನವೆಂಬರ 2018 ರಂದು ಚಾಮರಾಜನಗರದಿಂದ ಪ್ರಾರಂಭವಾಗಿ ಉಡುಪಿಯಲ್ಲಿ ಕೊನೆಗೊಳ್ಳುವಂತೆ ಡಿಸೆಂಬರ ಅಂತ್ಯದ ವರೆಗೆ ಹೊಸ ಸೌಹಾರ್ದ ಸಹಕಾರಿಗಳ ನೊಂದಣಿ ಅಭಿಯಾನವನ್ನು ಮೈಸೂರು ವಿಭಾಗೀಯ ಕಛೇರಿಯಿಂದ ಹಮ್ಮಿಕೊಳ್ಳಲಾಗಿದೆ. ಪ್ರತಿದಿನ ಬೆಳಿಗ್ಗೆ 11.00 ಘಂಟೆಯಿಂದ 1.00 ಘಂಟೆಯವರೆಗೆ ಹಾಗು ಮಧ್ಯಾಹ್ನ 4.00 ಘಂಟೆಯಿಂದ 6.00 ಘಂಟೆಯವರೆಗೆ ಪ್ರವರ್ತಕರ ಸಭೆಗಳು ನಡೆಯುತ್ತವೆ.

ವಿಭಾಗೀಯ ಅಧಿಕಾರಿ ಶ್ರೀ ವೈ. ಕುಮಾರರವರ (8884466705) ನೇತೃತ್ವದಲ್ಲಿ ತಂಡ ತಂಡವಾಗಿ ಈ ಅಭಿಯಾನ ಕಾರ್ಯನಿರ್ವಹಿಸುತ್ತದೆ. ಸೌಹಾರ್ದ ಸಹಕಾರಿ ಸಂಸ್ಥೆಗಳನ್ನು ಪ್ರಾರಂಭಿಸಲು ಅಪೇಕ್ಷಿತರಾದ ಸಹಕಾರಿಗಳು ಶ್ರೀ ಶಿವಕುಮಾರ ಬಿರಾದಾರ, ಕಾನೂನು ಅಧಿಕಾರಿ (8884466712) ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಸುರೇಶ ಆರ್.ಎಸ್. (8884466717), ಶ್ರೀ ಚಂದ್ರಶೇಖರ ಎಮ್. (8884460266) ಶ್ರೀ ಗುರುಪ್ರಸಾದ, (8884466713) ಶ್ರೀ ವಿಜಯ ಬಿ.ಎಸ್. (8884460275) ಸಂತೋಷ ಕುಮಾರ ಎಮ್.ಜೆ. (9513566612) ಇವರುಗಳನ್ನು ಸಂಪರ್ಕಿಸಲು ಕೋರಿದೆ.

## ಸಾಲ ವಸೂಲಾತಿ ತರಬೇತಿ ಕಾರ್ಯಕ್ರಮ – ದಕ್ಷಿಣ ಕನ್ನಡ

**ದಕ್ಷಿಣ ಕನ್ನಡ** : ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುವ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ಸಾಲ ವಸೂಲಾತಿ ತರಬೇತಿ ಕಾರ್ಯಕ್ರಮವನ್ನು ದಿನಾಂಕ: 23.10.2018ರಂದು ಅಯೋಜಿಸಲಾಗಿತ್ತು.

ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಬಿ.ಕೆ.ಸಲೀಂ, ಸಹಕಾರಿಗಳ ಉಪನಿಬಂಧಕರು, ದಕ್ಷಿಣ ಕನ್ನಡ ಜಿಲ್ಲೆ ಇವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಎ. ಸುರೇಶ್ ರೈ, ಅಧ್ಯಕ್ಷರು, ಒಡಿಯೂರು ಶ್ರೀ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಮಂಗಳೂರು ಇವರು ವಹಿಸಿದ್ದರು.

ನಂತರದಲ್ಲಿ ತರಬೇತಿ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಶ್ರೀಧರ ಸೋಮಾಯಾಜಿ, ಮುಖ್ಯ ಕಾರ್ಯನಿರ್ವಾಹಕರು, ಶ್ರೀ ಗುರುನರಸಿಂಹ ಸೌಹಾರ್ದ ಸಹಕಾರಿ ನಿ., ಸಾಲಿಗ್ರಾಮ ಇವರು ಭಾಗವಹಿಸಿ, ಸಾಲ ಪತ್ರಗಳ ನಿರ್ವಹಣೆ ಕುರಿತು ತರಬೇತಿ ನೀಡಿದರು ಹಾಗೂ ಶ್ರೀ ಮಂಜುನಾಥ್ ಸಿಂಗ್ ಎಸ್.ಜಿ, ಸಹಕಾರಿಗಳ ಸಹಾಯಕ ನಿಬಂಧಕರು, ಮಂಗಳೂರು ಇವರು ಸಾಲ



ವಸೂಲಾತಿ ಮತ್ತು ದಾವಾ ದಾಖಲಾತಿ ಕುರಿತು ತರಬೇತಿ ನೀಡಿದರು.

ಕಾರ್ಯಾಗಾರದಲ್ಲಿ ಒಟ್ಟು 60 ಸೌಹಾರ್ದ ಸಹಕಾರಿಯಿಂದ 74 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಪ್ರತಿನಿಧಿಗಳು ಸಂಯುಕ್ತ ಸಹಕಾರಿಯಿಂದ ಈ ರೀತಿಯ ದೈನಂದಿನ ಚಟುವಟಿಕೆಗಳಿಗೆ ಅನುಕೂಲವಾಗುವ ರೀತಿಯ ತರಬೇತಿ ಕಾರ್ಯಕ್ರಮವನ್ನು ಮುಂದಿನ ದಿನಗಳಲ್ಲಿ ಆಯೋಜಿಸಬೇಕೆಂಬ ಅಭಿಪ್ರಾಯ ವ್ಯಕ್ತಪಡಿಸಿದರು.

## ವಿಷಯಾಧಾರಿತ ತರಬೇತಿ ಕಾರ್ಯಕ್ರಮ - ಹಾಸನ

**ಹಾಸನ** : ಹಾಸನ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುವ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳು ಮತ್ತು ಸಿಬ್ಬಂದಿಗಳಿಗಾಗಿ ದಿನಾಂಕ 29.10.2018ರಂದು ಒಂದು ದಿನದ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಅಯೋಜಿಸಲಾಗಿತ್ತು. ಕಾರ್ಯಾಗಾರದ ಉದ್ಘಾಟನೆಯನ್ನು ಹಾಗೂ ಅಧ್ಯಕ್ಷತೆಯನ್ನು ಶ್ರೀ ಶಿವರುದ್ರಪ್ಪ, ಅಧ್ಯಕ್ಷರು, ಶ್ರೀ ಪುಷ್ಪಗಿರಿ ಸೌಹಾರ್ದ ಸಹಕಾರಿ ನಿ., ಹಾಸನ ಇವರು ವಹಿಸಿದ್ದರು. ಕಾರ್ಯಾಗಾರದಲ್ಲಿ ಒಟ್ಟು 19 ಸೌಹಾರ್ದ ಸಹಕಾರಿಯಿಂದ 19 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.



# ರಾಯಚೂರು ಜಿಲ್ಲಾ ಸಂಪರ್ಕ ಕಛೇರಿ ಉದ್ಘಾಟನಾ ಕಾರ್ಯಕ್ರಮ



**ರಾಯಚೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಬಾಗಲಕೋಟೆ ಜಿಲ್ಲಾ ಸಂಪರ್ಕ ಕಛೇರಿಯ ಉದ್ಘಾಟನಾ ಕಾರ್ಯಕ್ರಮವನ್ನು ದಿನಾಂಕ : 02.11.2018 ರಂದು ಮಾನವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ಆವರಣ, ಅಪರ್ಣ ಚಿತ್ರಮಂದಿರ, ಸಿಂಧನೂರು ರಸ್ತೆ, ಮಾನವಿ, ರಾಯಚೂರು ಇಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಛೇರಿಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ನಿಕಟಪೂರ್ವ ಅಧ್ಯಕ್ಷರಾದ ಹಾಗೂ ಹಾಲಿ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ರವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಆರ್. ತಿಮ್ಮಯ್ಯ ಶೆಟ್ಟಿ ರವರು ವಹಿಸಿದರು.

ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ವೈ.ಟಿ. ಪಾಟೀಲ, ಶ್ರೀ ಬಿ. ರಾಜಶೇಖರ, ಹಾಗೂ ಶ್ರೀ ಕೆ. ವೀರುಪಾಕ್ಷಪ್ಪ, ಮಾನ್ಯ ಮಾಜಿ ಸಂಸದರು ಹಾಗೂ ಮುಖ್ಯ ಪ್ರವರ್ತಕರು, ರಾಯಚೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ರಾಯಚೂರು, ಶ್ರೀ ಐ.ಎಸ್. ಗಿರೆಡ್ಡಿ, ಮಾನ್ಯ ಸಹಕಾರಿಗಳ ಜಂಟಿ ನಿಬಂಧಕರು, ಕಲಬುರಗಿ ಪ್ರಾಂತ, ರಾಯಚೂರು ಇವರು ಉಪಸ್ಥಿತರಿದ್ದರು.

# ಬಾಗಲಕೋಟೆ ಜಿಲ್ಲಾ ಸಂಪರ್ಕ ಕಛೇರಿ ಉದ್ಘಾಟನಾ ಕಾರ್ಯಕ್ರಮ



**ಬಾಗಲಕೋಟ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಬಾಗಲಕೋಟೆ ಜಿಲ್ಲಾ ಸಂಪರ್ಕ ಕಛೇರಿಯ ಉದ್ಘಾಟನಾ ಕಾರ್ಯಕ್ರಮವನ್ನು ದಿನಾಂಕ : 11.10.2018 ರಂದು ಹೋಟೆಲ್ ಅನುಗ್ರಹ ಡಿಲಕ್ಸ್, ಬಾಗಲಕೋಟ ಇಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಛೇರಿಯ ಉದ್ಘಾಟನೆಯನ್ನು ಮಾಜಿ ಸಚಿವರು ಹಾಗೂ ಹಾಲಿ ವಿಧಾನಪರಿಷತ್ ಸದಸ್ಯರಾದ ಶ್ರೀ ಡಾ ಶ್ರೀ ಎಸ್.ಆರ್. ಪಾಟೀಲರವರು ನೇರವೆರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ವಹಿಸಿದರು.

ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಗುರುನಾಥ ಜಾಂತಿಕರ, ಶ್ರೀ ಜಿ.ಎನ್.ಪಾಟೀಲ, ಶ್ರೀ ಸಿದ್ರಾಮಪ್ಪ ಉಪ್ಪಿನ, ಹಾಗೂ ಶ್ರೀ ಎಂ.ಜಿ.ಪಾಟೀಲ, ಮಾನ್ಯ ವೃತ್ತಿಪರ ನಿರ್ದೇಶಕರು, ಇವರು ಉಪಸ್ಥಿತರಿದ್ದರು.

# ಮಡಿಕೇರಿ ಜಿಲ್ಲಾ ಸಂಪರ್ಕ ಕಛೇರಿ ಉದ್ಘಾಟನಾ ಕಾರ್ಯಕ್ರಮ



**ಮಡಿಕೇರಿ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಮಡಿಕೇರಿ ಜಿಲ್ಲಾ ಸಂಪರ್ಕ ಕಛೇರಿಯ ಉದ್ಘಾಟನಾ ಕಾರ್ಯಕ್ರಮವನ್ನು ದಿನಾಂಕ : 26.10.2018 ರಂದು ಕೊಡಗು ವಿದ್ಯಾ ಇಲಾಖಾ ನೌಕರರ ಪತ್ತಿನ ಸೌಹಾರ್ದ ಸಹಕಾರಿಯ ಕಟ್ಟಡ, 2ನೇ ಮಹಡಿ, ವಿಜಯ ಬ್ಯಾಂಕ್ ಹತ್ತಿರ, ಬಾಟಾಶೊ ರೋಂ ಮೇಲೆ, ಮುಖ್ಯರಸ್ತೆ, ಮಡಿಕೇರಿ ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಛೇರಿಯ ಉದ್ಘಾಟನೆಯನ್ನು ಮಾನ್ಯ ಸಹಕಾರ ಸಂಘಗಳ ಉಪ ನಿಬಂಧಕರಾದ ಶ್ರೀ ಡಿ. ಭಾಸ್ಕರಾಚಾರಿರವರು ಉದ್ಘಾಟಿಸಿದರು.

ನಂತರ ಸಹಕಾರಿಯ ಪಿತಾಮಹ ಶ್ರೀ ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲರವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೊಡಗು ವಿದ್ಯಾ ಇಲಾಖಾ ನೌಕರರ ಪತ್ತಿನ ಸೌಹಾರ್ದ ಸಹಕಾರಿಯ ಮಾನ್ಯ ನಿರ್ದೇಶಕರು ಹಾಗೂ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಎ ಡಿ ಸೋಮಯ್ಯರವರು ವಹಿಸಿದ್ದರು. ಮಾನ್ಯ ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ಹೆಚ್. ಡಿ. ರವಿಕುಮಾರ್‌ರವರು ಉಪಸ್ಥಿತರಿದ್ದರು. ಸದರಿ ಕಾರ್ಯಕ್ರಮದಲ್ಲಿ 7 ಸೌಹಾರ್ದ ಸಹಕಾರಿಗಳಿಂದ 25 ಪ್ರತಿನಿಧಿಗಳು ಭಾಗವಹಿಸಿದ್ದರು.

## ಅಧ್ಯಕ್ಷರು ಹಾಗೂ ನಿರ್ದೇಶಕರ ಭೇಟಿ



**ಸಾಲಿಗ್ರಾಮ** : ಶ್ರೀ ಗುರುನರಸಿಂಹ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಸಾಲಿಗ್ರಾಮ ಸದರಿ ಸಹಕಾರಿಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರು ಇದರ ಅಧ್ಯಕ್ಷರಾದ ಸನ್ಮಾನ್ಯ ಬಿ.ಹೆಚ್. ಕೃಷ್ಣಾರೆಡ್ಡಿಯವರು ಭೇಟಿ ನೀಡಿರುತ್ತಾರೆ. ಸಹಕಾರಿಯ ಪ್ರಧಾನ ವ್ಯವಸ್ಥಾಪಕ ಜಿ. ಎಸ್. ಸೋಮಾಯಾಜಿಯವರು ಸ್ವಾಗತ ಕೋರಿ ಸಹಕಾರಿಯು ನಡೆದ ಬಂದ ದಾರಿಯ ಕಿರು ಪರಿಚಯ ಮಾಡಿದರು. ಸಹಕಾರಿಯ ಅಧ್ಯಕ್ಷ ಶ್ರೀ ಆನಂದ ಸಿ. ಕುಂದರ್ ರವರು ಸನ್ಮಾನ್ಯ ಕೃಷ್ಣಾರೆಡ್ಡಿಯವರಿಗೆ ಶಾಲು ಹೊದಿಸಿ, ಮೈಸೂರು ಪೇಟ ತೊಡಿಸಿ ಸನ್ಮಾನಿಸಿ ಸನ್ಮಾನ್ಯ ಬಿ.ಹೆಚ್. ಕೃಷ್ಣಾರೆಡ್ಡಿಯವರ ಸೌಹಾರ್ದ ಭೇಟಿಗೆ ಸಂತಸ ವ್ಯಕ್ತಪಡಿಸಿದರು. ಸನ್ಮಾನಿತರು ಸಹಕಾರಿಯ ಕಾರ್ಯಚಟುವಟಿಕೆ ಬಗ್ಗೆ ಮೆಚ್ಚುಗೆ ವ್ಯಕ್ತ ಪಡಿಸಿ ಇಡೀ ರಾಜ್ಯದಲ್ಲಿಯೇ ಮಾದರಿ ಸಹಕಾರಿಯಾಗಿ ಮೂಡಿಬರಲೆಂದು ಹಾರೈಸಿದರು. ಅಂದಿನ ಕಾರ್ಯಕ್ರಮದಲ್ಲಿ ಸಹಕಾರಿಯ ಉಪಾಧ್ಯಕ್ಷ ಶ್ರೀ ಸಂಜೀವ ಜಿ., ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್.ಕೆ., ಶ್ರೀ ವಸಂತ ಶೆಟ್ಟಿ ಮತ್ತು ಸಂಯುಕ್ತ ಸಹಕಾರಿಯ ಅಧಿಕಾರಿಗಳು ಹಾಜರಿದ್ದರು.



**ಬಾಗಲಕೋಟ** : ಸುಂದರಾ ಸೌಹಾರ್ದ ಪತ್ತಿನ ಸಹಕಾರಿ ನಿ., ಬಾಗಲಕೋಟ ಸದರಿ ಸಹಕಾರಿಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರು ಇದರ ಅಧ್ಯಕ್ಷರಾದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿಯವರು ಭೇಟಿ ನೀಡಿರುತ್ತಾರೆ. ಸಹಕಾರಿಯ ಅಧ್ಯಕ್ಷರಾದ ಶ್ರೀ ಹನಮಂತಗೌಡ ಲೆಂಕನಗೌಡ ಪಾಟೀಲ ಹಾಗೂ ಆಡಳಿತ ಮಂಡಲಿ ಸ್ವಾಗತ ಕೋರಿ ಸಹಕಾರಿಯು ನಡೆದ ಬಂದ ದಾರಿಯ ಕಿರು ಪರಿಚಯ ಮಾಡಿದರು. ನಂತರ ಸಹಕಾರಿಯ ಅಧ್ಯಕ್ಷರು ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರಿಗೆ ಶಾಲು ಹೊದಿಸಿ ಸನ್ಮಾನಿಸಿದರು.

## ಶ್ರೀ ಜಗದೀಶ ಕವಟಗಿಮಠ ಆಯ್ಕೆ

**ಚಿಕ್ಕೋಡಿ** : ದಿ ಚಿಕ್ಕೋಡಿ ತಾಲ್ಲೂಕಾ ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರಿ ಸಂಘ ನಿಪ್ಪಾಣಿ ಇದರ ಚುನಾವಣೆಯಲ್ಲಿ ಅವಿರೋಧವಾಗಿ ಸತತ 2ನೇ ಬಾರಿಗೆ ಅಧ್ಯಕ್ಷರಾಗಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಷಡಕ್ಷರಿ ಮೂಗೇರಿ ರವರು ಆಯ್ಕೆಯಾಗಿದ್ದಾರೆ.





**ಶಿವಮೊಗ್ಗ** : ದಿನಾಂಕ : 15.10.2018ರಂದು ವಿಪ್ರ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ ಸದರಿ ಸಹಕಾರಿಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರು ಇದರ ನಿರ್ದೇಶಕರಾದ ಶ್ರೀ ಆರ್.ವಿ. ದೇಶಪಾಂಡೆಯವರು ಭೇಟಿ ನೀಡಿ ಆಡಳಿತ ಮಂಡಳಿಯೊಂದಿಗೆ ಚರ್ಚಿಸಿರುತ್ತಾರೆ.

## ಆರ್.ಬಿ.ಐ ನಿರ್ದೇಶಕರಾದ ಶ್ರೀ ಸತೀಶ್ ಮರಾಠೆ ಹಾಗೂ ನಿವೃತ್ತ ಡೆಪುಟಿ ಗವರ್ನರ್ ಶ್ರೀ ಆರ್. ಗಾಂಧಿಯವರಿಗೆ ಸನ್ಮಾನ



**ಬೆಂಗಳೂರು :** ಆರ್.ಬಿ.ಐ ನಿರ್ದೇಶಕರಾದ ಶ್ರೀಯುತ ಸತೀಶ್ ಮರಾಠೆ ಹಾಗೂ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ರವರು ಬೆಂಗಳೂರು ನಗರದ ಸ್ಪಂದನ ಸೌಹಾರ್ದ ಸಹಕಾರಿಗಳಿಗೆ ಭೇಟಿ ನೀಡಿದರು.





ಬೆಂಗಳೂರು : ಆರ್.ಬಿ.ಐ ನಿರ್ದೇಶಕರಾದ ಶ್ರೀಯುತ ಸತೀಶ್ ಮರಾಠೆ ಹಾಗೂ ನಿವೃತ್ತ ಡೆಪುಟಿ ಗವರ್ನರ್ ಶ್ರೀ ಆರ್. ಗಾಂಧಿಯವರು ಕೇಂದ್ರ ಕಛೇರಿಗೆ ಭೇಟಿ ನೀಡಿದಾಗ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಆರ್. ತಿಮ್ಮಯ್ಯ ಶೆಟ್ಟಿ ರವರು ಸನ್ಮಾನಿಸಿದರು.



ಬೆಂಗಳೂರು: ಆರ್.ಬಿ.ಐ ನಿರ್ದೇಶಕರಾದ ಶ್ರೀಯುತ ಸತೀಶ್ ಮರಾಠೆ ಹಾಗೂ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲರವರು ನವ ಕಲ್ಯಾಣ ಕರ್ನಾಟಕ ಸೌಹಾರ್ದ ಸಹಕಾರಿಗೆ ಭೇಟಿ ನೀಡಿದರು.




ಬೆಂಗಳೂರು: ಸಂಯುಕ್ತ ಸಹಕಾರಿಯ ನಿರ್ದೇಶಕರಿಂದ ಸೌಹಾರ್ದ ಫೇಡರಲ್ ಬ್ಯಾಂಕ್ ಸ್ಥಾಪನೆಗೆ ಅನುಮತಿ ನೀಡುವ ಕುರಿತು ಆರ್.ಬಿ.ಐ. ನಿರ್ದೇಶಕ ಶ್ರೀ ಸತೀಶ್ ಮರಾಠೆ ರವರಿಗೆ ಮನವಿ.

# ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳಿಗಾಗಿ 10 ದಿನಗಳ ವ್ಯಕ್ತಿತ್ವ ವಿಕಸನ ವಿಶೇಷ ತರಬೇತಿಗೆ ಪ್ರತಿನಿಧಿಗಳನ್ನು ಕಳುಹಿಸುವ ಕುರಿತು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು, ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ಶಾಸನಬದ್ಧವಾಗಿ ರಚನೆಗೊಂಡು, ಅರೆನ್ಯಾಯಿಕ ಅಧಿಕಾರ (Quasi Judicial Powers)ವನ್ನು ಹೊಂದಿ ಕಾರ್ಯನಿರ್ವಹಿಸುತ್ತಿರುವ ಸೌಹಾರ್ದ ಸಹಕಾರಿಗಳ ಮಾತೃ ಸಂಸ್ಥೆಯಾಗಿದೆ. ಈ ಕಾಯ್ದೆಯಡಿಯಲ್ಲಿ 4409 ಸೌಹಾರ್ದ ಸಹಕಾರಿಗಳು ಕಾರ್ಯ ನಿರ್ವಹಿಸುತ್ತಿವೆ. ರಾಜ್ಯದ ಸಹಕಾರಿ ಕ್ಷೇತ್ರಕ್ಕೆ ಒಂದು ಹೊಸ ಚೈತನ್ಯವನ್ನು ನೀಡಿರುವ ಕ್ಷೇತ್ರ ಇದಾಗಿದೆ. ಈ ಸೌಹಾರ್ದ ಸಹಕಾರಿಗಳ ಮಾತೃ ಸಂಸ್ಥೆಯಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಕಾರ್ಯನಿರ್ವಹಿಸುತ್ತಿದ್ದು, ರಾಜ್ಯದ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗೆ ಪೂರಕವಾಗುವಂತಹ ಹಲವಾರು ತರಬೇತಿ ಕಾರ್ಯಕ್ರಮಗಳನ್ನು ರಾಜ್ಯಾದ್ಯಂತ ಹಮ್ಮಿಕೊಳ್ಳುತ್ತ ಬಂದಿದೆ. ಅದರಲ್ಲಿ ಪ್ರಮುಖವಾಗಿ ಸೌಹಾರ್ದ ಸಹಕಾರ ಕ್ಷೇತ್ರದ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳ ಮಾಹಿತಿ, ಜ್ಞಾನವನ್ನು ಒದಗಿಸುವುದರೊಂದಿಗೆ ವ್ಯಕ್ತಿತ್ವ ವಿಕಸನಕ್ಕೆ ಕೂಡ ಪೂರಕವಾಗುವಂತಹ ವಿಶಿಷ್ಠವಾದ 10 ದಿನಗಳ ತರಬೇತಿಯನ್ನು ಕಳೆದ ಎಂಟು ವರ್ಷಗಳಿಂದ ಆಯೋಜಿಸುತ್ತ ಬರಲಾಗಿದೆ. ಈ ಕಾರ್ಯಕ್ರಮಗಳು ಹೆಚ್ಚು ಪ್ರಯೋಜನಕಾರಿಯಾಗಿವೆ, ವ್ಯಕ್ತಿತ್ವ ವಿಕಸನಕ್ಕೆ ಉತ್ತಮ ಅವಕಾಶವಾಗಿತ್ತೆಂದು ಶಿಬಿರಾರ್ಥಿಗಳು ಹಾಗೂ ಅತಿಥಿ ಗಣ್ಯರು ಅಭಿಪ್ರಾಯ ನೀಡಿದ್ದಾರೆ.

ಪ್ರಸ್ತುತ, ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳಿಗಾಗಿ ಆಯೋಜಿಸುವ – 10 ದಿನಗಳ ವ್ಯಕ್ತಿತ್ವ ವಿಕಸನ ವಿಶೇಷ ತರಬೇತಿಯ 20ನೇ ತಂಡದ ತರಬೇತಿ ಕಾರ್ಯಕ್ರಮವನ್ನು ಪ್ರಾದೇಶಿಕ ಆಡಳಿತ ಸಹಕಾರ ನಿರ್ವಹಣಾ ಸಂಸ್ಥೆ, ಪದ್ಮನಾಭನಗರ, ಬನಶಂಕರಿ 2ನೇ ಹಂತ, ಬೆಂಗಳೂರು ಇಲ್ಲಿ ದಿನಾಂಕ 06 ರಿಂದ 15 ಡಿಸೆಂಬರ್ 2018 ರವರೆಗೆ ನಡೆಸಲು ತೀರ್ಮಾನಿಸಲಾಗಿದೆ. ಸೌಹಾರ್ದ ಸಹಕಾರಿಗಳ ಅಭಿವೃದ್ಧಿಯ ದೃಷ್ಟಿಯಿಂದ ಇಂತಹ ವಿಶೇಷ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅಭ್ಯರ್ಥಿಗಳನ್ನು ಕಳುಹಿಸುವುದು ಅಗತ್ಯವೆನಿಸುತ್ತದೆ.

ಕಾರ್ಯಕ್ರಮದಲ್ಲಿ 50 ಜನರಿಗೆ ಮಾತ್ರ ಭಾಗವಹಿಸಲು ಅವಕಾಶವಿರುವುದರಿಂದ ಮೊದಲು ಅರ್ಜಿಯನ್ನು ಸಲ್ಲಿಸಿದವರಿಗೆ ಆದ್ಯತೆ ನೀಡಲಾಗುವುದು. ತರಬೇತಿ ಪಡೆದಿರುವುದಕ್ಕೆ ಪ್ರಮಾಣ ಪತ್ರ ನೀಡಲಾಗುವುದು. ಸೌಹಾರ್ದ ಸಹಕಾರಿಗಳು ತಮ್ಮ ಸಹಕಾರಿಯಿಂದ ಭಾಗವಹಿಸುವ ಅಭ್ಯರ್ಥಿಗಳ ತರಬೇತಿ ಶುಲ್ಕ ಹಾಗೂ ಪ್ರಯಾಣ ವೆಚ್ಚವನ್ನು ಭರಿಸಬೇಕು. ಸಂಯುಕ್ತ ಸಹಕಾರಿಯು ಲಗತ್ತಿಸಿದ ನೋಂದಾವಣೆ ಅರ್ಜಿ ನಮೂನೆಯಲ್ಲಿ, ತಾವು ಕಳುಹಿಸುವ ಅಭ್ಯರ್ಥಿಗಳ ಹೆಸರು, ವಿಳಾಸ, ನಿರ್ವಹಿಸುತ್ತಿರುವ ಹುದ್ದೆ, ಇತ್ಯಾದಿ ವಿವರಗಳನ್ನು ಪ್ರತ್ಯೇಕವಾಗಿ ಭರ್ತಿಮಾಡಿ ಕಳುಹಿಸಿ ಭಾಗವಹಿಸುವಿಕೆಯನ್ನು ಖಚಿತಪಡಿಸಲು ತಿಳಿಸಿದೆ.

## ತರಬೇತಿ ಕಾರ್ಯಕ್ರಮದ ವಿವರಗಳು

| | | |
|---|---|---|
| **ಭಾಗವಹಿಸುವ ವರ್ಗ** | : | ಕಾರ್ಯದರ್ಶಿಗಳು, ಮುಖ್ಯಕಾರ್ಯನಿರ್ವಾಹಕರು, ಅಧಿಕಾರಿಗಳು ಹಾಗೂ ಸಿಬ್ಬಂದಿಗಳು |
| **ತರಬೇತಿಯ ಅವಧಿ** | : | 6 ದಿನ ಒಳಾಂಗಣ, 2 ದಿನ ಪ್ರಾಯೋಗಿಕ, 2 ದಿನ ಅಧ್ಯಯನ ಪ್ರವಾಸ – ಒಟ್ಟೂ 10 ದಿನ. |
| **ತರಬೇತಿಯ ಸ್ಥಳ** | : | ಪ್ರಾದೇಶಿಕ ಆಡಳಿತ ಸಹಕಾರ ನಿರ್ವಹಣಾ ಸಂಸ್ಥೆ, ಪದ್ಮನಾಭನಗರ, ಬೆಂಗಳೂರು. |
| **ನಿರ್ವಹಣಾ ವೆಚ್ಚ** | : | ರೂ. 5000/– ತಲಾ ಒಬ್ಬರಿಗೆ – ಊಟ, ವಸತಿ ಹಾಗೂ ಇತರೆ ವ್ಯವಸ್ಥೆಗಳಿಗಾಗಿ. |
| **ಅಭ್ಯರ್ಥಿಗಳ ಸಂಖ್ಯೆ** | : | 50 ಮಾತ್ರ |
| **ತರಬೇತಿಯ ದಿನಾಂಕ** | : | 06 ರಿಂದ 15 ಡಿಸೆಂಬರ್ 2018ರ ವರೆಗೆ |
| **ತರಬೇತಿ ಸೌಲಭ್ಯ** | : | ಊಟ, ಉಪಹಾರ, ವಸತಿ, ಅಧ್ಯಯನ ಸಾಹಿತ್ಯ, ಯೋಗ ತರಬೇತಿ, ಆರೋಗ್ಯ ತಪಾಸಣೆ ಹಾಗೂ ಉತ್ತಮ ಸಹಕಾರಿ/ಸಂಸ್ಥೆಗಳಿಗೆ ಅಧ್ಯಯನ ಭೇಟಿ. ಮಹಿಳೆಯರಿಗೆ ಪ್ರತ್ಯೇಕ ವಸತಿ ವ್ಯವಸ್ಥೆ ಇರುತ್ತದೆ. |

**ತರಬೇತಿಯ ನೋಂದಣಿ ಶುಲ್ಕವನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಹೆಸರಿನಲ್ಲಿ ಚೆಕ್/ಡಿಡಿಯನ್ನು ಕಳುಹಿಸುವ ಮೂಲಕ ಪಾವತಿಸುವುದು. ನೋಂದಾವಣೆಗೆ ಕೊನೆಯ ದಿನಾಂಕ : 25.11.2018**

## ತರಬೇತಿ ವಿಷಯಗಳು

- ಸಹಕಾರ ಚಳುವಳಿಯ ಹುಟ್ಟು ಬೆಳವಣಿಗೆ – ಸಹಕಾರ ತತ್ವಗಳು – ಸಹಕಾರ ಕಾಯ್ದೆ – ಸೌಹಾರ್ದ ಸಹಕಾರ ಕಾಯ್ದೆ ಆಶಯ – ಹುಟ್ಟು, ಬೆಳವಣಿಗೆ, ಕಾಯ್ದೆಯ ಮುಖ್ಯಾಂಶಗಳು.
- ಸಹಕಾರ ಕಾಯ್ದೆ ಹಾಗೂ ಸೌಹಾರ್ದ ಸಹಕಾರ ಕಾಯ್ದೆ ವ್ಯತ್ಯಾಸಗಳು, ಸೌಹಾರ್ದ ಸಹಕಾರಿಗಳ ಉಪವಿಧಿಗಳು ತಿದ್ದುಪಡಿ ವಿಧಾನ – ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳು – ಸಹಕಾರ ಕ್ಷೇತ್ರದ ಪ್ರಚಲಿತ ವಿಷಯಗಳು.
- ಕಚೇರಿ ಆಡಳಿತ ನಿರ್ವಹಣೆ – ಕಡತಗಳ ನಿರ್ವಹಣೆ – ಸಮಯ ಪಾಲನೆ.
- ಸಭೆಗಳು – ಆಡಳಿತ ಮಂಡಲಿ ಸಭೆ – ವಾರ್ಷಿಕ ಸಾಮಾನ್ಯ ಸಭೆ – ವಿಶೇಷ ಸಭೆ – ಪ್ರಾಯೋಗಿಕ–1
- ಸೌಹಾರ್ದ ಸಹಕಾರಿಗಳ ಲೆಕ್ಕಪತ್ರಗಳ ನಿರ್ವಹಣೆ – ಜಮಾ ಖರ್ಚು – ಲಾಭ ನಷ್ಟ ತಖ್ತೆ – ಆಸ್ತಿ ಜವಾಬ್ದಾರಿ ತಃಖ್ತೆ – ಸಮನ್ವಯ ಪಟ್ಟಿ ಸಿದ್ಧಪಡಿಸುವುದು ಹಾಗೂ ವಿಶ್ಲೇಷಿಸುವುದು – ಪ್ರಾಯೋಗಿಕ–2
- ಹಣಕಾಸಿನ ನಿರ್ವಹಣೆ – ಸಂಪನ್ಮೂಲಗಳ ಕ್ರೂಢೀಕರಣ, ಲಾಭದಾಯಕ ಹೂಡಿಕೆ – ಬಡ್ಡಿಯೇತರ ಆದಾಯಗಳು.
- ಸಾಲಗಳ ನಿರ್ವಹಣೆ – ಗುಣಮಟ್ಟಗಳ ಸಾಲ ನೀಡಿಕೆ – ಸಾಲ ವಸೂಲಾತಿ ಕ್ರಮಗಳು – ಮಾರಾಟಗಾರನ ಕರ್ತವ್ಯಗಳು – ದಾವಾ ದಾಖಲಾತಿ ವಿಧಾನ, ಅಮಲ್ಜಾರಿ ಕ್ರಮಗಳು.
- ಸಾಲ ಪತ್ರ ದಾಖಲಾತಿ & ದಾವಾ ದಾಖಲಾತಿ – ಪ್ರಾಯೋಗಿಕ 03 & 04.
- ಗ್ರಾಹಕ ಸೇವೆಗಳ ನಿರ್ವಹಣೆ – ವ್ಯವಹಾರ ಅಭಿವೃದ್ಧಿ ಯೋಜನೆ – ಡಿಜಿಟಲ್ ಬ್ಯಾಂಕಿಂಗ್ – ನಗದು ರಹಿತ ಆರ್ಥಿಕತೆ – ಆದಾಯ ತೆರಿಗೆ ಕಾಯ್ದೆ ತಿದ್ದುಪಡಿ ವಿವರಗಳ ಬಗ್ಗೆ ಮಾಹಿತಿ.
- ಒತ್ತಡ ನಿರ್ವಹಣೆ – ವ್ಯಕ್ತಿತ್ವ ವಿಕಸನ – ಮಾನವೀಯ ಮೌಲ್ಯಗಳ ನಿರ್ವಹಣೆ – ಆಂತರಿಕ ಸಂಬಂಧಗಳ ನಿರ್ವಹಣೆ ಹಾಗೂ ಇತರೆ ಮಹತ್ವದ ಅಗತ್ಯ ವಿಷಯಗಳು.
- ಯೋಗ – ಧ್ಯಾನ – ಪ್ರಾಣಾಯಾಮ – ಆರೋಗ್ಯ ಕಾರ್ಯಯೋಜನೆಯ ರಚನೆ.

SWOT Analysis – ಮೌಲ್ಯಮಾಪನ – ಅನೌಪಚಾರಿಕ ಅವಧಿಗಳು – ಯಶಸ್ವಿ ಸಹಕಾರಿ ಸಂಸ್ಥೆಗಳೊಂದಿಗೆ ಸಂವಾದ ಇತ್ಯಾದಿ.

**ಸಂಪರ್ಕ ಅಧಿಕಾರಿ : ಕವಿತ ಆರ್. ಮೊ: 8884466722**

## ಕೌಸ್ತುಭ ವಿವಿದೋದ್ದೇಶ ಸೌಹಾರ್ದ ಸಹಕಾರಿಯ ಅಧ್ಯಕ್ಷರ ಆಯ್ಕೆ





**ಮೈಸೂರು:** ಕೌಸ್ತುಭ ವಿವಿದೋದ್ದೇಶ ಸೌಹಾರ್ದ ಸಹಕಾರಿಯ ಅಧ್ಯಕ್ಷರ ಅಕಾಲಿಕ ನಿಧನದಿಂದ ತೆರವುಗೊಂಡಿದ್ದ ಸ್ಥಾನವನ್ನು ಭರ್ತಿಮಾಡಲು ದಿನಾಂಕ 06–10–2018 ರಂದು ಬೆಳಗ್ಗೆ 11.00 ಗಂಟೆಗೆ ಸದರಿ ಸಹಕಾರಿಯ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಆಡಳಿತ ಮಂಡಳಿ ನಿರ್ದೇಶಕರು ಸಹಕಾರಿಯ ನೂತನ ಅಧ್ಯಕ್ಷರಾಗಿ ಶ್ರೀ ಜಿ.ವಿ. ಕೃಷ್ಣರವರನ್ನು ಒಮ್ಮತದಿಂದ ಆಯ್ಕೆಮಾಡಿರುತ್ತಾರೆ. ಈ ಸಂದರ್ಭದಲ್ಲಿ ಸಹಕಾರಿಯ ನೂತನ ಅಧ್ಯಕ್ಷರಾದ ಶ್ರೀ ಜಿ.ವಿ. ಕೃಷ್ಣರವರು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಹೆಚ್.ವಿ. ರಾಜೀವ್‌ರವರಿಗೆ ಹೂ ಗುಚ್ಛ ನೀಡುವ ಮೂಲಕ ತಮ್ಮ ಸಂತೋಷವನ್ನು ಹಂಚಿಕೊಂಡಿರುತ್ತಾರೆ. ಹಾಗೂ ಮೈಸೂರು ಪ್ರಾಂತೀಯ ಅಧಿಕಾರಿಯಾದ ಶ್ರೀ ವೈ. ಕುಮಾರ್‌ರವರು ಹೂಗುಚ್ಛ ನೀಡುವ ಮೂಲಕ ಶ್ರೀ ಜಿ.ವಿ.ಕೃಷ್ಣರವರನ್ನು ಅಭಿನಂದಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಭಗವಾನ್ ಆರ್., ನಿರ್ದೇಶಕರಾದ ಪರಾಶರಣ್ ಹಾಗೂ ವೀರರಾಘವನ್‌ರವರು ಉಪಸ್ಥಿತರಿದ್ದರು.

# ರಾಜ್ಯದ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿ ಚುನಾವಣೆ ನಡೆಸಲು ಚುನಾವಣಾಧಿಕಾರಿಗಳನ್ನು ನೇಮಕಾತಿ ಮಾಡುವ ಬಗ್ಗೆ ಪ್ರಾಧಿಕಾರದ ಅಧಿಸೂಚನೆ

**ಕರ್ನಾಟಕ ಸರ್ಕಾರ**

**ಸಹಕಾರ ಚುನಾವಣಾ ಪ್ರಾಧಿಕಾರ**

**ಸಂಖ್ಯೆ: ಸಚುಪ್ರಾ/ಪ್ರಾಸಂಚು/43/2018-19**

3ನೇ ಮಹಡಿ, ಟಿ.ಟಿ.ಎಂ.ಸಿ.ಕಟ್ಟಡ "ಎ"ಬ್ಲಾಕ್,
ಶಾಂತಿನಗರ, ಬೆಂಗಳೂರು-560027
**ದಿನಾಂಕ:29.09.2018**

**ವಿಷಯ:** ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 ಮತ್ತು ನಿಯಮಗಳು 1960ರ ನಿಯಮ 2(ಐ-1) ಮತ್ತು 13ಬಿಬಿ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004 ನಿಯಮ 2(ಜಿ-2) ರಂತೆ ದಿನಾಂಕ 01.01.2019ರಿಂದ 31.12.2019ರವರೆಗೆ ಪದಾವಧಿ ಮುಗಿಯಲಿರುವ ಎಲ್ಲಾ ರೀತಿಯ ಪ್ರಾಥಮಿಕ ಸಹಕಾರ ಸಂಘಗಳ/ಸಹಕಾರಿಗಳ ಆಡಳಿತ ಮಂಡಲಿ ಚುನಾವಣೆ ನಡೆಸಲು ಚುನಾವಣಾಧಿಕಾರಿಗಳನ್ನು ನೇಮಕಾತಿ ಮಾಡುವ ಬಗ್ಗೆ.

**ಉಲ್ಲೇಖ:**
1. (ಸರ್ಕಾರದ ಪತ್ರ ಸಂಖ್ಯೆ: ಸಿಒ 217 ಸಿಎಲ್ಎಂ 2015 ದಿನಾಂಕ 7.12.2015)/ಸಹಕಾರ ಸಂಘಗಳ ನಿಬಂಧಕರ ಪತ್ರ ಸಂಖ್ಯೆ: ಅರ್ಎಸ್ಆರ್/ಎಕ್ಸ್ಎಂಸಿ/ಚುನ.ನೇ/124/2015-16 ದಿನಾಂಕ 08.12.2015
2. ಸಹಕಾರ ಚುನಾವಣಾ ಪ್ರಾಧಿಕಾರದ ಆದೇಶ ಸಂಖ್ಯೆ:ಸಚುಪ್ರಾ/ಚು.ಅ.ನೇ/05/2017 ದಿನಾಂಕ:01.08.2017
3. ಸಹಕಾರ ಸಂಘಗಳ ಉಪನಿಬಂಧಕರು, ಬೆಳಗಾವಿ ಜಿಲ್ಲೆ ಇವರ ಪತ್ರ ಸಂ:ಡಿಆರ್ಎಲ್/ಚುನಾವಣೆ/98/2018-19 ದಿನಾಂಕ: 15-09-2018

★★★

**ಪ್ರಸ್ತಾವನೆ**

ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 13ಬಿಬಿ ರಂತೆ, ಮೊದಲನೇ ಹಂತದ ಪ್ರಾಥಮಿಕ ಸಹಕಾರ ಸಂಘಗಳ/ ಸಹಕಾರಿಗಳ ಆಡಳಿತ ಮಂಡಲಿ ಸದಸ್ಯರ, ಸಾಮಾನ್ಯ, ಖಾಲಿಬಿದ್ದ ಸ್ಥಾನ ಮತ್ತು ಹೊಸದಾಗಿ ನೋಂದಣಿಯಾದ ಸಹಕಾರ ಸಂಘಗಳು/ಸಹಕಾರಿಗಳ ಚುನಾವಣೆಯನ್ನು ನಡೆಸಲು ಚುನಾವಣಾ ಪ್ರಾಧಿಕಾರವು ದಿನಾಂಕ 01.01.2018 ರಿಂದ 31.12.2018ರವರೆಗೆ ಉಲ್ಲೇಖ(2)ರ ಆದೇಶದಲ್ಲಿ ಚುನಾವಣಾಧಿಕಾರಿಗಳನ್ನು ನೇಮಕಾತಿ ಮಾಡಲಾಗಿದೆ.

--2

-2-

ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 13ಬಿಬಿ ರಲ್ಲಿ ಪ್ರದತ್ತವಾದ ಅಧಿಕಾರದಂತೆ, 2019ನೇ ಸಾಲಿನಲ್ಲಿ ಅಂದರೆ ದಿನಾಂಕ: 01.01.2019 ರಿಂದ 31.12.2019ರವರೆಗೆ ಆಡಳಿತ ಮಂಡಲಿ ಪದಾವಧಿ ಮುಕ್ತಾಯವಾಗಲಿರುವ ಪ್ರಾಥಮಿಕ ಸಹಕಾರ ಸಂಘಗಳ/ ಸಹಕಾರಿಗಳ ಆಡಳಿತ ಮಂಡಲಿಯ ಸದಸ್ಯರ, ಸಾಮಾನ್ಯ, ಖಾಲಿಬಿದ್ದ ಸ್ಥಾನ ಮತ್ತು ಹೊಸದಾಗಿ ನೋಂದಣಿಯಾದ ಸಹಕಾರ ಸಂಘಗಳಿಗೆ/ ಸಹಕಾರಿಗಳಿಗೆ ಆಡಳಿತ ಮಂಡಲಿ ಚುನಾವಣೆ ತತ್ಪರಿಣಾಮ ಪದಾಧಿಕಾರಿಗಳ ಚುನಾವಣೆ ನಡೆಸಲು ಚುನಾವಣಾಧಿಕಾರಿಗಳನ್ನು ನೇಮಿಸಬೇಕಾಗಿರುತ್ತದೆ.

ಜಿಲ್ಲಾ ಉಪನಿಬಂಧಕರು, ಬೆಳಗಾಂ ಇವರು ತಮ್ಮ ಉಲ್ಲೇಖ (3)ರ ಪತ್ರದಂತೆ ಪ್ರಸ್ತಾವನೆ ಸಲ್ಲಿಸಿ ದಿನಾಂಕ: 01.01.2019 ರಿಂದ 31.12.2019ರವರೆಗೆ ಹೆಚ್ಚಿನ ಸಹಕಾರ ಸಂಘಗಳ ಚುನಾವಣೆ ನಡೆಯಬೇಕಾಗಿದ್ದು, ಅದರಲ್ಲೂ ಸುಮಾರು 1219 ಸಹಕಾರ ಸಂಘಗಳ ಚುನಾವಣೆ ಫೆಬ್ರವರಿ 2019ರಲ್ಲಿ ನಡೆಯಬೇಕಾಗಿರುತ್ತದೆ. ಆದ್ದರಿಂದ, ತಾಲ್ಲೂಕು ಮಟ್ಟಕ್ಕಿಂತ ಕಡಿಮೆ ವ್ಯಾಪ್ತಿ ಇರುವ ಸಹಕಾರ ಸಂಘಗಳಿಗೆ ಹೆಚ್ಚುವರಿ ಚುನಾವಣಾಧಿಕಾರಿಗಳನ್ನು ನೇಮಿಸಲು ಕೋರಿರುತ್ತಾರೆ.

ಮುಂದುವರೆದು, ದಿನಾಂಕ:24-09-2018 ಮತ್ತು 25-09-2018ರಂದು ಜಿಲ್ಲೆಯ ಚುನಾವಣಾಧಿಕಾರಿಗಳೊಂದಿಗೆ ಚುನಾವಣೆ ವಿಷಯದ ಬಗ್ಗೆ ಚರ್ಚಿಸಲಾಗಿ, ಕಂಡು ಬಂದ ಅಂಶವೇನೆಂದರೆ, ಬಹಳಷ್ಟು ಕಡೆ ನಿಗದಿತ ಅವಧಿಯಲ್ಲಿ ಚುನಾವಣೆ ನಡೆಸದೇ ಇದ್ದು, ಆಡಳಿತಾಧಿಕಾರಿಗಳನ್ನು ನೇಮಿಸಿರುವುದನ್ನು ಗಮನಿಸಿಲಾಗಿದೆ. ಆದರೆ, ಕಾಯ್ದೆ ಮತು ನಿಯಮಗಳ ಪ್ರಕಾರ ಆಡಳಿತ ಮಂಡಲಿಯ ಅಧಿಕಾರಾವಧಿ ಮುಗಿಯುವುದರೊಳಗೆ ಚುನಾವಣೆಯನ್ನು ನಿಗದಿತ ವೇಳೆಯಲ್ಲಿ ನಡೆಸಬೇಕಾಗಿರುತ್ತದೆ. ಇದರಿಂದ ಕೆಲವು ಚುನಾವಣಾಧಿಕಾರಿಗಳಿಗೆ ನಿಗದಿಪಡಿಸಿರುವ ವ್ಯಾಪ್ತಿಯನ್ನು ಬದಲಾಯಿಸುವುದು ಸೂಕ್ತವೆಂದು ಅಭಿಪ್ರಾಯಿಸಿದೆ.

ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 (2015ರ ತಿದ್ದುಪಡಿ)ರ ನಿಯಮ 2(ಐ-1) ಮತ್ತು ನಿಯಮ 13ಬಿಬಿ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004 (2015ರ ತಿದ್ದುಪಡಿ)ರ ನಿಯಮ 2(ಜಿ-2)ಗಳಂತೆ ಮೊದಲನೇ ಹಂತದ ಪ್ರಾಥಮಿಕ ಸಹಕಾರ ಸಂಘಗಳ/ಸಹಕಾರಿಗಳ ಆಡಳಿತ ಮಂಡಳಿಯ ಸಾಮಾನ್ಯ ಚುನಾವಣೆ ಮತ್ತು ಪದಾಧಿಕಾರಿಗಳ ಚುನಾವಣೆ, ಹೊಸದಾಗಿ ನೋಂದಣಿಯಾದ, ಆಕಸ್ಮಿಕವಾಗಿ ತೆರವಾದ ಮತ್ತು ಆಡಳಿತಾಧಿಕಾರಿ /ವಿಶೇಷಾಧಿಕಾರಿ ನೇಮಕಗೊಂಡ ಸಹಕಾರ ಸಂಘಗಳ/ಸಹಕಾರಿಗಳ ಆಡಳಿತ ಮಂಡಲಿ ಚುನಾವಣೆಗಳನ್ನು ನಡೆಸಲು ಚುನಾವಣಾಧಿಕಾರಿಗಳನ್ನು ನೇಮಕಾತಿ ಮಾಡಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

## ಆದೇಶ

**ಸಂಖ್ಯೆ: ಸಚುಪ್ರಾ/ಪ್ರಾಸಂಚು/43/2018-19** **ದಿನಾಂಕ:29.09.2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 (2015ರ ತಿದ್ದುಪಡಿ) ನಿಯಮ 2(ಐ-1), ನಿಯಮ 13ಬಿಬಿ ರಂತೆ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004 (2015ರ ತಿದ್ದುಪಡಿ) ನಿಯಮ 2(ಜಿ-2) ರಂತೆ ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಡಾ. ಎನ್.ಎಸ್. ಚನ್ನಪ್ಪಗೌಡ, ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ಆದ ನಾನು ಮೊದಲನೇ ಹಂತದ ಪ್ರಾಥಮಿಕ ಸಹಕಾರ ಸಂಘಗಳ/ಸಹಕಾರಿಗಳ ಆಡಳಿತ ಮಂಡಲಿಯ ಸಾಮಾನ್ಯ ಚುನಾವಣೆ ಮತ್ತು ಪದಾಧಿಕಾರಿಗಳ ಚುನಾವಣೆ, ಹೊಸದಾಗಿ ನೋಂದಣಿಯಾದ ಸಹಕಾರ

--3

-3-

ಸಂಘಗಳ/ಸಹಕಾರಿಗಳ ಆಡಳಿತ ಮಂಡಲಿ ಚುನಾವಣೆ, ಆಕಸ್ಮಿಕವಾಗಿ ತೆರವಾದ ಮತ್ತು ಆಡಳಿತಾಧಿಕಾರಿ/ವಿಶೇಷಾಧಿಕಾರಿ ನೇಮಕಗೊಂಡ ಸಹಕಾರ ಸಂಘಗಳ/ಸಹಕಾರಿಗಳ ಆಡಳಿತ ಮಂಡಲಿ ಚುನಾವಣೆಗಳನ್ನು ನಡೆಸಲು ಈ ಕೆಳಕಂಡ ಅಧಿಕಾರಿಗಳನ್ನು ಕೋಷ್ಟಕದಲ್ಲಿ ತಿಳಿಸಿರುವ ಪ್ರಾಥಮಿಕ ಸಹಕಾರ ಸಂಘಗಳಿಗೆ /ಪ್ರಾಥಮಿಕ ಸಹಕಾರಿ ಸಂಸ್ಥೆಗಳಿಗೆ ಚುನಾವಣಾಧಿಕಾರಿಗಳನ್ನಾಗಿ ದಿನಾಂಕ 01.01.2019 ರಿಂದ 31.12.2019ರವರೆಗೆ ನೇಮಕಾತಿ ಮಾಡಿ ಆದೇಶಿಸಿರುತ್ತೇನೆ.

| ಕ್ರ. ಸಂ. | ಚುನಾವಣಾಧಿಕಾರಿಯಾಗಿ ನೇಮಕಗೊಳಿಸಲ್ಪಟ್ಟ ಅಧಿಕಾರಿ | ಚುನಾವಣಾಧಿಕಾರಿಯ ವ್ಯಾಪ್ತಿಗೆ ಬರುವ ಸಹಕಾರ ಸಂಘಗಳು / ಸೌಹಾರ್ದ ಸಹಕಾರಿಗಳು |
|---|---|---|
| 1 | ಎಲ್ಲಾ ಜಿಲ್ಲೆಯ ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಬೆಂಗಳೂರು ನಗರ ಜಿಲ್ಲೆಯ ಉಪ ನಿಬಂಧಕರು 1, 2, 3 ಮತ್ತು 4 (ಬೆಳಗಾವಿ ಜಿಲ್ಲೆ ಹೊರತುಪಡಿಸಿ) | ಆಯಾ ಜಿಲ್ಲೆಯ ತಾಲ್ಲೂಕು ಮಟ್ಟಕ್ಕಿಂತ ಕಡಿಮೆ ಕಾರ್ಯವ್ಯಾಪ್ತಿ ಹೊಂದಿರುವ; (ಬೆಳಗಾವಿ ಜಿಲ್ಲೆ ಹೊರತುಪಡಿಸಿ)<br>ಎಲ್ಲಾ ವಿಧದ ಪ್ರಾಥಮಿಕ ಸಹಕಾರ ಸಂಘಗಳು/ ಪ್ರಾಥಮಿಕ ಸೌಹಾರ್ದ ಸಹಕಾರಿಗಳು |
| 2 | ಎ) ಸಹಕಾರ ಸಂಘಗಳ ಉಪ ನಿಬಂಧಕರು, ಬೆಳಗಾವಿ ಜಿಲ್ಲೆ; | ಬೈಲಹೊಂಗಲ ಉಪವಿಭಾಗದ ತಾಲ್ಲೂಕು ಮಟ್ಟಕ್ಕಿಂತ ಕಡಿಮೆ ಕಾರ್ಯವ್ಯಾಪ್ತಿ ಹೊಂದಿರುವ;<br>ಎಲ್ಲಾ ವಿಧದ ಪ್ರಾಥಮಿಕ ಸಹಕಾರ ಸಂಘಗಳು/ ಪ್ರಾಥಮಿಕ ಸೌಹಾರ್ದ ಸಹಕಾರಿಗಳು. |
| | ಬಿ) ಕೇಂದ್ರ ಸ್ಥಾನಿಕ ಸಹಾಯಕರು (H.Q.A), ಬೆಳಗಾವಿ ಪ್ರಾಂತ ಜಂಟಿ ನಿಬಂಧಕರ ಕಛೇರಿ, ಬೆಳಗಾಂ. | ಬೆಳಗಾಂ ಉಪವಿಭಾಗದ ತಾಲ್ಲೂಕು ಮಟ್ಟಕ್ಕಿಂತ ಕಡಿಮೆ ಕಾರ್ಯವ್ಯಾಪ್ತಿ ಹೊಂದಿರುವ;<br>ಎಲ್ಲಾ ವಿಧದ ಪ್ರಾಥಮಿಕ ಸಹಕಾರ ಸಂಘಗಳು/ ಪ್ರಾಥಮಿಕ ಸೌಹಾರ್ದ ಸಹಕಾರಿಗಳು. |
| | ಸಿ) ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಸಹಾಯಕ ನಿರ್ದೇಶಕರು, ಲೆಕ್ಕಪರಿಶೋಧನಾ ಇಲಾಖೆ, ಚಿಕ್ಕೋಡಿ. | ಚಿಕ್ಕೋಡಿ ಉಪವಿಭಾಗದ ತಾಲ್ಲೂಕು ಮಟ್ಟಕ್ಕಿಂತ ಕಡಿಮೆ ಕಾರ್ಯವ್ಯಾಪ್ತಿ ಹೊಂದಿರುವ;<br>ಎಲ್ಲಾ ವಿಧದ ಪ್ರಾಥಮಿಕ ಸಹಕಾರ ಸಂಘಗಳು/ ಪ್ರಾಥಮಿಕ ಸೌಹಾರ್ದ ಸಹಕಾರಿಗಳು. |
| 3 | ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು | ತಾಲ್ಲೂಕು ಮಟ್ಟ ಹಾಗೂ ಜಿಲ್ಲಾ ಮಟ್ಟಕ್ಕಿಂತ ಕಡಿಮೆ ಕಾರ್ಯವ್ಯಾಪ್ತಿ ಹೊಂದಿರುವ;<br>ಎಲ್ಲಾ ವಿಧದ ಪ್ರಾಥಮಿಕ ಸಹಕಾರ ಸಂಘಗಳು/ ಪ್ರಾಥಮಿಕ ಸೌಹಾರ್ದ ಸಹಕಾರಿಗಳು. (ಬೆಂಗಳೂರು ನಗರ ಜಿಲ್ಲೆ ಹೊರತುಪಡಿಸಿ) |

--4

| | | |
|---|---|---|
| 4 | ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ (ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದಂತೆ) | ಬೆಂಗಳೂರು ನಗರ ಜಿಲ್ಲೆಯ ತಾಲ್ಲೂಕು ಮಟ್ಟ ಕಾರ್ಯವ್ಯಾಪ್ತಿ ಹೊಂದಿರುವ; (ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದಂತೆ)<br>ಎಲ್ಲಾ ವಿಧದ ಪ್ರಾಥಮಿಕ ಸಹಕಾರ ಸಂಘಗಳು/ ಪ್ರಾಥಮಿಕ ಸೌಹಾರ್ದ ಸಹಕಾರಿಗಳು |
| 5 | ಸಹಕಾರ ಸಂಘಗಳ ಜಂಟಿ ನಿಬಂಧಕರು (ಪಟ್ಟಣ ಬ್ಯಾಂಕುಗಳ ವಿಭಾಗ), ಕೇಂದ್ರ ಕಛೇರಿ, ಬೆಂಗಳೂರು. | ಜಿಲ್ಲಾ ಮಟ್ಟ ಹಾಗೂ ಪ್ರಾಂತೀಯ ಮಟ್ಟದ ಕಾರ್ಯವ್ಯಾಪ್ತಿ ಹೊಂದಿರುವ;<br>ಎಲ್ಲಾ ವಿಧದ ಪ್ರಾಥಮಿಕ ಸೌಹಾರ್ದ ಸಹಕಾರಿಗಳು (ಬೆಂಗಳೂರು ಮತ್ತು ಮೈಸೂರು ಪ್ರಾಂತಕ್ಕೆ ಸೇರಿದ) |
| 6 | ಸಹಕಾರ ಸಂಘಗಳ ಅಪರ ನಿಬಂಧಕರು, ಕಾಡಾ, ಬೆಳಗಾವಿ (ಸರ್ಕಾರದ ಅಧಿಸೂಚನೆ ಸಂಖ್ಯೆ:ಸಇ/ 425/ಎಸಸೇ/2015,ದಿ:05/03/ 2016ರಲ್ಲಿ ಜಂಟಿ ನಿಬಂಧಕರ ಹುದ್ದೆಯನ್ನು ಅಪರ ನಿಬಂಧಕರ ಹುದ್ದೆಗೆ ಉನ್ನತೀಕರಣ ಗೊಳಿಸಿದೆ) | ಜಿಲ್ಲಾ ಮಟ್ಟ ಹಾಗೂ ಪ್ರಾಂತೀಯ ಮಟ್ಟದ ಕಾರ್ಯವ್ಯಾಪ್ತಿ ಹೊಂದಿರುವ; (ಬೆಳಗಾವಿ ಪ್ರಾಂತಕ್ಕೆ ಸಂಬಂಧಿಸಿದಂತೆ)<br>ಎಲ್ಲಾ ವಿಧದ ಪ್ರಾಥಮಿಕ ಸಹಕಾರ ಸಂಘಗಳು /ಪ್ರಾಥಮಿಕ ಸೌಹಾರ್ದ ಸಹಕಾರಿಗಳು |
| 7 | ಸಹಕಾರ ಸಂಘಗಳ ಜಂಟಿ ನಿಬಂಧಕರು, ಕಾಡಾ, ಕಲಬುರಗಿ | ಜಿಲ್ಲಾ ಮಟ್ಟ ಹಾಗೂ ಪ್ರಾಂತೀಯ ಮಟ್ಟದ ಕಾರ್ಯವ್ಯಾಪ್ತಿ ಹೊಂದಿರುವ; (ಕಲಬುರಗಿ ಪ್ರಾಂತಕ್ಕೆ ಸಂಬಂಧಿಸಿದಂತೆ)<br>ಎಲ್ಲಾ ವಿಧದ ಪ್ರಾಥಮಿಕ ಸಹಕಾರ ಸಂಘಗಳು/ಪ್ರಾಥಮಿಕ ಸೌಹಾರ್ದ ಸಹಕಾರಿಗಳು |
| 8 | ಸಹಕಾರ ಸಂಘಗಳ ಜಂಟಿ ನಿಬಂಧಕರು (ಕಾನೂನು ಕೋಶ), ಕೇಂದ್ರ ಕಛೇರಿ, ಬೆಂಗಳೂರು. | ಜಿಲ್ಲಾ ಮಟ್ಟ ಹಾಗೂ ಪ್ರಾಂತೀಯ ಮಟ್ಟದ ಕಾರ್ಯವ್ಯಾಪ್ತಿ ಹೊಂದಿರುವ; (ಬೆಂಗಳೂರು ಮತ್ತು ಮೈಸೂರು ಪ್ರಾಂತಕ್ಕೆ ಸಂಬಂಧಿಸಿದಂತೆ)<br>ಪ್ರಾಥಮಿಕ ಕೃಷಿಯೇತರ ಪತ್ತಿನ ಸಹಕಾರ ಸಂಘಗಳು /ಪಟ್ಟಣ ಸಹಕಾರ ಬ್ಯಾಂಕುಗಳು. |
| | | ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದಂತೆ; ತಾಲ್ಲೂಕು ಮಟ್ಟಕ್ಕೆ ಮೇಲ್ಪಟ್ಟು ಹಾಗೂ ಪ್ರಾಂತೀಯ ಮಟ್ಟದ ಕಾರ್ಯವ್ಯಾಪ್ತಿಯನ್ನು ಹೊಂದಿರುವ;<br>ಪ್ರಾಥಮಿಕ ಕೃಷಿಯೇತರ ಪತ್ತಿನ ಸಹಕಾರ ಸಂಘಗಳು /ಪಟ್ಟಣ ಸಹಕಾರ ಬ್ಯಾಂಕುಗಳು. |

--5



-5-

| | | |
|---|---|---|
| 9 | ಕೇಂದ್ರ ಕಛೇರಿಯ ಸಹಕಾರ ಸಂಘಗಳ ಅಪರ ನಿಬಂಧಕರುಗಳು (ಮಾಧ್ಯಮಿಕ, ಫೆಡರಲ್ ಮತ್ತು ಅಪೆಕ್ಸ್ ಸಹಕಾರ ಸಂಸ್ಥೆಗಳನ್ನು ಹೊರತುಪಡಿಸಿ) ಉಳಿದಂತೆ ಅವರವರ ವಿಭಾಗಕ್ಕೆ ಸಂಬಂಧಿಸಿದ ಪ್ರಾಥಮಿಕ ಸಹಕಾರ ಸಂಘಗಳು | ಜಿಲ್ಲಾ ಮಟ್ಟ ಹಾಗೂ ಪ್ರಾಂತೀಯ ಮಟ್ಟ ಕಾರ್ಯವ್ಯಾಪ್ತಿ ಹೊಂದಿರುವ; (ಬೆಂಗಳೂರು ಮತ್ತು ಮೈಸೂರು ಪ್ರಾಂತ) ಅವರವರ ವ್ಯಾಪ್ತಿಗೆ ಸಂಬಂಧಿಸಿದ ಪ್ರಾಥಮಿಕ ಸಹಕಾರ ಸಂಘಗಳು |
| | | ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದಂತೆ ತಾಲ್ಲೂಕು ಮಟ್ಟಕ್ಕೆ ಮೇಲ್ಪಟ್ಟು ಹಾಗೂ ಪ್ರಾಂತೀಯ ಮಟ್ಟದ ಕಾರ್ಯವ್ಯಾಪ್ತಿ ಹೊಂದಿರುವ; ಅವರವರ ವ್ಯಾಪ್ತಿಗೆ ಸಂಬಂಧಿಸಿದ ಪ್ರಾಥಮಿಕ ಸಹಕಾರ ಸಂಘಗಳು |
| 10 | ಸಹಕಾರ ಸಂಘಗಳ ಜಂಟಿ ನಿಬಂಧಕರು –(ಚುನಾವಣಾ ವಿಭಾಗ) ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು | ಪ್ರಾಂತೀಯ ಮಟ್ಟಕ್ಕೂ ಮೇಲ್ಪಟ್ಟು ಹಾಗೂ ರಾಜ್ಯ ಮಟ್ಟದ ಕಾರ್ಯವ್ಯಾಪ್ತಿ ಹೊಂದಿರುವ; ಎಲ್ಲಾ ವಿಧದ ಪ್ರಾಥಮಿಕ ಸಹಕಾರ ಸಂಘಗಳು/ ಪ್ರಾಥಮಿಕ ಸೌಹಾರ್ದ ಸಹಕಾರಿಗಳು |

*ಮೇಲೆ ಪ್ರತ್ಯಾಯೋಜಿಸಲ್ಪಟ್ಟ ಅಧಿಕಾರಿಗಳ ವ್ಯಾಪ್ತಿಗೆ ಒಂದು ವೇಳೆ ಪ್ರತ್ಯಾಯೋಜಿಸಲ್ಪಟ್ಟಿರುವ ಸಹಕಾರ ಸಂಸ್ಥೆಗಳ ಚುನಾವಣಾ ವ್ಯಾಜ್ಯಗಳು ಇತ್ಯರ್ಥಕ್ಕೆ ಬಂದಲ್ಲಿ ಸದರಿ ವ್ಯಾಜ್ಯಗಳನ್ನು ಇತರೆ ಸೂಕ್ತ ಪ್ರಾಧಿಕಾರಕ್ಕೆ ವರ್ಗಾಯಿಸತಕ್ಕದ್ದು ಎಂಬ ಸೂಚನೆಯೊಂದಿಗೆ ಸ್ಪಷ್ಟೀಕರಣ ನೀಡಿರುವಂತೆ ಕ್ರಮವಿಡತಕ್ಕದ್ದು.*

**ವಿಶೇಷ ಸೂಚನೆ:– ಅಧಿಕಾರ ಪ್ರತ್ಯಾಯೋಜನೆಯಂತೆ ಮೇಲಿನ ಕೋಷ್ಟಕದಲ್ಲಿ ಹಂಚಿಕೆ ಮಾಡಲಾಗಿರುವ ಎಲ್ಲಾ ವಿಧದ ಪ್ರಾಥಮಿಕ ಸಹಕಾರ ಸಂಘಗಳು /ಪ್ರಾಥಮಿಕ ಸಹಕಾರಿಗಳ ಚುನಾವಣೆ ಸಂಬಂಧಿಸಿದಂತೆ ಚುನಾವಣಾಧಿಕಾರಿಗಳನ್ನು ಸೂಚಿಸದೆ ಇದ್ದಲ್ಲಿ (ಅಂತಹ ಸಂಘಗಳು ಕೈತಪ್ಪಿ ಹೋಗಿದ್ದರೆ) ಅಂತಹ ಸಂಘಗಳ ಚುನಾವಣೆಯನ್ನು ಜರುಗಿಸುವ ಸಂಬಂಧ, ಸಂಬಂಧಪಟ್ಟ ಜಿಲ್ಲಾ ಉಪ ನಿಬಂಧಕರು ಕೂಡಲೇ ಪ್ರಾಧಿಕಾರದ ಗಮನಕ್ಕೆ ತರಲು ಸೂಚಿಸಿದೆ.**

ಚುನಾವಣಾಧಿಕಾರಿಗಳು ಅವರ ಕಾರ್ಯವ್ಯಾಪ್ತಿಗೆ ಬರುವಂತಹ ಸಹಕಾರ ಸಂಘಗಳ/ಸಹಕಾರಿಗಳ ಚುನಾವಣೆಯನ್ನು ಮತ್ತು ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆ ನಡೆಸಲು ರಿಟರ್ನಿಂಗ್ ಅಧಿಕಾರಿ ನೇಮಕಾತಿಗೆ ಪ್ರಾಧಿಕಾರದಿಂದ ಕಾಲಕಾಲಕ್ಕೆ ನೀಡಲಾದ ಸುತ್ತೋಲೆ, ಅಧಿಸೂಚನೆ ಮತ್ತು ಮಾರ್ಗಸೂಚಿಗಳನ್ನು, ತಿದ್ದುಪಡಿಯಾದ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮಗಳು ಮತ್ತು ನಿಯಮಗಳು ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮಗಳು ಮತ್ತು ನಿಯಮಾನುಸಾರ ರಿಟರ್ನಿಂಗ್ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳುವ ಮೂಲಕ ಪಾರದರ್ಶಕವಾಗಿ /ನಿಷ್ಪಕ್ಷಪಾತವಾಗಿ ಚುನಾವಣೆ ನಡೆಸಲು ಆದೇಶಿಸಿದೆ.

(ಡಾ.ಎನ್.ಎಸ್. ಚೆನ್ನಪ್ಪಗೌಡ)
**ಆಯುಕ್ತರು**
**ಸಹಕಾರ ಚುನಾವಣಾ ಪ್ರಾಧಿಕಾರ,**
**ಬೆಂಗಳೂರು.**

**--6**

# ರಾಜ್ಯದ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿ ಚುನಾವಣೆ ಹಾಗೂ ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಗಳನ್ನು ನಡೆಸುವ ಬಗ್ಗೆ ಪ್ರಾಧಿಕಾರದ ಅಧಿಸೂಚನೆ

**ಕರ್ನಾಟಕ ಸರ್ಕಾರ**

**ಸಹಕಾರ ಚುನಾವಣಾ ಪ್ರಾಧಿಕಾರ**

**ಸಂಖ್ಯೆ: ಸಚುಪ್ರಾ/ಪ್ರಾ.ಸಂ.ಚು/43/2018**

3ನೇ ಮಹಡಿ, ಟಿ.ಟಿ.ಎಂ.ಸಿ.ಕಟ್ಟಡ "ಎ"ಬ್ಲಾಕ್,
ಶಾಂತಿನಗರ, ಬೆಂಗಳೂರು-560027
**ದಿನಾಂಕ: 03.10.2018**

## ಅಧಿಸೂಚನೆ

**ವಿಷಯ:-** ದಿನಾಂಕ 01.01.2019 ರಿಂದ 31.12.2019 ರವರೆಗೆ ಅವಧಿ ಮುಗಿಯಲಿರುವ ಪ್ರಾಥಮಿಕ ಹಂತದ ಸಹಕಾರ ಸಂಘಗಳ ಮತ್ತು ಸಹಕಾರಿಗಳ ಆಡಳಿತ ಮಂಡಲಿಗೆ ಚುನಾವಣೆ ಹಾಗೂ ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಗಳನ್ನು ನಡೆಸುವ ಕುರಿತು.

**ಉಲ್ಲೇಖ:-**
1. ಸಹಕಾರ ಚುನಾವಣಾ ಪ್ರಾಧಿಕಾರದ ಅಧಿಸೂಚನೆ ಸಂಖ್ಯೆ:ಸಚುಪ್ರಾ/ಚುನಾವಣೆ/06/2017 ದಿನಾಂಕ:01.08.2017.
2. ತಿದ್ದುಪಡಿ ಅಧಿಸೂಚನೆ ಸಂಖ್ಯೆ: ಸಚುಪ್ರಾ/ಚುನಾವಣೆ/ ಜನವರಿ-ಡಿಸೆಂಬರ್/06/2017 ದಿನಾಂಕ : 10.10.2017.
3. ಸಹಕಾರ ಚುನಾವಣಾ ಪ್ರಾಧಿಕಾರದ ಆದೇಶ ಸಂಖ್ಯೆ: ಸಚುಪ್ರಾ/ಪ್ರಾ.ಸಂ.ಚು/43/2018ದಿನಾಂಕ:29.09.2018

★★★★★

ದಿನಾಂಕ 01.01.2018 ರಿಂದ 31.12.2018 ರವರೆಗೆ ಅವಧಿ ಮುಗಿಯಲಿರುವ ಎಲ್ಲಾ ರೀತಿಯ ಪ್ರಾಥಮಿಕ ಹಂತದ ಸಹಕಾರ ಸಂಘಗಳ ಮತ್ತು ಸಹಕಾರಿಗಳ ಆಡಳಿತ ಮಂಡಲಿಗೆ ಚುನಾವಣೆ ಹಾಗೂ ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಗಳನ್ನು ನಡೆಸಲು ಉಲ್ಲೇಖ (1) ಹಾಗೂ (2)ರ ಅಧಿಸೂಚನೆಗಳನ್ನು ಹೊರಡಿಸಲಾಗಿದೆ. ದಿನಾಂಕ 01.01.2019 ರಿಂದ 31.12.2019 ರವರೆಗೆ ಅವಧಿ ಮುಗಿಯಲಿರುವ ಪ್ರಾಥಮಿಕ ಹಂತದ ಸಹಕಾರ ಸಂಘಗಳ/ಸಹಕಾರಿಗಳ ಆಡಳಿತ ಮಂಡಳಿಗಳಿಗೆ ಉಲ್ಲೇಖ (3)ರಂತೆ ಚುನಾವಣಾಧಿಕಾರಿಗಳನ್ನು ನೇಮಿಸಲಾಗಿದೆ.

2019ನೇ ಸಾಲಿನಲ್ಲಿ ಬರುವ ಚುನಾವಣೆಗಳು ಈ ಹಿಂದೆ 2014ರಲ್ಲಿ ನಡೆದ ಚುನಾವಣೆಗಳಿಗೆ ಸಂಬಂಧಿಸಿದ ಪ್ರಾಥಮಿಕ ಸಹಕಾರ ಸಂಘಗಳು/ ಸಹಕಾರಿಗಳು, ಹೊಸದಾಗಿ ನೊಂದಣಿಯಾದ ಪ್ರಾಥಮಿಕ ಸಹಕಾರ ಸಂಘಗಳು / ಸಹಕಾರಿಗಳು ಹಾಗೂ ಆಕಸ್ಮಿಕವಾಗಿ ನಿರ್ದೇಶಕರ ಮಂಡಲಿಯಲ್ಲಿ ಸೃಷ್ಟಿಯಾದ ಖಾಲಿ ಹುದ್ದೆಗಳಿಗೆ ಸಂಬಂಧಿಸಿದಂತೆ ಇರುತ್ತದೆ. 2014ರಲ್ಲಿ ನಡೆದ ಪ್ರಾಥಮಿಕ ಸಹಕಾರ ಸಂಘಗಳು/ಸಹಕಾರಿಗಳಿಗೆ ಸಂಬಂಧಿಸಿದಂತೆ ಚುನಾವಣೆಗಳ ದಿನಾಂಕವನ್ನು ಆಯಾ ಜಿಲ್ಲೆಯ ಚುನಾವಣಾಧಿಕಾರಿಗಳ ಇ-ಮೇಲ್‌ಗೆ ಕಳುಹಿಸಲಾಗಿದೆ ಮತ್ತು ಪ್ರಾಧಿಕಾರದ ವೆಬ್‌ಸೈಟ್ www.ceckar.in ನಲ್ಲಿ upload ಮಾಡಲಾಗಿದೆ. ಈ ವಿವರಗಳನ್ನು ಗಮನಿಸಿದಾಗ, ಬಹಳಷ್ಟು ಪ್ರಾಥಮಿಕ ಸಹಕಾರ ಸಂಘಗಳ / ಸಹಕಾರಿಗಳ ಚುನಾವಣೆಗಳು ಜನವರಿ, ಫೆಬ್ರವರಿ-2019 ರಲ್ಲಿ ಬರುವುದರಿಂದ ಚುನಾವಣಾಧಿಕಾರಿಗಳು ಕೂಡಲೇ ಪ್ರಾಥಮಿಕ ಸಹಕಾರ ಸಂಘ / ಸಹಕಾರಿಗಳಿಗೆ ಚುನಾವಣೆ ನಡೆಸಲು ಕ್ರಮ ಕೈಗೊಳ್ಳತಕ್ಕದ್ದು. ಇ-ಮೇಲ್ ಮುಖಾಂತರ ಕಳುಹಿಸಿರುವ ಸಹಕಾರ ಸಂಘಗಳ/ಸಹಕಾರಿಗಳ ಪಟ್ಟಿಯಲ್ಲಿ ಒಂದು ಪಕ್ಷ ಚುನಾವಣೆ ನಡೆಯಬೇಕಾದ ಯಾವುದಾದರೂ ಪ್ರಾಥಮಿಕ ಸಹಕಾರ ಸಂಘಗಳ / ಸಹಕಾರಿಗಳ ಹೆಸರು ಅಥವಾ ನಡೆಯಬೇಕಾದ ಚುನಾವಣೆಯ ದಿನಾಂಕದಲ್ಲಿ ಅಥವಾ ಸಹಕಾರ ಸಂಘಗಳ/ಸಹಕಾರಿಗಳ ಕಾರ್ಯವ್ಯಾಪ್ತಿಯಲ್ಲಿ ವ್ಯತ್ಯಾಸ ಇದ್ದಲ್ಲಿ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 13(ಡಿ)ರಂತೆ ಕೂಡಲೇ ಕ್ರಮ ಕೈಗೊಂಡು ಪ್ರಾಧಿಕಾರಕ್ಕೆ ವರದಿ ಮಾಡಿ ಅನುಮೋದನೆ ಪಡೆದು ಚುನಾವಣೆ ನಡೆಸಲು ಕ್ರಮ ಕೈಗೊಳ್ಳತಕ್ಕದ್ದು.

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 39ಎ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರ ಕಲಂ 26ರಂತೆ ಹಾಲಿ ಪದಾಧಿಕಾರಿಗಳ ಅವಧಿ ಮುಗಿಯುವ ಮುನ್ನ ಪದಾಧಿಕಾರಿಗಳ ಆಯ್ಕೆಗಾಗಿ ಚುನಾವಣೆಯನ್ನು ನಡೆಸುವುದು ಕಾನೂನು ಪ್ರಕಾರ ಕಡ್ಡಾಯವಾಗಿರುತ್ತದೆ. ಆದ್ದರಿಂದ ಇ-ಮೇಲ್ ಮುಖಾಂತರ ಕಳುಹಿಸಿರುವ ಪಟ್ಟಿಯಂತೆ ಪದಾಧಿಕಾರಿಗಳ ಅವಧಿ ಮುಗಿಯುವ ದಿನಾಂಕದ ಒಂದು ತಿಂಗಳು ಮುಂಚಿತವಾಗಿ ಚುನಾವಣೆಗಳನ್ನು ನಡೆಸಲು ಕ್ರಮ ಕೈಗೊಳ್ಳತಕ್ಕದ್ದು.

ಇ-ಮೇಲ್ ಮುಖಾಂತರ ಕಳುಹಿಸಿರುವ ಪಟ್ಟಿಯಲ್ಲಿ ಚುನಾವಣೆಗೆ ಬಾಕಿ ಇದ್ದು, ಬಿಟ್ಟಿರುವ ಸಹಕಾರ ಸಂಘಗಳ/ಸಹಕಾರಿಗಳ ವಿವರವನ್ನು ನಮೂದಿಸುವುದು ಮತ್ತು ಸಹಕಾರ ಸಂಘ/ಸಹಕಾರಿಗಳಿಗೆ 2019 ರಲ್ಲಿ ಚುನಾವಣೆ ಆಗುವ

ದಿನಾಂಕವನ್ನು ನಮೂದಿಸಿ ಎರಡು ಹಂತದಲ್ಲಿ ಅಂದರೆ ಮಾರ್ಚ್–2019 ಮತ್ತು ಡಿಸೆಂಬರ್–2019ರ ಒಳಗೆ ಭರ್ತಿ ಮಾಡಿ ವಾಪಸ್ಸು ಈ ಕಛೇರಿಗೆ ಇ–ಮೇಲ್ ಮುಖಾಂತರ ಕಳುಹಿಸುವುದು.

ಚುನಾವಣಾಧಿಕಾರಿಗಳು/ರಿಟರ್ನಿಂಗ್ ಅಧಿಕಾರಿಗಳು ಚುನಾವಣೆ ನಡೆಸುವ ಸಂಬಂಧ ವಿವಿಧ ಹಂತಗಳಲ್ಲಿ ನಿಯಮಾನುಸಾರ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಈ ಅಧಿಸೂಚನೆಗೆ ಲಗತ್ತಿಸಿರುವ ಚೆಕ್‌ಲಿಸ್ಟ್‌ನ **(ಅನುಬಂಧ–01)**ರ ಸೂಚನೆಗಳನ್ನು ತಪ್ಪದೇ ಅನುಸರಿಸತಕ್ಕದ್ದು.

ಚುನಾವಣೆ ನಡೆಸಿದ ಕೂಡಲೆ ಪ್ರತಿ ಸಂಘದ / ಸಹಕಾರಿಯ ಆಡಳಿತ ಮಂಡಲಿ ಚುನಾವಣಾ ಫಲಿತಾಂಶ ಮತ್ತು ಪದಾಧಿಕಾರಿಗಳ ಫಲಿತಾಂಶಗಳನ್ನು ಚುನಾವಣಾಧಿಕಾರಿಗಳು ಪ್ರಾಧಿಕಾರಕ್ಕೆ ತಕ್ಷಣವೇ ವರದಿ ಮಾಡತಕ್ಕದ್ದು.

**ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 13ಇ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ 5ಸಿ ರಂತೆ** ಪ್ರಾಧಿಕಾರದಿಂದ ನೇಮಕಾತಿಮಾಡಲ್ಪಟ್ಟ ಚುನಾವಣಾಧಿಕಾರಿಗಳು ಎಲ್ಲಾ ರೀತಿಯ ಪ್ರಾಥಮಿಕ ಹಂತದ ಸಹಕಾರ ಸಂಘಗಳ/ಸಹಕಾರಿಗಳ ಆಡಳಿತ ಮಂಡಲಿಗಳ ಸಾಮಾನ್ಯ ಚುನಾವಣೆ ಮತ್ತು ಪದಾಧಿಕಾರಿಗಳ ಚುನಾವಣೆ, ಹೊಸದಾಗಿ ನೋಂದಣಿಯಾದ, ಆಕಸ್ಮಿಕವಾಗಿ ತೆರವಾದ ಮತ್ತು ಆಡಳಿತಾಧಿಕಾರಿ /ವಿಶೇಷಾಧಿಕಾರಿ ನೇಮಕಗೊಂಡ ಸಹಕಾರ ಸಂಘಗಳ/ಸಹಕಾರಿಗಳ ಚುನಾವಣೆಗಳನ್ನು ನಡೆಸಲು ಚುನಾವಣಾಧಿಕಾರಿಯು ರಿಟರ್ನಿಂಗ್ ಅಧಿಕಾರಿ ಮತ್ತು ಅಗತ್ಯವಿರುವಂತೆ ಒಬ್ಬ ಅಥವಾ ಹೆಚ್ಚು ಮಂದಿ ಸಹಾಯಕ ರಿಟರ್ನಿಂಗ್ ಅಧಿಕಾರಿಗಳನ್ನು randomization ಮುಖಾಂತರ ನೇಮಕಾತಿ ಮಾಡತಕ್ಕದ್ದು.

ಸಹಕಾರ ಸಂಘಗಳ/ಸಹಕಾರಿಗಳ ಚುನಾವಣೆ ನಡೆಸುವ ಸಂಬಂಧ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ / ನಿಯಮಗಳು ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ/ನಿಯಮಗಳು ಹಾಗೂ ಸಹಕಾರ ಸಂಘಗಳ/ಸಹಕಾರಿಗಳ ಬೈಲಾಗಳಿಗೆ ಅನುಗುಣವಾಗಿ ಸರಿಯಾದ ಮತದಾರರ ಪಟ್ಟಿಯನ್ನು ತಯಾರಿಸಲು ಮತ್ತು ಚುನಾವಣೆಯನ್ನು ನಿಯಮಾನುಸಾರ, ನಿಷ್ಪಕ್ಷಪಾತವಾಗಿ ಮತ್ತು ಪಾರದರ್ಶಕವಾಗಿ ಸಕಾಲಕ್ಕೆ ನಡೆಸುವ ಬಗ್ಗೆ ಸಹಕಾರ ಸಂಘಗಳ/ಸಹಕಾರಿಗಳ ಆಡಳಿತ ಮಂಡಲಿಗಳು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ / ನಿಯಮಗಳಂತೆ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ/ನಿಯಮಗಳಂತೆ ಚುನಾವಣೆ ನಡೆಸಲು ಚುನಾವಣಾಧಿಕಾರಿಗಳಿಗೆ ಮತ್ತು ರಿಟರ್ನಿಂಗ್ ಅಧಿಕಾರಿಗಳಿಗೆ ಅಗತ್ಯ ದಾಖಲಾತಿಗಳನ್ನು ಹಾಜರುಪಡಿಸಿ, ಮಾಹಿತಿಗಳನ್ನು ಒದಗಿಸುವ ಮುಖಾಂತರ ಚುನಾವಣೆಗಳನ್ನು ಸುಗಮವಾಗಿ ಸರಳ ರೀತಿಯಲ್ಲಿ ನಡೆಸಲು ಎಲ್ಲಾ ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು.

ಮುಖ್ಯವಾಗಿ, ಚುನಾವಣಾಧಿಕಾರಿಗಳು ಈ ಕೆಳಕಂಡಂತೆ ಪ್ರಾಧಿಕಾರಕ್ಕೆ ಮಾಹಿತಿ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ತಪ್ಪಿದಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು ಸಹಕಾರ ಇಲಾಖೆ ಇವರಿಗೆ ವರದಿ ಮಾಡುವುದರೊಂದಿಗೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 39(ಐ) ರಂತೆ ಕ್ರಮವಿಡಲಾಗುವುದು.

1 ಪದಾವಧಿಯು ಮುಕ್ತಾಯವಾಗುವ 120 ದಿನಗಳ ಪೂರ್ವದಲ್ಲಿ ಪ್ರಾಧಿಕಾರವು ನೀಡಿರುವ 13ಡಿ ನಮೂನೆಯಲ್ಲಿ ಹಾಗೂ 7ಎ ರಿಂದ 7ಡಿ ವರೆಗಿನ ಮಾಹಿತಿಯನ್ನು ಪ್ರಾಧಿಕಾರಕ್ಕೆ ಸಲ್ಲಿಸುವುದು.

2 ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 13–ಡಿ(3)ರ ರೀತ್ಯಾ ಚುನಾವಣಾ ದಿನಾಂಕಕ್ಕೆ 50 ದಿನಗಳ ಪೂರ್ವದಲ್ಲಿ ಹೊರಡಿಸತಕ್ಕ ಕರಡು ಮತದಾರರ ಪಟ್ಟಿಯನ್ನು ಪ್ರಾಧಿಕಾರಕ್ಕೆ ಸಲ್ಲಿಸುವುದು.

3 ಚುನಾವಣಾ ದಿನಾಂಕಕ್ಕೆ 15 ದಿನಗಳ ಪೂರ್ವದಲ್ಲಿ ಹೊರಡಿಸತಕ್ಕ ಅಂತಿಮ ಮತದಾರರ ಪಟ್ಟಿಯನ್ನು ಪ್ರಾಧಿಕಾರಕ್ಕೆ ಸಲ್ಲಿಸುವುದು.

4 ಸಹಕಾರಸಂಘಗಳ/ಸಹಕಾರಿಗಳ ಕಾರ್ಯವ್ಯಾಪ್ತಿಗನುಗುಣವಾಗಿ ರಿಟರ್ನಿಂಗ್ ಅಧಿಕಾರಿಗಳನ್ನು randomization ಮುಖಾಂತರ ನೇಮಿಸುವುದು ಮತ್ತು ಆದೇಶದ ಪ್ರತಿಯನ್ನು ಪ್ರಾಧಿಕಾರಕ್ಕೆ ಸಲ್ಲಿಸುವುದು.

5 ಚುನಾವಣೆ ಮುಕ್ತಾಯವಾದ ಕೂಡಲೇ ಚುನಾವಣಾ ಫಲಿತಾಂಶದ ಪ್ರತಿಗಳನ್ನು ಹಾಗೂ ನಮೂನೆ–8ಎ ರಿಂದ 8ಡಿ ವರೆಗಿನ ಮಾಹಿತಿಯನ್ನು ಪ್ರಾಧಿಕಾರಕ್ಕೆ ಸಲ್ಲಿಸುವುದು.

**(ಡಾ.ಎನ್.ಎಸ್. ಚನ್ನಪ್ಪಗೌಡ)**
**ಆಯುಕ್ತರು,**
**ಸಹಕಾರ ಚುನಾವಣಾ ಪ್ರಾಧಿಕಾರ,**
**ಬೆಂಗಳೂರು.**

**ಇವರಿಗೆ:–**

1 ನಿರ್ದೇಶಕರು, ಸರ್ಕಾರಿ ಕೇಂದ್ರ ಮುದ್ರಣಾಲಯ, ಕೆಂಗೇರಿ, ಬೆಂಗಳೂರು ಇವರಿಗೆ ಮುಂದಿನ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸುವ ಸಲುವಾಗಿ ಕಳುಹಿಸಿದೆ.

## ಅನುಬಂಧ–01

ಸಂಖ್ಯೆ: ಸಚುಪ್ರಾ/ಪ್ರಾ.ಸಂ.ಚು/43/2018 ದಿನಾಂಕ: 03.10.2018

**ಪ್ರಾಥಮಿಕ ಹಂತದ ಸಹಕಾರ ಸಂಘಗಳ / ಸಹಕಾರಿಗಳ ಆಡಳಿತ ಮಂಡಲಿಗೆ / ಪದಾಧಿಕಾರಿಗಳ ಸ್ಥಾನಗಳಿಗೆ ಚುನಾವಣೆ ನಡೆಸುವ ಬಗ್ಗೆ ಚುನಾವಣಾಧಿಕಾರಿಗಳು ಕೈಗೊಳ್ಳಬೇಕಾದ ಕ್ರಮ ಕುರಿತಂತೆ ಚೆಕ್‌ಲಿಸ್ಟ್.**

| ಕ್ರ ಸಂ | ವಿವರ | ಷರಾ |
|---|---|---|
| 1 | ದಿನಾಂಕ 01.01.2019 ರಿಂದ 31.12.2019 ರವರೆಗೆ ಅವಧಿ ಮುಗಿಯುವ ಸಹಕಾರ ಸಂಘಗಳ ಆಡಳಿತ ಮಂಡಲಿಗೆ ಚುನಾವಣೆ / ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆ ನಡೆಸುವಿಕೆ – ಸಹಕಾರ ಸಂಘಗಳ /ಸಹಕಾರಿಗಳ ಪಟ್ಟಿಯನ್ನು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಕಳುಹಿಸುವಿಕೆ. | ಸಹಕಾರ ಚುನಾವಣಾ ಪ್ರಾಧಿಕಾರದ ಸುತ್ತೋಲೆ ಕ್ರಮಾಂಕ: ಸಚುಅ/ಚುನಾವಣೆ/ಮಾಹಿತಿ/54/2014 ದಿನಾಂಕ 31–05–2014 ರಲ್ಲಿ ಸೂಚಿಸಿರುವಂತೆ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 13ಡಿ(1) ರಡಿಯಲ್ಲಿ ಮಾಹಿತಿ ಪಡೆಯಲು ಚುನಾವಣಾಧಿಕಾರಿಗಳು ಅಗತ್ಯ ಕ್ರಮವಿಡತಕ್ಕದ್ದು. |
| 2 | ಮೊದಲ ಹಂತದಲ್ಲಿ ಪ್ರಾಥಮಿಕ ಸಂಘಗಳು /ಸಹಕಾರಿಗಳ ಆಡಳಿತ ಮಂಡಲಿಗಳ ಚುನಾವಣೆ ನಡೆಸುವ ಬಗ್ಗೆ ಚುನಾವಣಾ ಪ್ರಾಧಿಕಾರದಿಂದ ಚುನಾವಣೆ ನಡೆಸಬೇಕಾದ ಅವಧಿ ಪ್ರಕಟಣೆ. | ಪ್ರಾಧಿಕಾರದ ದಿ:03–10–2018ರ ಅಧಿಸೂಚನೆಯಲ್ಲಿ ತಿಳಿಸಿರುವಂತೆ ಚುನಾವಣಾ ದಿನಾಂಕಗಳನ್ನು ಪ್ರಕಟಿಸಲು ಚುನಾವಣಾಧಿಕಾರಿಗಳು ಅಗತ್ಯ ಕ್ರಮವಿಡತಕ್ಕದ್ದು. |
| 3 | **ರಿಟರ್ನಿಂಗ್ ಆಫೀಸರ್ /ಸಹಾಯಕ ರಿಟರ್ನಿಂಗ್ ಅಧಿಕಾರಿಗಳ ನೇಮಕ–**<br><br>ದಿನಾಂಕ 01.01.2019 ರಿಂದ 31.12.2019 ರವರೆಗೆ ಮಂಡಲಿಯ ಅವಧಿ ಮುಗಿಯುವ ಸಂಘಗಳು / ಸಹಕಾರಿಗಳಿಗೆ ಸಂಬಂಧಿಸಿದಂತೆ ಸಾಮಾನ್ಯ ಚುನಾವಣೆ / ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆ ನಡೆಸಲು. | ಪ್ರತಿ ಸಹಕಾರ ಸಂಘಕ್ಕೆ / ಸಹಕಾರಿಗೆ ರಿಟರ್ನಿಂಗ್ ಅಧಿಕಾರಿ (ಆರ್.ಓ) ಅಗತ್ಯಕ್ಕನುಗುಣವಾಗಿ ಸಹಾಯಕ ರಿಟರ್ನಿಂಗ್ ಅಧಿಕಾರಿ (ಎ.ಆರ್.ಓ) ನೇಮಕಾತಿ ಮಾಡಿ ನಿಯಮಾನುಸಾರ ಚುನಾವಣೆ ನಡೆಸಲು ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು. (ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ–13ಇ) |
| 4 | **ಮತದಾರರ ಪಟ್ಟಿಯನ್ನು ಸಿದ್ದಪಡಿಸುವಿಕೆ –ವೇಳಾಪಟ್ಟಿ ಪ್ರಕಟಣೆ. ಪ್ರತಿ ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಾಹಕನು ನಿರ್ವಹಿಸಬೇಕಾದ ಕರ್ತವ್ಯ ಮತ್ತು ಜವಾಬ್ದಾರಿಗಳು.**<br>I. ಚುನಾವಣೆಯಲ್ಲಿ ಮತ ನೀಡುವ ಹಕ್ಕುಳ್ಳ ಸದಸ್ಯರ ಕರಡು ಪಟ್ಟಿ ಸಿದ್ದಪಡಿಸಿ ಸಲ್ಲಿಸುವಿಕೆ.<br>II. ಅಂತಿಮ ಮತದಾರರ ಪಟ್ಟಿಯ ಪ್ರಕಟಣೆಗೆ ಸಿದ್ದಪಡಿಸಿದ ದಿನಾಂಕದ ಪೂರ್ವದಲ್ಲಿ ಮರುಪಾವತಿಗೆ ಬಾಕಿಯಾಗುವ ಸದಸ್ಯರ ಕರಡುಪಟ್ಟಿ ಸಿದ್ದಪಡಿಸುವಿಕೆ.<br>III.ಸುಸ್ತಿದಾರರ ಕರಡು ಪಟ್ಟಿ ಸಿದ್ದಪಡಿಸಿ ಸಲ್ಲಿಸುವಿಕೆ.<br>IV.ಅನರ್ಹತೆಗೆ ಕಾರಣಗಳನ್ನು ಸದಸ್ಯವಾರು ತೋರಿಸಿ, ಸಾಮಾನ್ಯ ಚುನಾವಣೆಯಲ್ಲಿ ಮತದಾನದ ಹಕ್ಕನ್ನು ಹೊಂದಿರದ, ಇತರ ಸದಸ್ಯರ ಕರಡುಪಟ್ಟಿ ತಯಾರಿಸಿ ಸಲ್ಲಿಸುವಿಕೆ.<br>**[ಕರ್ನಾಟಕ ಸಹಕಾರ ಸಂಘಗಳ ನಿಯಮ–13ಡಿ(5) ರಂತೆ ಚುನಾವಣಾ ದಿನಾಂಕದ ಪೂರ್ವದ ಕನಿಷ್ಟ 60 ದಿವಸಗಳ ಮುಂಚೆ]** | ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 13ಸಿ(2) ಮತ್ತು ನಿಯಮ–13ಡಿ(4)(5) ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ–5ಬಿ(1)ಗಳ ಅವಕಾಶಗಳಂತೆ ಚುನಾವಣಾಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು. |

| | | |
|---|---|---|
| 5 | **ಸಹಕಾರ ಚುನಾವಣಾ ಪ್ರಾಧಿಕಾರದ ಪರವಾಗಿ ಚುನಾವಣಾಧಿಕಾರಿಯು ನಿರ್ವಹಿಸಬೇಕಾದ ಕರ್ತವ್ಯ ಮತ್ತು ಜವಾಬ್ದಾರಿಗಳು.** | |
| | I. ಮತ ನೀಡುವ ಹಕ್ಕುಳ್ಳ ಸದಸ್ಯರ ಕರಡುಪಟ್ಟಿ, ಸುಸ್ತಿದಾರರ ಕರಡುಪಟ್ಟಿ ಹಾಗೂ ಅಂತಿಮ ಮತದಾರರ ಪಟ್ಟಿಯ ಪ್ರಕಟಣೆಗೆ ನಿಗಧಿಪಡಿಸಿದ ದಿನಾಂಕದ ಪೂರ್ವದಲ್ಲಿ ಮರುಪಾವತಿಗೆ ಬಾಕಿಯಾಗುವ ಸದಸ್ಯರ ಕರಡು ಪಟ್ಟಿಗಳನ್ನು ಪ್ರಕಟಿಸಲು ವ್ಯವಸ್ಥೆಗೊಳಿಸುವಿಕೆ. | ಚುನಾವಣಾ ದಿನಾಂಕಕ್ಕೆ ಪೂರ್ವದ ಕನಿಷ್ಟ 50 ದಿನಗಳ ಮುಂಚಿತವಾಗಿ ಪ್ರಕಟಿಸುವ ವ್ಯವಸ್ಥೆ ಮಾಡುವುದು. |
| | II. ಕರಡುಪಟ್ಟಿ ಪ್ರಕಟಣೆಯಾದ ನಂತರ ಅವುಗಳಿಂದ ಬಾಧಿತರಾದವರು ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಸಲ್ಲಿಸಲು ಮತ್ತು ಸಾಮಾನ್ಯ ಚುನಾವಣೆಯ ಪೂರ್ವದ ಕನಿಷ್ಟ 20 ದಿನಗಳ ಮುಂಚಿತವಾಗಿ ಸುಸ್ತಿದಾರರು ಸಂಬಂಧಪಟ್ಟ ಸಹಕಾರ ಸಂಘಗಳಿಗೆ ಬಾಕಿಯನ್ನು ಮರುಪಾವತಿಸಲು ತಿಳಿಸುವಿಕೆ. | ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 13ಡಿ(3)(ಬಿ)(ಸಿ) ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು–2004ರ ನಿಯಮ–5(ಎ) |
| | III. ಅಂತಿಮ ಅರ್ಹ ಮತದಾರರ ಪಟ್ಟಿಯನ್ನು ಪ್ರಕಟಿಸುವಿಕೆ. | ಕರ್ನಾಟಕ ಸಹಕಾರ ಸಂಘಗಳ ನಿಯಮಗಳು–1960ರ ನಿಯಮ 13ಡಿ(3)(ಡಿ) ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004 5(ಬಿ)ಗಳ ಅವಕಾಶದಂತೆ ಚುನಾವಣಾ ದಿನಾಂಕಕ್ಕೆ ಪೂರ್ವದ 15ನೇ ದಿನದಂದು ಅಥವಾ ಮುಂಚಿತವಾಗಿ ಪ್ರಕಟಿಸತಕ್ಕದ್ದು. |
| 6 | ರಿರ್ಟನಿರ್ಂಗ್ ಅಧಿಕಾರಿಯು ಚುನಾವಣಾಧಿಕಾರಿಗಳೊಂದಿಗೆ ಸಮಾಲೋಚಿಸಿ ಮತದಾನ ಕೇಂದ್ರಗಳನ್ನು ಗುರುತಿಸುವಿಕೆ ಮತ್ತು ಅದರ ವಿವರಗಳನ್ನು ಸಿದ್ಧಪಡಿಸುವುದು. | ಕರ್ನಾಟಕ ಸಹಕಾರ ಸಂಘಗಳ ನಿಯಮಗಳು–1960ರ ನಿಯಮ 13ಇ(2)(ii) ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ–5ಸಿ(2)(ii) ಮತ್ತು (iii) ರಂತೆ |
| 7 | ಮತದಾನ ಸಿಬ್ಬಂದಿ ಪಟ್ಟಿ ತಯಾರಿಸಿಕೊಂಡು ಅಗತ್ಯಕ್ಕನುಗುಣವಾಗಿ ರಿಟರ್ನಿಂಗ್ ಅಧಿಕಾರಿಯು ಪ್ರಿಸೈಡಿಂಗ್ ಮತ್ತು ಚುನಾವಣಾ ಸಿಬ್ಬಂದಿ ನೇಮಕಾತಿ ಮಾಡಲು ಕ್ರಮವಿಡುವುದು. | ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ–13ಎಫ್ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ–5ಡಿ(1) ರಂತೆ. |
| 8 | ಸಾಮಾನ್ಯ ಚುನಾವಣೆಗಾಗಿ ಅಧಿಸೂಚನೆ ಹೊರಡಿಸುವ ಬಗ್ಗೆ ಚುನಾವಣಾಧಿಕಾರಿಗೆ ಚುನಾವಣಾ ಪ್ರಾಧಿಕಾರವು ಅನುಮತಿಸಿರುವಂತೆ | ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 14 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ–5ಇ ಮೇರೆಗೆ ಕ್ರಮವಾಗಿ ನಮೂನೆ–XI ಹಾಗೂ ನಮೂನೆ–1ಎ ನಲ್ಲಿ ಅಧಿಸೂಚನೆಯನ್ನು ಹೊರಡಿಸತಕ್ಕದ್ದು. |
| 9 | ರಿಟರ್ನಿಂಗ್ ಆಫೀಸರ್ ಉದ್ದೇಶಿತ ಚುನಾವಣೆಗಾಗಿ ನಮೂನೆ–XII ರಲ್ಲಿ ಸಾರ್ವಜನಿಕ ನೋಟೀಸ್ ನೀಡುವುದು ಮತ್ತು ಕಛೇರಿಯ ಸೂಚನಾಫಲಕದಲ್ಲಿ ಮತ್ತು ಸಹಕಾರ ಸಂಘದ ಕಛೇರಿ ಹಾಗೂ ಅವಶ್ಯಕವೆನಿಸಿದ ಇತರೆ ಸ್ಥಳಗಳಲ್ಲಿ ಪ್ರದರ್ಶಿಸಿಸುವುದು. | ಕರ್ನಾಟಕ ಸಹಕಾರ ಸಂಘ ನಿಯಮಗಳು 1960ರ ನಿಯಮ–14(3)(ಎ) ರೀತ್ಯಾ ನಮೂನೆ–XII ರಲ್ಲಿ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ 5ಇ(3)ರ ರೀತ್ಯಾ ನಮೂನೆ–2ಎ ದಲ್ಲಿ ಹೊರಡಿಸತಕ್ಕದ್ದು. |

| | | |
|---|---|---|
| 10 | ಮಾದರಿ ನೀತಿ ಸಂಹಿತೆ | ಮಾದರಿ ನೀತಿ ಸಂಹಿತೆಯನ್ನು ಸಹಕಾರ ಚುನಾವಣಾ ಆಯೋಗವು ಈಗಾಗಲೇ ಪತ್ರ ಸಂಖ್ಯೆ:ಸಚುಆ/17/ನೀತಿಸಂಹಿತೆ/2013-14, ದಿನಾಂಕ: 03.08.2013 ಹಾಗೂ ದಿನಾಂಕ: 21.09.2013ರಲ್ಲಿ ಪ್ರಕಟಿಸಿರುವಂತೆ ಚುನಾವಣಾ ಪ್ರಕ್ರಿಯೆ ಅಂತ್ಯಗೊಳ್ಳುವವರೆಗೆ ಜಾರಿಯಲ್ಲಿರುತ್ತದೆ. |
| 11 | ರಿರ್ಟನಿಂಗ್ ಆಫೀಸರ್ ಸಹಕಾರ ಸಂಘಗಳ ಆಡಳಿತ ಮಂಡಲಿಗೆ ಸಾಮಾನ್ಯ ಚುನಾವಣೆ ಮುಗಿದ ನಂತರ ಪದಾಧಿಕಾರಿಗಳ ಆಯ್ಕೆಗೆ ಚುನಾವಣೆಯನ್ನು ನಡೆಸುವುದು. | ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ-14ಎಜಿ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ-6ರ ಅವಕಾಶಗಳಂತೆ ಪದಾಧಿಕಾರಿಗಳ ಚುನಾವಣೆಗಳನ್ನು ನಡೆಸತಕ್ಕದ್ದು |

**(ಡಾ.ಎನ್.ಎಸ್. ಚನ್ನಪ್ಪಗೌಡ)**
**ಆಯುಕ್ತರು,**
**ಸಹಕಾರ ಚುನಾವಣಾ ಪ್ರಾಧಿಕಾರ,**
**ಬೆಂಗಳೂರು.**

## ಚುನಾವಣೆ ಪೂರ್ವದಲ್ಲಿ ಕೈಗೊಳ್ಳಬೇಕಾದ ಕ್ರಮಗಳು.

| ಕ್ರಮ ಸಂಖ್ಯೆ | ವಿಷಯ | ಸುತ್ತೋಲೆ / ಪತ್ರಗಳ ಕ್ರಮಸಂಖ್ಯೆ ಮತ್ತು ದಿನಾಂಕ |
|---|---|---|
| 01 | ಸಹಕಾರ ಸಂಘಗಳ / ಸಹಕಾರಿಗಳ / ಪದಾಧಿಕಾರಿಗಳ ಸ್ಥಾನಕ್ಕೆ ಚುನಾವಣೆ ನಡೆಸುವ ಬಗ್ಗೆ ಚುನಾವಣಾಧಿಕಾರಿಗಳು ಕಾನೂನಿಗನುಗುಣವಾಗಿ ಕಾರ್ಯನಿರ್ವಹಿಸುವ ಕುರಿತು. | ಎಲ್ಲಾ ಜಿಲ್ಲೆಗಳ ಉಪನಿಬಂಧಕರು ಹಾಗೂ ಜಿಲ್ಲಾಚುನಾವಣಾಧಿಕಾರಿಗಳಿಗೆ ವಿಳಾಸಿಸಿ ಬರೆಯಲಾದ ಪತ್ರ ಸಂಖ್ಯೆ :ಸಚುಆ/ಚುನಾವಣೆ/15/2013–14 ದಿನಾಂಕ : 26–07–2013ರ ಪತ್ರದಲ್ಲಿನ ಕ್ರಮ ಸಂಖ್ಯೆ 01 ರಿಂದ 10 ರಂತೆ ಕ್ರಮವಿಡುವುದು. ಸೂಚನೆಗಳಲ್ಲಿ ರಿರ್ಟನಿಂಗ್ ಆಫೀಸರ್ / ಅಧೀಕ್ಷಾಧಿಕಾರಿಗಳು / ನೌಕರರಿಗೆ ತರಬೇತಿ ಕುರಿತು ವ್ಯವಸ್ಥೆ ಮಾಡಲು ಸೂಚಿಸಲಾಗಿದೆ. |
| 02 | ಸಹಕಾರ ಸಂಘಗಳ / ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಗೆ ಚುನಾವಣೆ ನಡೆಸುವ ಬಗ್ಗೆ ರಿರ್ಟನಿಂಗ್ ಆಫೀಸರ್‌ಗಳಿಗೆ ನೀಡಲಾದ ಮಾರ್ಗಸೂಚಿಗಳು. | ಸುತ್ತೋಲೆ ಸಂಖ್ಯೆ : ಸಚುಆ/16/2013–14 ದಿನಾಂಕ: 05–08–2013 ರಂತೆ ಕ್ರಮವಿಡತಕ್ಕದ್ದು. |
| 03 | ಸಹಕಾರ ಸಂಘಗಳ / ಸಹಕಾರಿಗಳ ಆಡಳಿತ ಮಂಡಲಿ ಚುನಾವಣೆಗೆ ಚಿಹ್ನೆಗಳ ಹಂಚಿಕೆ ಕುರಿತು. | ಸಂಖ್ಯೆ : ಸಚುಪ್ರಾ70/ಚಿಹ್ನೆ/2015–16 ದಿನಾಂಕ :28–05–2015 ರಲ್ಲಿ ನೀಡಿರುವ ಸೂಚನೆಯಂತೆ ಕ್ರಮವಿಡತಕ್ಕದ್ದು. |
| 04 | ಸಹಕಾರ ಸಂಘಗಳ ಪದಾಧಿಕಾರಿಗಳ ಚುನಾವಣೆ ನಡೆಸುವ ಕುರಿತು. | ಸುತ್ತೋಲೆ ಸಂಖ್ಯೆ : ಸಚುಆ/ಪ.ಚು/27/2013–14 ದಿನಾಂಕ: 27–09–2013ರಲ್ಲಿ ನೀಡಿರುವ ಸೂಚನೆಯಂತೆ ಕ್ರಮವಿಡತಕ್ಕದ್ದು. |
| 05 | ಸಹಕಾರ ಸಂಘಗಳ / ಸಹಕಾರಿಗಳ ಆಡಳಿತ ಮಂಡಲಿ/ಪದಾಧಿಕಾರಿಗಳ ಚುನಾವಣೆಗೆ – ಸಂಘಗಳ /ಸಹಕಾರಿಗಳ ಆಡಳಿತ ಮಂಡಳಿಗಳ ಮುಖ್ಯ ಕಾರ್ಯನಿರ್ವಾಹಕರುಗಳು ಕಾನೂನಿಗನುಗುಣವಾಗಿ ಕೈಗೊಳ್ಳಬಹುದಾದ ಅಗತ್ಯ ಕ್ರಮವಿಡುವ ಅಂಶಗಳನ್ನು ಆಡಳಿತ ಮಂಡಲಿ ಅವಗಾಹನೆಗೆ ಮಂಡಿಸುವ ಕುರಿತು. | ಸುತ್ತೋಲೆ ಸಂಖ್ಯೆ : ಸಚುಆ/ಚುನಾವಣೆ/34/2013–14 ದಿನಾಂಕ : 11–11–2013 ರಂತೆ ಕ್ರಮವಿಡತಕ್ಕದ್ದು. |
| 06 | ಸಹಕಾರ ಚುನಾವಣಾ ಪ್ರಾಧಿಕಾರವು ನಡೆಸುವ ಸಹಕಾರ ಸಂಘಗಳ/ಸಹಕಾರಿಗಳ ಚುನಾವಣೆಗೆ ಪೊಲೀಸ್ ಸಿಬ್ಬಂದಿಯನ್ನು ಒದಗಿಸುವಿಕೆ –ಬಂದೋಬಸ್ತ್ ಕರ್ತವ್ಯದ ಸಂಬಂಧ ಶುಲ್ಕ ಪಾವತಿ ದರವನ್ನು ನಿಗಧಿಪಡಿಸುವ ಕುರಿತು. | ಸುತ್ತೋಲೆ ಸಂಖ್ಯೆ : ಸಚುಆ/ಚುನಾವಣೆ/8/2014 ದಿನಾಂಕ : 18–03–2014 ರಂತೆ ಕ್ರಮವಿಡತಕ್ಕದ್ದು. |

## ಚುನಾವಣೆ ನಂತರದಲ್ಲಿ ಕೈಗೊಳ್ಳಬೇಕಾದ ಕ್ರಮಗಳು.

| ಕ್ರಮ ಸಂಖ್ಯೆ | ವಿಷಯ | ಸುತ್ತೋಲೆ / ಪತ್ರಗಳ ಕ್ರಮಸಂಖ್ಯೆ ಮತ್ತು ದಿನಾಂಕ |
|---|---|---|
| 01 | ಚುನಾವಣೆಗೆ ಸಂಬಂಧಪಟ್ಟ ಕಾಗದ ಪತ್ರಗಳ ವಿಲೇವಾರಿ ಕುರಿತು. | ಸುತ್ತೋಲೆ ಸಂಖ್ಯೆ : ಸಚುಆ/16/2013–14 ದಿನಾಂಕ 12–08–2013 ರಂತೆ ಕ್ರಮವಿಡತಕ್ಕದ್ದು. |

ಜಿಲ್ಲಾ ಉಪ ನಿಬಂಧಕರು, ಚುನಾವಣಾಧಿಕಾರಿ, ಉಪವಿಭಾಗೀಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಹಾಗೂ ಇಲಾಖಾ ಕ್ಷೇತ್ರಾಧಿಕಾರಿಗಳು ಪ್ರಾಥಮಿಕ ಸಂಘಗಳು/ಸಹಕಾರಿಗಳ ಮತದಾರರ ಪಟ್ಟಿಗೆ ಸಿದ್ದಪಡಿಸುವಿಕೆಗೆ ಸಂಬಂಧಿಸಿದಂತೆ ಸಹಕಾರ ಸಂಘಗಳ/ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕನು ಸಿದ್ದಪಡಿಸಿ ಸಲ್ಲಿಸಿದ (ಕ್ರ.ಸಂ.4ರಲ್ಲಿ ತಿಳಿಸಿರುವಂತೆ) ಕರಡು ಪಟ್ಟಿಗಳನ್ನು ಪರಿಶೀಲಿಸುವ ಸಂಬಂಧ ಪರಿಶೀಲನಾ ತಂಡಗಳನ್ನು ರಚಿಸಿ, ಸದಸ್ಯರ ಆಕ್ಷೇಪಣೆಗಳ ಬಗ್ಗೆ ಪರಿಶೀಲಿಸಿ ಅಂತಿಮ ಪಟ್ಟಿಗಳನ್ನು (ಕ್ರ.ಸಂ. 5ರಲ್ಲಿ ತಿಳಿಸಿರುವಂತೆ) ಸಿದ್ದಪಡಿಸಿ ದೃಢೀಕರಿಸಿ ಪ್ರಕಟಿಸುವ ಬಗ್ಗೆ ಅಗತ್ಯ ಕ್ರಮ ತೆಗೆದುಕೊಳ್ಳಲು ನಿರ್ದೇಶಿಸಿದೆ.

**ಮೇಲೆ ವಿವರಿಸಿದಂತೆ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಮತ್ತು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮಗಳ ಅವಕಾಶಗಳು ಹಾಗೂ ಸಹಕಾರ ಸಂಘಗಳ/ಸಹಕಾರಿಗಳ ಬೈಲಾ ಅವಕಾಶಗಳನ್ನು ಗಮನದಲ್ಲಿಟ್ಟುಕೊಂಡು ಪ್ರಾಧಿಕಾರದಿಂದ ಕಾಲಕಾಲಕ್ಕೆ ನೀಡಲಾದ ಮತ್ತು ಈ ಅಧಿಸೂಚನೆಯೊಂದಿಗೆ ಲಗತ್ತಿಸಿರುವ ಅನುಬಂಧ–2, ಚುನಾವಣಾ ಪೂರ್ವದಲ್ಲಿ ಕೈಗೊಳ್ಳಬೇಕಾದ ಕ್ರಮಗಳು ಮತ್ತು ಚುನಾವಣೆಯ ನಂತರದಲ್ಲಿ ಕೈಗೊಳ್ಳಬೇಕಾದ ಕ್ರಮಗಳಲ್ಲಿ ಇತ್ತೀಚಿನ ತಿದ್ದುಪಡಿಗಳನ್ನು ಗಮನದಲ್ಲಿಟ್ಟುಕೊಂಡು ಹಂತಹಂತವಾಗಿ ಕೈಗೊಳ್ಳಬೇಕಾದ ವಿವಿಧ ಪ್ರಕ್ರಿಯೆಗಳ ಬಗ್ಗೆ ಗಮನಹರಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಚುನಾವಣಾಧಿಕಾರಿಗಳಿಗೆ ನಿರ್ದೇಶಿಸಲಾಗಿದೆ.**

ಪ್ರತಿ ಅಂಶಗಳ ಬಗ್ಗೆ ಆಗಾಗ್ಗೆ ಸಂಕ್ಷಿಪ್ತವಾಗಿ ವರದಿಯನ್ನು ರಾಜ್ಯ ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಸಲ್ಲಿಸಲು ನಿರ್ದೇಶಿಸಿದೆ.

**(ಡಾ.ಎನ್.ಎಸ್. ಚನ್ನಪ್ಪಗೌಡ)**
**ಆಯುಕ್ತರು,**
**ಸಹಕಾರ ಚುನಾವಣಾ ಪ್ರಾಧಿಕಾರ,**
**ಬೆಂಗಳೂರು.**

3/10



## ಶಾಖೆ ಉದ್ಘಾಟನೆ

ಉಡುಪಿ : ಉಡುಪಿ ಮುದ್ರಕರ ಸೌಹಾರ್ದ ಸಹಕಾರಿ ನಿ., ಇದರ ಲಕ್ಷ್ಮೀನಗರ ತೆಂಕನಿಡಿಯೂರು ಶಾಖೆಯನ್ನು ಉಡುಪಿಯ ಶಾಸಕರಾದ ಶ್ರೀ ಕೆ. ರಘುಪತಿ ಭಟ್ ಇವರು ಉದ್ಘಾಟಿಸಿದರು. ಸದರಿ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇದರ ನಿರ್ದೇಶಕರಾದ ಶ್ರೀ ಮಂಜುನಾಥ ಇವರು ಉಪಸ್ಥಿರಿದ್ದರು.

## ಚಿತ್ರದುರ್ಗ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ರಚನೆಯ ಪೂರ್ವಭಾವಿ ಸಭೆ

**ಚಿತ್ರದುರ್ಗ** : ಚಿತ್ರದುರ್ಗ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಶೇರು ಹಣ ಸಂಗ್ರಹಣೆ ಮತ್ತು ಮುಂದಿನ ಕಾರ್ಯ ಯೋಜನೆಗಳ ಬಗ್ಗೆ ಸಭೆಯು ಚಳ್ಳಕೆರೆ ಹಾಗೂ ಮೊಣಕಾಲ್ಮೂರಿನಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಮಾನ್ಯ ಶ್ರೀ ಎಸ್.ಆರ್. ಲಕ್ಷ್ಮೀಕಾಂತರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆಯಿತು ಹಾಗೂ ಅವರನ್ನು ಸನ್ಮಾನಿಸಲಾಯಿತು.





**ಕಾರವಾರ** : ಸೈಂಟ್ ಮಿಲಾಗ್ರಿಸ್ ಪತ್ತಿನ ಸೌಹಾರ್ದ ಕೋ-ಆಪರೇಟಿವ್ ಲಿ., ಕಾರವಾರ ಇದರ ಅಂಕೋಲಾ ಶಾಖೆಯ ಸಂಪೂರ್ಣ ಹವಾನಿಯಂತ್ರಿತ ಕಟ್ಟಡದ ಸ್ಥಳಾಂತರ ಸಮಾರಂಭವು 6ನೇ ಅಕ್ಟೋಬರ್ 2018 ಶನಿವಾರ ಸಂಜೆ 4.30 ಘಂಟೆಗೆ ನಡೆಯಿತು. ಇದರ ಆಶೀರ್ವಚನ ಹಾಗೂ ಉದ್ಘಾಟನೆಯು ಧರ್ಮಾಧ್ಯಕ್ಷ ಕಾರವಾರ ಧರ್ಮಪ್ರಾಂತ ಅತೀ ವಂದನೀಯ ಡಾ॥ ಡೆರಿಕ್ ಫರ್ನಾಂಡಿಸ್‌ರವರಿಂದ ನೆರವೇರಿತು. ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಸರಸ್ವತಿ ರವರು ಉಪಸ್ಥಿತರಿದರು.

## ನಾಗಲಾಂಬಿಕ ಪತ್ತಿನ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ – ಮಾನವಿ

**ಮಾನವಿ** : ನಾಗಲಾಂಬಿಕ ಪತ್ತಿನ ಸೌಹಾರ್ದ ಸಹಕಾರಿ ನಿ., ಮಾನವಿ ಇದರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇದರ ನಿರ್ದೇಶಕರಾದ ಶ್ರೀ ಆರ್. ತಿಮ್ಮಯ್ಯಶೆಟ್ಟಿ ರವರು ಉಪಸ್ಥಿತರಿದ್ದರು.





## ಉದ್ಘಾಟನಾ ಸಮಾರಂಭ

**ರಾಯಚೂರು** : ವೀರಶೈವ ವಿಕಾಸ ಪತ್ತಿನ ಸೌಹಾರ್ದ ಸಹಕಾರಿ ನಿ., ರಾಯಚೂರು. ಸದರಿ ನೂತನ ಸೌಹಾರ್ದ ಸಹಕಾರಿಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ವಿಶ್ವನಾಥ ಚ. ಹಿರೇಮಠ ಇವರು ನೆರವೇರಿಸಿದರು.

## ಅಭಯಮ್ ವಿವಿದೋದ್ದೇಶ ಸೌಹಾರ್ದ ಸಹಕಾರಿಯ 13ನೇ ವಾರ್ಷಿಕ ಸಾಮಾನ್ಯ ಸಭೆ




**ಕೋಣಂದೂರು :** ಅಭಯಮ್ ವಿವಿದೋದ್ದೇಶ ಸೌಹಾರ್ದ ಸಹಕಾರಿಯ 13 ವರ್ಷದ ಸಾಮಾನ್ಯ ಸಭೆಯನ್ನು ದಿನಾಂಕ 23.09.2018 ರಂದು ಲಕ್ಷ್ಮೀನರಸಿಂಹ ದೇವಸ್ಥಾನದ ಆವರಣದಲ್ಲಿ ನಡಿಯಿತು. ಸಹಕಾರಿಯ ಪ್ರಸ್ತ ಸಾಲಿನಲ್ಲಿ 3 ಕೋಟಿ ವ್ಯವಹಾರ ನಡೆದಿದ್ದು, ರೂ 6,47,499/- ಲಾಭವನ್ನು ಗಳಿಸಿದ್ದು, ಸಹಕಾರಿಯು ಶೇ.12ರಷ್ಟು ಡಿವಿಡೆಂಡ್ ನೀಡಿರುತ್ತದೆ. ಇದೇ ಸಂದರ್ಭದಲ್ಲಿ ಸಹಕಾರಿಯ ಸದಸ್ಯರಾದ ಹಾಗೂ ಮಾನ್ಯ ಶಾಸಕರಾದ ಶ್ರೀ ಆರಗ ಜ್ಞಾನೇಂದ್ರ ಮತ್ತು ಕೋಣಂದೂರು ರಾಷ್ಟ್ರೀಯ ವಸತಿ ಶಾಲೆಯ ಪ್ರಾಂಶುಪಾಲರಾದ ಪ್ರೋ. ಹೆಚ್.ಎಸ್. ಗಣೇಶಮೂರ್ತಿಯವರನ್ನು ಸನ್ಮಾನಿಸಲಾಯಿತು.

## ವಿಶ್ವಕರ್ಮ ವಿವಿದೋದ್ದೇಶ ಸೌಹಾರ್ದ ಸಹಕಾರಿ 8ನೇ ವಾರ್ಷಿಕ ಸಾಮಾನ್ಯ ಸಭೆ

**ಶಿವಮೊಗ್ಗ :** ವಿಶ್ವಕರ್ಮ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ 8ನೇ ವಾರ್ಷಿಕ ಸಾಮಾನ್ಯ ಸಭೆಯು ಮಧುರಾ ಪ್ಯಾರಡೈಸ್‌ನಲ್ಲಿ ದಿನಾಂಕ : 16.09.2018 ರಂದು ನಡೆಯಿತು. ಸಾಮಾನ್ಯ ಸಭೆಗೆ ಮುಖ್ಯಅತಿಥಿಯಾಗಿ ಆಗಮಿಸಿದ ಕರ್ನಾಟಕ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಂ. ರುದ್ರೇಗೌಡರವರನ್ನು ಸನ್ಮಾನಿದರು.



## ಜೀವನ ಸಬಲೀಕರಣ ತರಬೇತಿ





**ಮಂಗಳೂರು :** ಕ್ಯಾಂಪ್ಕೋ ಲಿಮಿಟೆಡ್ ಮಂಗಳೂರು ಇದರ ವತಿಯಿಂದ ಪುತ್ತೂರಿನ ಮರೀಲ್ ನಲ್ಲಿರುವ ಕ್ಯಾಂಪ್ಕೋ ಚೋಕ್ಲೇಟ್ ಫ್ಯಾಕ್ಟರಿಯಲ್ಲಿ 2 ದಿನದ ಜೀವನ ಸಬಲೀಕರಣ (life Empowerment Achieving Program) ತರಬೇತಿ ಕಾರ್ಯಾಗಾರದ ಅಧ್ಯಕ್ಷತೆಯನ್ನು ಸಂಸ್ಥೆಯ ಎ.ಜಿ.ಎಂ ಶ್ರೀ ಶ್ಯಾಮ್ ವಹಿಸಿದರು. ಕಾರ್ಯಾಕ್ರಮದಲ್ಲಿ ಕ್ಯಾಂಪ್ಕೋದ ಹಿರಿಯ ವ್ಯವಸ್ಥಾಪಕರಾದ ಶ್ರೀ ಶ್ಯಾಮ್ ಭಟ್ ರವರು ಉಪಸ್ಥತರಿದ್ದರು. ಮಾನವ ಸಂಪನ್ಮೂಲ ವಿಭಾಗದ ಶ್ರೀ ರಾಧೇಶ್ ಕುಂದಲ್ಪಾಡಿ ಕಾರ್ಯಕ್ರಮ ಸಂಯೋಜಿಸಿ ನಿರೂಪಿಸಿದರು.

ತರಬೇತುದಾರರಾದ ಮ್ಯಾನೇಜ್ಮೆಂಟಿನ ಡಾ. ಹರೀಶ್ ಆರ್, ಕ್ಯಾಂಪ್ಕೋ ಸಿಬ್ಬಂದಿಗಳಿಗೆ ಗುಣಮಟ್ಟದ ವ್ಯಾಪಾರಾಭಿವೃದ್ಧಿ ಗುಣಮಟ್ಟದ ಕಾರ್ಪೋರೇಟ್ಗ ಜೀವನ, ವ್ಯಕ್ತಿಯಲ್ಲಿ ಅಂತರ್ಗತವಾಗಿರುವ ಅಗಾಧಶಕ್ತಿಯ ಕುರಿತು ತರಬೇತಿ ಕಾರ್ಯಾಗಾರವನ್ನು ನಡೆಸಿಕೊಟ್ಟರು. ಸಾಮಾನ್ಯರಂತೆ ತೋರುವ ಪ್ರತಿಯೊಬ್ಬ ವ್ಯಕ್ತಿಯೂ ಕ್ರಮಬದ್ಧ ಜೀವನ ಶೈಲಿಯಿಂದ ಸಕಾರಾತ್ಮಕ ಅಲೋಚನೆಗಳಿಂದ ಆ ಸಾಮಾನ್ಯ ವ್ಯಕ್ತಿಯಾಗಬಲ್ಲ ಎಂಬುದನ್ನು ಪ್ರಾಯೋಗಿಕವಾಗಿ ತೋರಿಸಿಕೊಟ್ಟರು ಹಾಗೂ ತರಬೇತಿ ಕಾರ್ಯಾಗಾರದಲ್ಲಿ ಶ್ರೀ ಸರಸ್ವತಿ ಪತ್ತಿನ ಸೌಹಾರ್ದ ಸಹಕಾರಿಯ ಸಿಬ್ಬಂದಿಗಳು ಮಾಸ್ಟರ್ ಪ್ಲಾನರಿಯ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

## ಶ್ರೀ ಗುರು ಮಾರ್ಕಂಡೇಶ್ವರ ಪತ್ತಿನ ಸೌಹಾರ್ದ ಸಹಕಾರಿಯ 2ನೇ ವಾರ್ಷಿಕ ಸಾಮಾನ್ಯ ಸಭೆ - ರಾಣೆಬೆನ್ನೂರ



## ಹೊಯ್ಸಳ ಪತ್ತಿನ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ - ಚಳ್ಳಕೆರೆ





## ಸುಂದರಾ ಸೌಹಾರ್ದ ಪತ್ತಿನ ಸಹಕಾರಿ 4ನೇ ವಾರ್ಷಿಕ ಸಾಮಾನ್ಯ ಸಭೆ – ಬಾಗಲಕೋಟೆ

**ಬಾಗಲಕೋಟ :** ದಿನಾಂಕ : 12.09.2018ರಂದು ಸುಂದರಾ ಸೌಹಾರ್ದ ಪತ್ತಿನ ಸಹಕಾರಿ ನಿ., ಬಾಗಲಕೋಟೆ ಇದರ 4ನೇ ವಾರ್ಷಿಕ ಮಹಾಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ಹನಮಂತಗೌಡ ಲೆಂಕನಗೌಡ ಪಾಟೀಲ ಇವರ ಅಧ್ಯಕ್ಷತೆಯಲ್ಲಿ ಸಹಕಾರಿಯ ಸಭಾಂಗಣದಲ್ಲಿ ನಡೆಯಿತು. ಸಹಕಾರಿಯು 20 ಲಕ್ಷ ಶೇರು ಬಂಡವಾಳ ಹೊಂದಿದ್ದು 323 ಲಕ್ಷ ಠೇವಣಿ ಸಂಗ್ರಹಿಸಿ 210 ಲಕ್ಷ ಸಾಲ ವಿತರಿಸಿದೆ ಹಾಗೂ ಒಟ್ಟು 1172 ಸದಸ್ಯರನ್ನು ಹೊಂದಿದ್ದು ಸದರಿ ಆರ್ಥಿಕ ವರ್ಷದಲ್ಲಿ ರೂ 3,00,411/– ನಿವ್ವಳ ಲಾಭ ಗಳಿಸಿ ಶೇ.6% ಡಿವಿಡೆಂಡ್ ವಿತರಿಸಲಾಗಿದೆವೆಂದು ತಿಳಿಸಿದರು.

## ಶ್ರೀ ಸದಾನಂದ ವಿವಿದೋದ್ಧೇಶ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ – ಬಾಗಲಕೋಟೆ

**ಜಮಖಂಡಿ :** ಶ್ರೀ ಸದಾನಂದ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ., ಜಮಖಂಡಿ ಇದರ 2017–18ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯನ್ನು ಸಹಕಾರಿ ಅಧ್ಯಕ್ಷರಾದ ಶ್ರೀ ಏಗಪ್ಪ. ಕಲ್ಲಪ್ಪ ಸವದಿಯವರು ಜ್ಯೋತಿ ರವರು ಉದ್ಘಾಟಿಸಿದರು. ಅಧ್ಯಕ್ಷರು ಮಾತನಾಡಿ ಸಹಕಾರಿಯು 526 ಸದಸ್ಯರೊಂದಿಗೆ ವ್ಯವಹರಿಸಿ ರೂ 3,89.108.57/– ಲಾಭ ಗಳಿಸಿದೆವೆಂದು ತಿಳಿಸಿದರು.





ಶ್ರೀ ಶೈಲ ಸೌಹಾರ್ದ ಪತ್ತಿನ ಸಹಕಾರಿ 10ನೇ ವಾರ್ಷಿಕ ಸಾಮಾನ್ಯ ಸಭೆ – ಕಲಬುರಗಿ




ಶ್ರೀ ಗುರುಬಸವ ಸೌಹಾರ್ದ ಪತ್ತಿನ ಸಹಕಾರಿ ವಾರ್ಷಿಕ ಸಾಮಾನ್ಯ ಸಭೆ – ವಿಜಯಪುರ



ಶ್ರೀ ಸಿದ್ದಾರೂಢ ಸೌಹಾರ್ದ ಸಹಕಾರಿ 18ನೇ ವಾರ್ಷಿಕ ಸಾಮಾನ್ಯ ಸಭೆ – ಬೀದರ



ವಿಶ್ವಮಾತೆ ಅಕ್ಕಮಹಾದೇವಿ ಮಹಿಳಾ ಸೌಹಾರ್ದ ಸಹಕಾರಿ 3ನೇ ವಾರ್ಷಿಕ ಸಾಮಾನ್ಯ ಸಭೆ – ಹಿರೇಹಡಗಲಿ



ವರಸಿದ್ಧಿ ವಿನಾಯಕ ಸೌಹಾರ್ದ ಪತ್ತಿನ ಸಹಕಾರಿ
2ನೇ ವಾರ್ಷಿಕ ಸಾಮಾನ್ಯ ಸಭೆ – ವಿಜಯಪುರ



ಶಿವಸಂಗಮ ವಿವಿದೋದ್ದೇಶ ಸೌಹಾರ್ದ ಸಹಕಾರಿ
4ನೇ ವಾರ್ಷಿಕ ಸಾಮಾನ್ಯ ಸಭೆ – ಗದಗ



ಶ್ರೀ ವೀರಭದ್ರೇಶ್ವರ ಅರ್ಬನ್ ಪತ್ತಿನ ಸೌಹಾರ್ದ ಸಹಕಾರಿ
ವಾರ್ಷಿಕ ಸಾಮಾನ್ಯ ಸಭೆ – ಬೆಳಗಾಂವ



ಶ್ರೀ ಮಾತಾಜಿ ವಿವಿದೋದ್ದೇಶ ಸೌಹಾರ್ದ ಸಹಕಾರಿ
7ನೇ ವಾರ್ಷಿಕ ಸಾಮಾನ್ಯ ಸಭೆ – ಬೆಂಗಳೂರು



ಶ್ರೀ ಮಹಾಲಕ್ಷ್ಮೀ ಪತ್ತಿನ ಸೌಹಾರ್ದ ಸಹಕಾರಿ
8ನೇ ವಾರ್ಷಿಕ ಸಾಮಾನ್ಯ ಸಭೆ – ಯಾದಗಿರಿ



ಶ್ರೀ ಶಿವಜ್ಞಾನ ಸಂಪನ್ನ ವಿವಿದೋದ್ದೇಶ ಸೌಹಾರ್ದ ಸಹಕಾರಿ
14ನೇ ವಾರ್ಷಿಕ ಸಾಮಾನ್ಯ ಸಭೆ – ಹುಕ್ಕೇರಿ



ಶ್ರೀ ಗಾಯಿತ್ರಿ ಸೌಹಾರ್ದ ಪತ್ತಿನ ಸಹಕಾರಿ
ವಾರ್ಷಿಕ ಸಾಮಾನ್ಯ ಸಭೆ – ಹರಿಹರ



ಶ್ರೀ ಗುರು ರಾಘವೇಂದ್ರ ಪತ್ತಿನ ಸೌಹಾರ್ದ ಸಹಕಾರಿ
3ನೇ ವಾರ್ಷಿಕ ಸಾಮಾನ್ಯ ಸಭೆ – ಬಳ್ಳಾರಿ



ದಿ. ವೆಜಿಟಬಲ್ ಪ್ಲಾಂಟ್ ಸೌಹಾರ್ದ ಸಹಕಾರಿ
2ನೇ ವಾರ್ಷಿಕ ಸಾಮಾನ್ಯ ಸಭೆ – ದಾವಣಗೆರೆ

**ತಿದ್ದುಪಡಿ**

ಅಕ್ಟೋಬರ್ 2018ರ ಸ್ವಾಭಿಮಾನಿ ಸಹಕಾರಿಯ ಪುಟ ಸಂಖೆ 33ರಲ್ಲಿ ಪತ್ರಿಕೆಯಲ್ಲಿ ಆದಿಶಕ್ತಿ ಪತಿನ ಸೌಹಾರ್ದ ಸಹಕಾರಿ ನಿ., ಹಾವೇರಿ ಎಂದು ಮುದ್ರಣವಾಗಿತ್ತು ಅದನ್ನು ಹಾನಗಲ್ಲವೆಂದು ಓದಿಕೊಳ್ಳುವುದು.

# ಚಾಲಕನೇ ಮಾಲಿಕ ಸುಕೋ ಬ್ಯಾಂಕ್ ಕಾರ್ಯಕ್ರಮ

ನಗುಮೊಗದ ಗ್ರಾಹಕ ಸೇವೆಗಳು, ನವ ನವೀನ ತಂತ್ರಜ್ಞಾನದ ಮೂಲಕ ಉತ್ತರ ಕರ್ನಾಟಕದ ಹೆಮ್ಮೆಯ ಬ್ಯಾಂಕ್ ಆಗಿರುವ ಹಾಗೂ ಈ ವರ್ಷ ಬೆಳ್ಳಿಹಬ್ಬವನ್ನು ಆಚರಿಸಿಕೊಳ್ಳುತ್ತಿರುವ ಸುಕೋ ಬ್ಯಾಂಕಿನ 23ನೇ ಶಾಖೆ 'ಚನ್ನಗಿರಿ ಶಾಖೆ'ಯು ಆರಂಭವಾಗಿ ಕೇವಲ 10 ತಿಂಗಳುಗಳಾಗಿದ್ದು ಹಲವಾರು ರೈತರಿಗೆ 'ಚಾಲಕನೇ ಮಾಲೀಕ" ಎನ್ನುವ ಯೋಜನೆಯ ಅಡಿಯಲ್ಲಿ ಸಾಲ ವಿತರಿಸಲಾಗಿದೆ ಎಂದು ಬ್ಯಾಂಕಿನ ವ್ಯವಸ್ಥಾಪಕರಾದ ಶ್ರೀ ರಮೇಶ್ ಭಜಂತ್ರಿ ಅವರು ಪತ್ರಿಕಾಗೋಷ್ಠಿಯಲ್ಲಿ ಇಂದು ತಿಳಿಸಿದರು.

**ಟ್ರ್ಯಾಕ್ಟರ್‌ಗಳ ಜಾಥಾ :** ಪತ್ರಿಕಾ ಗೋಷ್ಠಿಯ ನಂತರ ಚನ್ನಗಿರಿ ಪಟ್ಟಣದಲ್ಲಿ ನಾವು ತೋರಾಧಾರ ಮಾಡಿ ಸಾಲ ನೀಡಿದ "ಟ್ರ್ಯಾಕ್ಟರ್‌ಗಳ ಜಾಥಾ"ವನ್ನು ಏರ್ಪಡಿಸಲಾಗಿದೆ ಎಂದು ಅವರು ತಿಳಿಸಿದರು. ಶಾಖಾ ಸ್ಥಳದಿಂದ ಆರಂಭವಾಗುವ ಜಾಥಾವು 'ಕೈಮರ ಸರ್ಕಲ್'ವರೆಗೆ ಸಾಗಿ ಪುನಃ ಶಾಖಾ ಸ್ಥಳಕ್ಕೆ ಬಂದು ಕೊನೆಗೊಳ್ಳಲಿದೆ ಎಂದು ಅವರು ತಿಳಿಸಿದರು.

**ರೈತರಿಗೆ ಉತ್ತೇಜನ :** ಟ್ರ್ಯಾಕ್ಟರ್ ಖರೀದಿಗೆ ರೈತರಿಗೆ ಸಾಲವನ್ನು 'ಚಾಲಕನೇ ಮಾಲೀಕ' ಯೋಜನೆಯಲ್ಲಿ ಎಲ್ಲಾ ಶಾಖೆಗಳಲ್ಲೂ ನೀಡಲಾಗುತ್ತಿದೆ. ಚನ್ನಗಿರಿ ಶಾಖೆ ಆರಂಭವಾಗಿ ಕೇವಲ 10 ತಿಂಗಳುಗಳಾಗಿದ್ದು ಇದುವರೆಗೂ 15 ಟ್ರ್ಯಾಕ್ಟರ್‌ಗಳ ಖರೀದಿಗೆ ಸಾಲವನ್ನು ಮಂಜೂರು ಮಾಡುವ ಮೂಲಕ ರೈತರಿಗೆ ಉತ್ತೇಜನ ನೀಡಲಾಗುತ್ತಿದೆ ಎಂದು ದಾವಣಗೆರೆ ಕ್ಲಸ್ಟರ್ ಮ್ಯಾನೇಜರ್ ಶ್ರೀ ನವೀನ್ ರಾಜ್ ಅವರು ತಿಳಿಸಿದರು. ಹಾಲಿನ ಡೈರಿ ನಿರ್ಮಾಣಕ್ಕೆ, ಜಾನುವಾರು ಖರೀದಿಗೆ ಸಾಲ, ರೈತರ ತುರ್ತು ಸಂದರ್ಭಗಳಲ್ಲಿ ಬಂಗಾರದ ಆಭರಣಗಳನ್ನು ಈಡು ಮಾಡಿಕೊಂಡು ವಾರದ ಯಾವುದೇ ದಿನದಲ್ಲೂ ಸಂಜೆ 6 ರ ವರೆಗೆ ಶೀಘ್ರ ಸಾಲ ಮಂಜೂರಾತಿಯ ವ್ಯವಸ್ಥೆ ಮಾಡಲಾಗಿದೆ ಎಂದು ಸಹ ತಿಳಿಸಿದರು.

**ಹೆಚ್ಚುವರಿ ಅವಧಿಯ ಸೇವೆ :** ಸಂಜೆ 7:30 ರವರೆಗೆ ನಗು ಮೊಗದ ಸೇವೆ ನೀಡುತ್ತಿರುವುದು ನೌಕರಿದಾರರಿಗೆ, ರೈತಾಪಿ ಜನರಿಗೆ, ಸಣ್ಣ ಉದ್ದಿಮೆದಾರರಿಗೆ ವರದಾನವಾಗಿದೆ ಎಂದು ವ್ಯವಸ್ಥಾಪಕರು ಬಣ್ಣಿಸಿದರು.

**ಬ್ಯಾಂಕಿನ ಹಲವು ಪ್ರಥಮಗಳು :**

1. ದೇಶದ ATM ಜಾಲಕ್ಕೆ ಸೇರ್ಪಡೆಗೊಂಡು ಸ್ವಂತ ಡೆಬಿಟ್ ಕಾರ್ಡ್ ನೀಡಲು ಆರಂಭಿಸಿದ ರಾಜ್ಯದ ಪ್ರಥಮ ಸಹಕಾರಿ ಬ್ಯಾಂಕ್.
2. ರಿಜರ್ವ್ ಬ್ಯಾಂಕಿನಿಂದ 'ಮೊಬೈಲ್ ಬ್ಯಾಂಕಿಂಗ್' ಆರಂಭಿಸಲು ಅನುಮತಿ ಪಡೆದ ಕರ್ನಾಟಕದ ಪ್ರಥಮ ಸಹಕಾರಿ ಬ್ಯಾಂಕ್.
3. 'ನೇರ ಸಬ್ಸಿಡಿ ವರ್ಗಾವಣೆ ಸೌಲಭ್ಯ'ವನ್ನು ನೀಡುತ್ತಿರುವ ರಾಜ್ಯದ ಪ್ರಥಮ ಸಹಕಾರಿ ಬ್ಯಾಂಕ್.
4. 'ಕಾಲ ಸೆಂಟರ್' ಸೇವೆ ನೀಡುತ್ತಿರುವ ರಾಜ್ಯದ ಪ್ರಥಮ ಸಹಕಾರಿ ಬ್ಯಾಂಕ್




5. U.P.I (Unified Payment Interface) ಸೇವೆಯನ್ನು ನೀಡಲು ಆರಂಭಿಸಿದ ರಾಜ್ಯದ ಪ್ರಥಮ ಸಹಕಾರಿ ಬ್ಯಾಂಕ್ ಸುಕೋ ಬ್ಯಾಂಕ್ ಎಂದು ರಮೇಶ್ ಅವರು ತಿಳಿಸಿದರು.

**ಮುಂಬರುವ ಸೇವೆಗಳು**

1. 'ಬಿಜಿನೆಸ್ ಕರೆಸ್ಪಾಂಡೆಂಟ್ ಏಜೆಂಟ್ಸ್' ಮುಂಖಾಂತರ ಬ್ಯಾಂಕಿಂಗ್ ಸೇವೆಯನ್ನು ನಗರದ ಸುತ್ತಮುತ್ತ Un Banked Area ಗಳಲ್ಲಿ ಆರಂಭಿಸುವುದು.
2. ಸ್ವಂತ IFSC ಕೋಡ್ ಮೂಲಕ ಶೀಘ್ರ RTGS/ NEFT ಸೇವೆ.
3. ಇನ್ನೆರಡು ವರ್ಷಗಳಲ್ಲಿ ಷೆಡ್ಯೂಲ್ಡ್ ಬ್ಯಾಂಕ್ ಆಗುವುದು ಬ್ಯಾಂಕಿನ ಮುಂದಿನ ಯೋಜನೆಗಳು ಎಂದು ಪಾಲಯ್ಯ ಅವರು ತಿಳಿಸಿದರು.

ಚನ್ನಗಿರಿ ಪಟ್ಟಣದ ನಾಗರಿಕರು ನಮ್ಮ ಬ್ಯಾಂಕಿನ ಎಲ್ಲಾ ಸೇವೆಗಳನ್ನು ಬಳಸಿಕೊಂಡು ಶಾಖೆಯು ಸರ್ವಾಂಗೀಣ ಪ್ರಗತಿ ಸಾಧಿಸಲು ಸಹಕರಿಸಬೇಕೆಂದು ವ್ಯವಸ್ಥಾಪಕರು ವಿನಂತಿಸಿದರು.

## ಅಧ್ಯಕ್ಷರು – ಉಪಾಧ್ಯಕ್ಷರ ಆಯ್ಕೆ : ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಕಲಬುರಗಿ



ಶ್ರೀ ಚಂದ್ರಶೇಖರ ಪರಸರೆಡ್ಡಿ,
ಅಧ್ಯಕ್ಷರು



ಶ್ರೀ ಪ್ರಕಾಶ ಕುಲಕರ್ಣಿ,
ಉಪಾಧ್ಯಕ್ಷರು

## ಯು.ಕೆ. ಸೌಹಾರ್ದ ಪತ್ತಿನ ಸಹಕಾರಿ ವಾರ್ಷಿಕ ಸಾಮಾನ್ಯ ಸಭೆ – ಯಲ್ಲಾಪುರ

**ಉತ್ತರ ಕನ್ನಡ :** ಯು.ಕೆ. ಸೌಹಾರ್ದ ಪತ್ತಿನ ಸಹಕಾರಿ ನಿ., ಯಲ್ಲಾಪುರ ಸಹಕಾರಿಯ 2017–18ನೇ ಸಾಲಿನ ವಾರ್ಷಿಕ ಸರ್ವಸಾಧಾರಣ ಸಭೆಯನ್ನು ದಿನಾಂಕ : 24.09.2018 ಸಹಕಾರಿಯ ಅಧ್ಯಕ್ಷರಾದ ಶ್ರೀ ಪ್ರಮೋದ ವಿ ಹೆಗಡೆ ಇವರ ಅಧ್ಯಕ್ಷತೆಯಲ್ಲಿ ಯಲ್ಲಾಪುರದ ಎ.ಪಿ.ಎಮ್.ಸಿ. ಯ ಅಡಿಕೆ ಭವನದಲ್ಲಿ ನಡೆಸಲಾಯಿತು.

ಶ್ರೀ ಸುಬ್ರಹ್ಮಣ್ಯ ಜಿ ಹೆಗಡೆ ಇವರು ಸಹಕಾರಿಯ ನೂತನ ವೆಬ್‌ಸೈಟ್ ಉದ್ಘಾಟಿಸಿದರು ಮತ್ತು ಎಮ್.ಆರ್. ಹೆಗಡೆ ಕುಂಬ್ರಿಗುಡ್ಡ, ಅಧ್ಯಕ್ಷರು ಮಲೆನಾಡು ಸೊಸೈಟಿ ಯಲ್ಲಾಪುರ ಇವರು ನೂತನವಾಗಿ ಪ್ರಾರಂಭಿಸಲ್ಪಡುವ ಸ್ವರ್ಣಶ್ರೀ ಬಂಗಾರದ ಉಳಿತಾಯದ ಯೋಜನೆಯನ್ನು ಉದ್ಘಾಟಿಸಿದರು.

## ಅರಿಹಂತ ಅರ್ಬನ್ ಸೌಹಾರ್ದ ಪತ್ತಿನ ಸಹಕಾರಿ 19ನೇ ವಾರ್ಷಿಕ ಸಾಮಾನ್ಯ ಸಭೆ - ಹುಲ್ಲೋಳಿ



**ಬೆಳಗಾವಿ :** ಅರಿಹಂತ ಅರ್ಬನ್ ಸೌಹಾರ್ದ ಪತ್ತಿನ ಸಹಕಾರಿ ನಿ., ಹುಲ್ಲೋಳಿ ಇದರ 19ನೇ ವಾರ್ಷಿಕ ಸಾಮಾನ್ಯ ಸಭಯು ದಿನಾಂಕ : 02.09.2018ರಂದು ನಡೆಯಿತು.

| ಸಹಕಾರಿಯ ಪ್ರಗತಿ ನೋಟ | |
|---|---|
| ವಿವರಗಳು | 30.03.2018ಕ್ಕೆ ಇದ್ದಂತೆ |
| ಸದಸ್ಯರ ಸಂಖ್ಯೆ | 6,156 |
| ಶೇರು ಬಂಡವಾಳ | ರೂ. 55,89,400/– |
| ಕಾಯ್ದಿಟ್ಟ ನಿಧಿ ಮತ್ತು ಇತರೆ ನಿಧಿಗಳು | ರೂ. 7,04,13,032/– |
| ಒಟ್ಟು ಠೇವಣಿ | ರೂ. 93,62,29,146.16/– |
| ಗುಂತಾವಣೆಗಳು | ರೂ.41,21,55,760/– |
| ಸಾಲಗಳು | ರೂ. 57,39,11,710/– |
| ದುಡಿಯುವ ಬಂಡವಾಳ | ರೂ. 102,66,30,132.81 |
| ಒಟ್ಟು ವಹಿವಾಟು | ರೂ. 552,29,76,404.98 |
| ನಿವ್ವಾಳ ಲಾಭ | ರೂ.1,31,06,514.33 |
| ಲಾಭಾಂಶ ನೀಡಿದ್ದು | 25% |
| ಶಾಖೆಗಳು | 1+6=7 |
| ಸಾಲ ವಸೂಲಾತಿ | 99% |



ಸೌಖ್ಯ ಸಮೃದ್ಧಿ ಸೌಹಾರ್ದ ಸಹಕಾರಿಯಿಂದ ತರಬೇತಿ ಕಾರ್ಯಕ್ರಮ– ಕೋಲಾರ



**ಚಾಮರಾಜನಗರ :** ಗುಂಡ್ಲುಪೇಟೆ ತಾಲ್ಲೂಕಿನ ವಿಪ್ರ ಸಮುದಾಯದಲ್ಲಿ ನಡೆದ ಪ್ರವರ್ತಕರ ಸಭೆ.



**ಬಳ್ಳಾರಿ :** ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಹಾಗೂ ಸ್ವಾತಿ ಪತ್ತಿನ ಸೌಹಾರ್ದ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎಲ್. ಎಸ್ ಆನಂದ ಇವರು ಬಳ್ಳಾರಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.

## ಶ್ರೀ ಪತಂಜಲಿ ಸೌಹಾರ್ದ ಸಹಕಾರಿ ವಾರ್ಷಿಕ ಸಾಮಾನ್ಯ ಸಭೆ - ಪಾವಗಡ

ದಿನಾಂಕ : 16–09–2018 ರಂದು ಶ್ರೀ ಪತಂಜಲಿ ಸೌಹಾರ್ದ ಪತ್ತಿನ ಸಹಕಾರಿಯ ಅವರಣದಲ್ಲಿ ಸಹಕಾರಿಯ ಸರ್ವ ಸದಸ್ಯರ ಸಭೆ ಹಮ್ಮಿಕೊಂಡಿದ್ದು ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಕೆ.ಸುದರ್ಶನ್ ರಾವ್ ಸಹಕಾರಿಗೆ 2017–18 ಸಾಲಿಗೆ 47.12 ಲಕ್ಷ ರೂ ನಿವ್ವಳ ಲಾಭ ಗಳಿಸಿದೆ ತಿಳಿಸಿದರು. ಸಹಕಾರಿಯನ್ನು ಮತ್ತಷ್ಟು ಅಭಿವೃದ್ಧಿಯತ್ತ ಕೊಂಡೊಯ್ಯಲು ಗ್ರಾಹಕರು ಹಾಗೂ ಸದಸ್ಯರು ಸಹಕಾರ ನೀಡಬೇಕು. ಸಹಕಾರಿಯು ಪ್ರತಿವರ್ಷ ಡಿವಿಡೆಂಡ್ ನೀಡುತ್ತಿದ್ದು ಈ ವರ್ಷ ಶೇ 18 ರಷ್ಟು ಎಂದು ಘೋಷಿಸಿದರು.

| ಆರ್ಥಿಕ ಅಂಶಗಳು | ಲಕ್ಷಗಳಲ್ಲಿ |
|---|---|
| ಷೇರು ಬಂಡವಾಳ | 24.16 |
| ದುಡಿಮೆ ಬಂಡವಾಳ | 1086.76 |
| ಹೂಡಿಕೆಗಳು | 325.34 |
| ಠೇವಣಿಗಳು | 824.77 |
| ಸಾಲಗಳು | 849.69 |
| ನಿವ್ವಳಲಾಭ | 47.12 |



**ಪ್ರವರ್ತಕರ ಸಭೆ – ಮೈಸೂರು :** ಹೆಚ್.ಡಿ. ಕೋಟೆ ತಾಲ್ಲೂಕಿನ ಗಂಡೇತ್ತೊರುನಲ್ಲಿ ಪ್ರವರ್ತಕರ ಸಭೆ.

## ಕ್ಲಸ್ಟರ್ ತರಬೇತಿ – ಬೆಂಗಳೂರು ಹಾಗೂ ರಾಮನಗರ



**ಬೆಂಗಳೂರು :** ದಿನಾಂಕ : 26–10–2018ರ ಶುಕ್ರವಾರದಂದು ಬೆಂಗಳೂರು ಪ್ರಾಂತೀಯ ಕಛೇರಿಯಲ್ಲಿ ಬೆಂಗಳೂರು ನಗರದ ಸೌಹಾರ್ದ ಸಹಕಾರಿಗಳಿಗಾಗಿ ಚುನಾವಣಾ ಪೂರ್ವ ಸಿದ್ಧತಾ ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಕಾನೂನು ಅಧಿಕಾರಿಗಳಾದ ಶ್ರೀ ಸಂಜಯ್ ಕೊರಟಕರ ರವರು ಉಪನ್ಯಾಸ ನೀಡಿದರು. ತರಬೇತಿಯಲ್ಲಿ 06 ಸೌಹಾರ್ದ ಸಹಕಾರಿಗಳಿಂದ 07 ಪ್ರತಿನಿಧಿಗಳು ಭಾಗವಹಿಸಿದ್ದರು.

**ರಾಮನಗರ :** ದಿನಾಂಕ : 30–10–2018ರ ಶುಕ್ರವಾರದಂದು ಬೆಂಗಳೂರು ಪ್ರಾಂತೀಯ ಕಛೇರಿಯಲ್ಲಿ ರಾಮನಗರ ಸೌಹಾರ್ದ ಸಹಕಾರಿಗಳಿಗಾಗಿ ಚುನಾವಣಾ ಪೂರ್ವ ಸಿದ್ಧತಾ ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಕಾನೂನು ಅಧಿಕಾರಿಗಳಾದ ಶ್ರೀ ಸಂಜಯ್ ಕೊರಟಕರ ರವರು ಉಪನ್ಯಾಸ ನೀಡಿದರು. ತರಬೇತಿಯಲ್ಲಿ 07 ಸೌಹಾರ್ದ ಸಹಕಾರಿಗಳಿಂದ 11 ಪ್ರತಿನಿಧಿಗಳು ಭಾಗವಹಿಸಿದ್ದರು.

### ಕೊಡಗು ನೆರೆಸಂತ್ರಸ್ತರಿಗೆ ಸಹಾಯಧನ ನೀಡಿದ ಸಹಕಾರಿಗಳು (ಇದುವರೆಗಿನ ಮೊತ್ತ : 20,26,809)

| SL.NO | NAME OF SOUHARDA CO-OPERATIVE | AMOUNT(Rs.) |
|---|---|---|
| 1 | SRI VIRUOAKSHESHWARA PATTINA SOUHARDA SAHAKARI NIYAMITHA MANAVI | 1,00,000.00 |
| 2 | LAXMI PATTINA SOUHARDA SAHAKARI NI | 50,000.00 |
| 3 | VIPRA VIVIDODDESHA SOUHARDA SAHAKARI NI | 50,000.00 |
| 4 | ODIYOOR SHREE VIVIDHODDESHA SOUHARDA SAHAKARI NI | 25,000.00 |
| 5 | SRI SARASWATHI CREDIT SOUHARDA SAHAKARI NI | 25,000.00 |
| 6 | SRI GURU RAMALINGESHWAR SOUHARDA PATTINA SAHAKARI NI., | 25,000.00 |
| 7 | Nandi Souharda Pattina Sahakari Ni., | 10,000.00 |
| 8 | Sri Kanyaka Parameshwari Souharda Sahakara Ni.,Chitradurga | 10,000.00 |
| 9 | Sri Basaveshwara Pattina Souharda Sahakari Ni.Gokak | 5,000.00 |
| 10 | SIRI SOUHARDA CREDIT CO-OP LTD | 5,000.00 |
| 11 | SRI MATHA VIVIDODDESHA PATTINA SOUHARDA SAHKARI NI | 5,000.00 |
| 12 | CHANNABASAVESHWARA CREDIT SOUHARDA SAHAKRI NI | 5,000.00 |
| 13 | SRI LAKSHMI MAHILA SOUHARDA CREDIT CO-OP LTD | 5,000.00 |
| 14 | BHARTH PATTINA SOUHARDA SAHAKARI NI | 5,000.00 |
| 15 | MEENU MARATAGARA VIVIDODDESHASOUHARDA SAHAKARI NI | 5,000.00 |
| 16 | UDUPI JANASEVA CREDIT SOUHARDA SAHAKARI NI | 5,000.00 |
| 17 | TULUNADU KALPAVRUKSHA SOUHARDA SAHAKARI NI | 3,000.00 |
| 18 | PANDHUBETTA SOUHARDA SAHAKARI NI | 2,000.00 |
| 19 | ARYA VYSYA SOUHARDA SHAKARI NI | 2,000.00 |
| 20 | SWARNA VIVIDODDESHA SOUHARDA SAHAKARI NI., | 2,000.00 |
| 21 | SRI PARAMAPOOJYA SIDDESHWARA SHRIGALA VIVIDHODDESHAGALA SOUHARDA CO-OP LTD | 2,000.00 |
| 22 | NETHRAVATHI CREDIT SOUHARDA SAHAKARI NI | 1,000.00 |
| 23 | ANANDA SAGARA SOUHARDA PATTINA SAHAKARI NI KOPPLA | 1,000.00 |
| 24 | KONKANA CREDIT SOUHARDA SAHAKARI NI | 1,000.00 |
| 25 | JANASNEHI NIVRUTHA NOUKARA PATTINA SOUHARDA SAHAKARI NI | 200.00 |
| | ಒಟ್ಟು ಮೊತ್ತ ರೂ. 23,76,009/– | |

## ನಕಲಿ ಅಧಿಕಾರಿ ಶ್ರೀಧರ ಮುತಗಿ ಬಂಧನ – ಸಹಕಾರ ಇಲಾಖೆ ಹಾಗೂ ಸಂಯುಕ್ತ ಸಹಕಾರಿಯ ಅಧಿಕಾರಿಯೆಂದು ಹೇಳಿಕೊಂಡ ನಕಲಿ ಅಧಿಕಾರಿ



**ಬೆಳಗಾವಿ :** ಸಹಕಾರ ಲೆಕ್ಕಪರಿಶೋಧನಾ ಇಲಾಖೆಯ ಅಧಿಕಾರಿಯೆಂದು ಸಹಾಯಕ ನಿಬಂಧಕರೆಂದು ಹೇಳಿಕೊಂಡು ಶ್ರೀ ಜಗನ್ನಾಥ ಸೌಹಾರ್ದ ಸಹಕಾರಿ ನಿ., ಸಾಂಬ್ರಾ, ಬೆಳಗಾವಿ ಈ ಸಹಕಾರಿಗೆ ಭೇಟಿಕೊಟ್ಟು ಸಹಕಾರಿಯ ಲೆಕ್ಕಪತ್ರಗಳನ್ನು ಪರಿಶೀಲಿಸಿ ತನ್ನ ಸಹಿಯನ್ನು ಲೆಡ್ಜರ್‌ನಲ್ಲಿ ನಮೂದು ಮಾಡಿರುವುದಲ್ಲದೇ, ಸಹಕಾರ ಇಲಾಖೆಯೊಡನೆ ಮತ್ತು ಸಂಯುಕ್ತ ಸಹಕರಿಯೊಡನೆ ನಿಕಟ ಸಂಪರ್ಕ ಹೊಂದಿರುವನೆಂದು ತಿಳಿಸಿ ಸಹಕಾರಿಗೆ ಉಪವಿಧಿ ತಿದ್ದುಪಡಿ ಕಾರ್ಯವನ್ನು ಮಾಡಿಕೊಡುವುದಾಗಿ ನಂಬಿಸಿ ರೂ.10,000/– ಪಡೆದು ಶ್ರೀ ವಿ.ಎಸ್.ಬೋಂಗಾಳೆ, ಸಹಕಾರಿಗಳ ಸಹಾಯಕ ನಿಬಂಧ–ಕರು, ಉಪವಿಭಾಗ ಬೆಳಗಾವಿ ಇವರ ಹೆಸರಿನಲ್ಲಿ ನಕಲಿ ದಾಖಲೆ ಸೃಜಿಸಿ ಸಹಿ ಹಾಗೂ ಮೊಹರು ಹಾಕಿ ಸಹಕಾರಿಗೆ ನೀಡಿರುತ್ತಾರೆ. ನಂತರದಲ್ಲಿ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರು ಮತ್ತು ಅಧ್ಯಕ್ಷರು ಅನುಮಾನಗೊಂಡು ಬೆಳಗಾವಿ ಪ್ರಾಂತೀಯ ಕಛೇರಿಗೆ ನೀಡಿದ ಮಾಹಿತಿಯನ್ವಯ ಸಹಕಾರಿಗೆ ಭೇಟಿ ನೀಡಿದಾಗ ಕಂಡುಬಂದದೇನೆಂದರೆ ಸದರಿ ಎಲ್ಲಾ ದಾಖಲೆಗಳೂ ನಕಲಿಯಾಗಿದ್ದು ಇದನ್ನು ಬೆಳಗಾವಿ ಮಹಾದ್ವಾರ ರಸ್ತೆಯ ನಿವಾಸಿಯಾದ ಶ್ರೀ ಶ್ರೀಧರ ಮುತಗಿ ಇವರು ಮಾಡಿರುವುದು ಕಂಡುಬಂದಿರುತ್ತದೆ. ತೀವ್ರ ವಿಚಾರಣೆಯ ನಂತರ ಸದರಿಯವರನ್ನು ಹೆಚ್ಚಿನ ವಿಚಾರಣೆಗಾಗಿ ಮಾರಿಹಾಳ ಪೋಲೀಸ್ ಠಾಣೆಗೆ ಒಪ್ಪಿಸಲಾಗಿದೆ ಮತ್ತು ಸಹಕಾರಿಯ ವತಿಯಿಂದ ಸದರಿಯವರ ವಿರುದ್ಧ ದೂರು ದಾಖಲಾಗಿರುತ್ತದೆ.

ಈ ರೀತಿಯ ಯಾವುದೇ ಅಪರಿಚಿತ ವ್ಯಕ್ತಿಗಳು ಸಹಕಾರ ಇಲಾಖೆ ಮತ್ತು ಸಂಯುಕ್ತ ಸಹಕಾರಿಯ ಅಧಿಕಾರಿಗಳೆಂದು ಹೇಳಿಕೊಂಡು ಹಣದ ಬೇಡಿಕೆ ಇಟ್ಟಲ್ಲಿ ಸ್ಥಳೀಯ ಸೌಹಾರ್ದ ಅಭಿವೃದ್ಧಿ ಅಧಿಕರಿಗಳು/ಪ್ರಾಂತೀಯ ಕಛೇರಿಗೆ ಮಾಹಿತಿ ನೀಡಲು ಈ ಮೂಲಕ ತಿಳಿಸಿದೆ.

## ಉದ್ಘಾಟನಾ ಕಾರ್ಯಕ್ರಮ



**ಉಡುಪಿ :** ಸನ್ನಿಧಿ ಮಹಿಳಾ ಸೌಹಾರ್ದ ಸಹಕಾರಿ ನಿ., ಪಾಂಡೇಶ್ವರ ಹಾಗೂ ಮಣಿಪಾಲ ಆಸ್ಪತ್ರೆ ಇದರ ಸಹಯೋಗದಲ್ಲಿ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಮಾನ್ಯ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ ರವರು ಉದ್ಘಾಟಿಸಿದರು.



**ಮೈಸೂರು :** ಶ್ರೀ ವಾಗ್ದೇವಿ ಸೌಹಾರ್ದ ಪತ್ತಿನ ಸಹಕಾರಿ ನಿ., ಮೈಸೂರು ಸದರಿ ಸಹಕಾರಿಗೆ ಆದಾಯ ತೆರಿಗೆ ವಿಷಯದ ಸಲುವಾಗಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ಇವರು ಭೇಟಿ ನೀಡಿ ಮಾಹಿತಿ ಒದಗಿಸಿದರು.



**ಕೊಪ್ಪಳ :** ಸೌಭಾಗ್ಯಲಕ್ಷ್ಮೀ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಕೊಪ್ಪಳ ಸಹಕಾರಿಯು ದಿನಾಂಕ : 29.10.2018 ರಿಂದ 3.11.2018ರ ವರೆಗೆ ಭಷ್ಟಾಚಾರ ನಿರ್ಮೂಲನಾ ಸಪ್ತಾಹ ದಿನಾಚರಣೆಯನ್ನು ಆಚರಿಸಲಾಯಿತು.



ಆರ್.ಡಿ. ಸೋನಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ವಾರ್ಷಿಕ ಸಾಮಾನ್ಯ ಸಭೆ – ಹೊಸಪೇಟೆ.

# ದೀಪಾವಳಿ ಹಿರಿಮೆ

**ಅಸತೋಮ ಸದ್ಗಮಯ, ತಮಸೋಮ ಜ್ಯೋತಿರ್ಗಮಯ,**
**ಮೃತ್ಯೋರ್ಮ ಅಮೃತಂಗಮಯ ಓಂ ಶಾಂತಿ, ಶಾಂತಿ ಶಾಂತಿಃ**

ಅಜ್ಞಾನವೆಂಬ ಕತ್ತಲನ್ನು ಕಳೆದು ಬದುಕಿನಲ್ಲಿ ಸುಜ್ಞಾನವೆಂಬ ಜ್ಯೋತಿಯನ್ನು ಬೆಳಗಿಸುವ ಹಬ್ಬ ದೀಪಾವಳಿ. ಇದನ್ನು ಬೆಳಕಿನ ಹಬ್ಬ ಎಂದು ಕೂಡ ಹೇಳ್ತಾರೆ, ನಾವು ಹಚ್ಚುವ ದೀಪ ಬೆಳಕಿನಿಂದ ನಮ್ಮೊಳಗಿನ ಅಜ್ಞಾನವನ್ನು ಅವಿವೇಕ, ಕೆಟ್ಟ ಗುಣಗಳು ನಾಶವಾಗಿ ಸದ್ಗುಣಗಳು ಹೆಚ್ಚಲಿ, ಎಲ್ಲೆಡೆ ಶಾಂತಿ, ಸಮೃದ್ಧಿ ನೆಲಸಲಿ ಎಲ್ಲರಿಗೂ ಮಂಗಳವಾಗಲಿ ದೀಪದಲ್ಲಿ ನಮಗೆ ಸಂತೋಷ, ದೇವರ ರೂಪ ಖಾಣಿಸಲಿ ಎಂದು ಆಶಿಸುತ್ತಾ ದೀಪಾವಳಿಯ ದಿನ ದೀಪ ಹಚ್ಚಬೇಕು ಎಂಬುದರ ಅರ್ಥ ಈ ಶ್ಲೋಕ.

ಬೆಳಕಿನ ಹಬ್ಬ ದೀಪಾವಳಿ ನಮ್ಮ ಸಂಪ್ರದಾಯದಲ್ಲಿ ಬೆಳಕಿಗೆ ಅತ್ಯಂತ ಮಹತ್ವವಿದೆ. ನಾವು ಯಾವುದೇ ಶುಭ ಸಮಾರಂಭ ಆಚರಿಸುವುದೇ ದೀಪ ಹಚ್ಚುವುದರ ಮೂಲಕ. ಬೆಳಕು ಜ್ಞಾನದ ರೂಪಕ, ಯಾವುದೇ ಭೇದವಿಲ್ಲದೆ ಹರಡುವ ಬೆಳಕು ಸಮಾನತೆಯ ಸಂಕೇತವೂ ಹೌದು.

ಕಷ್ಟಗಳೆಂಬ ಕತ್ತಲನ್ನು ದೂಷಿಸುವುದು ಬೇಡ, ಪ್ರಯತ್ನವೆಂಬ ಪುಟ್ಟ ದೀಪವನ್ನು ಹಚ್ಚು ಎನ್ನುತ್ತಾನೆ ಪ್ರಯತ್ನ ಪಡುವ ಆಶಾವಾದಿ. ದೀಪಾವಳಿಯ ಬೆಳಕು ಎಲ್ಲರಿಗೂ ಬೇರೆ ಬೇರೆ ರೂಪದಲ್ಲಿ ಸಾಕ್ಷಾತ್ಕಾರ.

**ದೀಪಾವಳಿ ಹಬ್ಬದ ಮಹತ್ವ :** ನಮಗೆ ದೀಪಾವಳಿ ಎಂದರೇನೆ ಮನೆಯ ಒಳಗೆ ಹಾಗೂ ಮುಂಭಾಗದಲ್ಲಿ ದೀಪ ಇಡುವ ಸಂಭ್ರಮ, ಆಗಸದಲ್ಲಿ ಚಿಮ್ಮುವ ಬೆಳಕಿನ ಬಾಣ ಬಿರುಸು, ಹೊಸ ಉಡುಪುಗಳನ್ನು ಧರಿಸುವುದು ಬಗೆಬಗೆಯ ತಿಂಡಿಗಳನ್ನು ಮಾಡುವುದು, ಎಲ್ಲರೂ ಕೂಡಿ ನಲಿದಾಡುವುದು, ಕಿವಿಗೆ ಅಪ್ಪಳಿಸುವ ಪಟಾಕಿ ಸದ್ದು ಅದಷ್ಟೆ ಮಾತ್ರ ಮೇಲ್ನೋಟಕ್ಕೆ ಕಾಣ್ತದೆ ಆದರೆ ಈ ಹಬ್ಬದ ಆಚರಣೆಯ ಹಿಂದೆ ಹಲವು ವೈಶಿಷ್ಠತೆ ಪುರಾಣ, ಸಂಪ್ರದಾಯ, ಸಂಸ್ಕೃತಿಗಳು ಇವೆ.

ದೀಪಾವಳಿ ಹಬ್ಬದ ಮೊದಲಿಗೆ ಎಣ್ಣೆ ಸ್ನಾನ ಮಾಡ್ತೆವೆ, ಇದಕ್ಕೆ ಕಾರಣ ಶ್ರೀವಿಷ್ಣು ಅಮೃತಕಲಶದೊಡನೆ ಧನ್ವಂತರಿಯಾಗಿ ಅವತಾರ ತಾಳಿದ ದಿನ, ತುಂಬುವ ಸ್ನಾನದ ನೀರಿನಲ್ಲಿ ಗಂಗೆಯೂ ಹಾಗೂ ಎಣ್ಣೆಯಲ್ಲಿ ಧನಲಕ್ಷ್ಮಿಯೂ ಇರುತ್ತಾರೆಂಬುದು ನಂಬಿಕೆ. ಹೀಗೆ ಸ್ನಾನ ಮಾಡಿದರೆ ಆಯುರಾರೋಗ್ಯ ಆಯಸ್ಸು ವೃದ್ಧಿಸುವುದೆಂದು ಹಾಗೂ ಪಾಪಗಳು ನಿವಾರಣೆಯಾಗುವುದೆಂದು ನಂಬಿಕೆಯಿದೆ. ನರಕಾಸುರನನ್ನು ಕೊಂದ ಪಾಪ ಪರಿಹಾರಕ್ಕಾಗಿ ಶ್ರೀ ಕೃಷ್ಣನು ಕೂಡ ಎಣ್ಣೆ ಸ್ನಾನ ಮಾಡಿದ ಎಂದು ಹೇಳುತ್ತಾರೆ.

### ಹಬ್ಬದ ಮೊದಲ ದಿನ ನರಕ ಚತುರ್ದಶಿ

ನರಕ ಚತುರ್ದಶಿ ಅಂತ ಕೇಳಿದ್ರೆ ನೆನಪಾಗೋದು ನರಕಾಸುರ. ಮಹಾವಿಷ್ಣು ವರಾಹವತಾರದಲ್ಲಿದಾಗ ಅವನ ಶರೀರದಿಂದ ಒಂದು ತೊಡ್ಡು ಬೆವರು ಭೂಮಿಗೆ ಬೀಳಲಾಗಿ ಭೂದೇವಿಯಲ್ಲಿ ನರಕಾಸುರ ಜನಿಸುತ್ತಾನೆ. ನರಕಾಸುರನಿಗೆ ಭೌಮಾಸುರ, ಭೂಮಿಪುತ್ರ ಎಂದೂ ಕರೆಯುತ್ತಾರೆ. ತಾಯಿ ಭೂದೇವಿ ಮಹಾವಿಷ್ಣುವನ್ನು ಬೇಡಿ ನರಕಾಸುರನಿಗೆ ವೈಷ್ಣವಾಸ್ತ್ರವನ್ನು ವರವಾಗಿ ಕೊಡಿಸುತ್ತಾಳೆ.ಇದರಿಂದ ಬಲಿಷ್ಠನಾದ ನರಕಾಸುರ ಲೋಕಕ್ಕೆ ಕಂಠಕನಾಗುತ್ತಾನೆ.

ನರಕಾಸುರನ ದುಷ್ಟತನ ತಾಯಿ ಭೂದೇವಿಗೂ ಸಹಿಸಲು ಸಾಧ್ಯವಾಗಲಾದಾಗ ಈ ದುಷ್ಟ ಮಗನನ್ನು ಕೊಂದು ಲೋಕವನ್ನು ಕಾಪಾಡು ಎಂದು ಶ್ರೀ ಕೃಷ್ಣನಿಗೆ ಹೇಳಿದಾಗ, ಚತುರ್ದಶಿಯ ಕಗ್ಗತ್ತನಲ್ಲಿ ಶ್ರೀಕೃಷ್ಣನು ನರಕಾಸುರನನ್ನು



ಸಂಹರಿಸಿತ್ತಾನೆ. ಆ ದಿನವೇ ನರಕ ಚತುರ್ದಶಿ, ದುಷ್ಟ ಸಂಹಾರದ ಸಂಕೇತವಾಗಿ ಆ ದಿನ ಪಟಾಕಿ ಸಿಡಿಸಿ ಸಂಭ್ರಮಿಸಿ ವಿಜಯದ ನಗೆಯಲ್ಲಿ ಎಲ್ಲರೂ ಸಂಭ್ರಮಿಸುತ್ತಾರೆ.

### ಹಬ್ಬದ ಎರಡನೇ ದಿನ ಅಮಾವಾಸ್ಯೆ- ಲಕ್ಷ್ಮೀ ಪೂಜೆ

ನರಕಚತುರ್ದಶಿ ಮಾರನೆಯ ದಿನ ದೀಪಾವಳಿ ಅಮಾವಾಸ್ಯೆಯಾಗಿದ್ದು ಅಂದು ಮಾಹಾವಿಷ್ಣುವಿನ ಪತ್ನಿಯೂ ಆದ ಮಹಾಲಕ್ಷ್ಮೀಯನ್ನು ಆರಾಧಿಸುವ ಹಬ್ಬವೇ ಧನಲಕ್ಷ್ಮೀ ಪೂಜೆ. ಅದರಲ್ಲೂ ವ್ಯಾಪಾರಿಗಳಿಗೆ ದೀಪಲಕ್ಷ್ಮೀ ಬೆಳಗಿ ಧನಲಕ್ಷ್ಮೀ ಬರುವ ಭಾಗ್ಯದ ದಿನವಾಗಿದೆ. ಹಾಗಾಗಿ ಸಂಭ್ರಮದಿಂದ ಕಾರ್ತಿಕ ಮಾಸದ ಆರಂಭದ ಈ ಅಮಾವಾಸ್ಯೆಯ ಮಹಾರಾತ್ರಿಯಲ್ಲಿ ತಾಯಿ ಲಕ್ಷ್ಮೀಗೆ ಆನಂದದಿಂದ ದೀಪಾರಾಧನೆಯೊಡನೆ ಪೂಜೆಯನ್ನು ಮಾಡುತ್ತಾರೆ.


### ಹಬ್ಬದ ಮೂರನೇ ದಿನ ಬಲಿಪಾಡ್ಯಮಿ.

ಇಂದು ಬಲಿಚಕ್ರವರ್ತಿ ಭೂಲೋಕವನ್ನು ಸಂಚಾರಮಾಡ ಬರುತ್ತಾರೆಂದು ನಂಬಿಕೆಯಿದೆ. ಬಲೀಂದ್ರ ಪೂಜೆಯೂ ಕೂಡ ನಡೆಯುತ್ತದೆ. ವಿಷ್ಣುವಿನ ಭಕ್ತ ದಾನಶೂರ ದೈತ್ಯರಾಜ ಬಲಿಚಕ್ರವರ್ತಿಯ ಬಳಿಗೆ ವಾಮನ ಅವತಾರವಾಗಿ ಬಂದ ಮಹಾವಿಷ್ಣು, ಬಲಿಯಿಂದ ಮೂರು ಹೆಜ್ಜೆ ಊರುವಷ್ಟು ಭೂಮಿಯನ್ನು ದಾನವಾಗಿ ಪಡೆದು, ಉಳಿದ ಎರಡು ಹೆಜ್ಜೆಗಳಲ್ಲಿ ಆಕಾಶ-ಭೂಮಿಗಳನ್ನು ಅಳೆದುಕೊಂಡು ತ್ರಿವಿಕ್ರಮನಾಗಿ ಬೆಳೆದು ಮೂರನೇ ಹೆಜ್ಜೆಯನ್ನು ಬಲಿಯ ಕೋರಿಕೆಯಂತೆ ಅವನ ತಲೆಯ ಮೇಲಿಟ್ಟು ಬಲಿಚಕ್ರವರ್ತಿಯನ್ನು ಪಾತಾಳಕ್ಕೆ ತುಳಿದುಬಿಡುತ್ತಾರೆ. ಆಗ ಬಲಿಯ ಭಕ್ತಿಯನ್ನು ಮತ್ತು ದಾನಶೀಲಗುಣವನ್ನು ಮೆಚ್ಚಿದ ವಿಷ್ಣು ಪ್ರತಿವರ್ಷ ಒಂದು ದಿನ ಅವನ ಹೆಸರಿನಲ್ಲಿ ಪೂಜೆ ನೀಡುವಂತೆ ವರ ನೀಡುತ್ತಾನೆ. ಆ ದಿನವೇ ಈ ಬಲಿಪಾಡ್ಯಮಿ.

ಈಗ ಎಲ್ಲ ಕಡೆಯಲ್ಲೂ ಶತ್ರುಗಳ ಉನ್ಮಾದ, ಆದರೆ ಆಧುನಿಕ ಜಗತ್ತಿನಲ್ಲಿ ಶತ್ರು ಯಾರು ಎಂಬುದೇ ದೊಡ್ಡ ಪ್ರಶ್ನೆ. ನಮಗೆ ದೀಪಾವಳಿ ಬೆಳಕಲ್ಲಿ ಏನು ಕಾಣಬೇಕು ಹೊರಗಿನ ಶತ್ರುಗಳು ಬೇಡ, ನಮ್ಮ ಅಂತರಂಗದಲ್ಲಿ ಅಡಗಿರುವ ಕೋಪ, ತಾಪ, ಮತ್ಸರವೆಂಬ ಶತ್ರುಗಳು ದೀಪಾವಳಿಯ ನಮಗೆ ಜ್ಞಾನಜ್ಯೋತಿಯನ್ನು ನೀಡಲಿ. ಮೊದಲು ನಮ್ಮೊಳಗಿನ ಶತ್ರುಗಳು ಗೆಲ್ಲೋಣ ನಂತರ ಹೊರಗಿನ ವಿಚಾರ ಮಾಡೋಣ.

ಹಾಗೆಯೇ ನಮಗೆ ದೀಪಾವಳಿ ಬೆಳಕಲ್ಲಿ ದೀನದಲಿತರ ಕಣ್ಣೀರು, ಸಂಕಷ್ಟ ಮತ್ತು ದುಃಖವನ್ನು ಒರೆಸುವ ಕೈ ನಮ್ಮದಾಗಲಿ. ನನ್ನ ದೃಷ್ಟಿಯಲ್ಲಿ ಸಮೃದ್ಧಿ, ಸಂಪ್ರೀತಿ, ಸಮಾನತೆ, ಸೌಜನ್ಯತೆ ದೀಪದ ಬೆಳಕಿನಂತೆ ಎಲ್ಲೆಡೆ ಹರಡಲಿ ಎಂಬುದೆ ದೀಪಾವಳಿ ಹಬ್ಬದ ಪ್ರಮುಖ ಉದ್ದೇಶ. ನಿಮಗೆ ಮತ್ತು ನಿಮ್ಮ ಕುಟುಂಬದವರಿಗೆ ಈ ದೀಪಾವಳಿ ಮಂಗಳ ಮಾಡಲಿ ಎಂದು ಆಶಿಸುತ್ತಾ ಎಲ್ಲರಿಗೂ ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು.

**– ರೇಣುಕ ಎಂ.ವಿ,**



# RBI NEWS – OCTOBER 2018

K. Vittal Shetty, Banking Consultant, kohimavittal@Hotmail.com, Mobile : 9845699904

**Oct 05, 2018 :** Fourth Bi-monthly Monetary Policy Statement, 2018-19 Resolution of the Monetary Policy Committee (MPC) Reserve Bank of India On the basis of an assessment of the current and evolving macroeconomic situation at its meeting, the Monetary Policy Committee (MPC) decided to:

keep the policy repo rate under the liquidity adjustment facility (LAF) unchanged at 6.5 per cent. Consequently, the reverse repo rate under the LAF remains at 6.25 per cent, and the marginal standing facility (MSF) rate and the Bank Rate at 6.75 per cent. The decision of the MPC is consistent with the stance of calibrated tightening of monetary policy in consonance with the objective of achieving the medium-term target for consumer price index (CPI) inflation of 4 per cent within a band of +/- 2 per cent, while supporting growth. The main considerations underlying the decision are set out in the statement below.

## I. IMPORTANT NEWS.

**1. October 19, 2018 :** Basic Cyber Security Framework for Primary (Urban) Cooperative Banks (UCBs)

Use of Information Technology by banks has grown rapidly and is now an important part of the operational strategy of banks. The number, frequency and impact of cyber incidents/attacks have increased manifold in the recent past, more so in the case of financial sector including banks. There is an urgent need to put in place a robust cyber security/resilience framework at UCBs to ensure adequate security of their assets on a continuous basis. It has, therefore, become essential to enhance the security of the UCBs from cyber threats by improving the current defences in addressing cyber risks.

2. It is observed that the level of technology adoption is also different across the banks in this sector – some banks offering state of the art digital products to its customers and some banks maintaining their books of account in a standalone computer and using e-mail for communicating with its customers/supervisors/ other banks. Hence, it has been decided to issue basic cyber security guidelines applicable to all UCBs. However, any UCB, depending on its Self-Risk Assessment, complexity of its Information Technology (IT)/ Information Security (IS) systems, nature of digital products offered, etc. is free to adopt advanced cyber security norms as decided by their Boards.

3. An indicative but not exhaustive, basic cyber security framework to be implemented by all the UCBs is given in Annex I.

**4. Need for a Board approved Cyber Security Policy –**

All UCBs should immediately put in place a Cyber Security policy, duly approved by their Board/Administrator, giving a framework and the strategy containing a suitable approach to check cyber threats depending on the level of complexity of business and acceptable levels of risk. On completion of the process of policy formulation by the Board, a confirmation shall be sent to Department of Co-operative Bank Supervision, Central Office, C-9, 1st Floor, BKC, Mumbai – 400051 by email within three months from the date of circular. It shall be ensured that the cyber security policy deals with the following broad aspects, keeping in view the level of technology adoption and digital products offered to the customers:

**4.1. Cyber Security Policy to be distinct from the IT policy/IS Policy of the UCB**

The Cyber Security Policy should be distinct from the IT/IS policy of the UCB so that it highlights the risks from cyber threats and the measures to address/reduce these risks. While identifying and assessing the inherent risks, UCBs should keep in view the technologies1 adopted, delivery channels2, digital products3 being offered, internal4 and external5 threats etc., and rate each of these risks as Low, Medium, High and Very High.

**4.2. IT Architecture/Framework should be security compliant**

The IT architecture/ framework which includes network, server, database and application, end user systems, etc., should take care of security measures at all times and this should be reviewed by the Board or IT Sub-committee of the Board periodically. For this purpose, UCBs may carry out the following steps:

i. Identify weak/vulnerable areas in IT systems and processes,

ii. Allow restricted access to networks, databases and applications wherever permitted, through well-defined processes and approvals including rationale for permitting such access,

iii. Assess the cost of impact in case of breaches/failures in these areas and,

iv. Put in place suitable Cyber Security System to address them,

v. Specify and document clearly the responsibility for each of above steps.

A proper record should be kept of the entire process to enable supervisory assessment.

**4.3. Cyber Crisis Management Plan**

4.3.1 Since cyber risk is different from many other risks, the traditional BCP/DR (Business Continuity Plan/Disaster Recovery) arrangements may not be adequate and hence needs to be revisited keeping in view the nature of cyber risk. A Government of India organisation, CERT-In (Computer Emergency Response Team – India, a Government entity) has been taking important initiatives in strengthening Cyber Security by providing proactive/reactive services and guidelines, threat intelligence and assessment of preparedness of various agencies in different sectors, including the financial sector. CERT-In also has come out with National Cyber Crisis Management Plan and Cyber Security Assessment Framework. UCBs may refer to CERT-In/NCIIPC/RBI/IDRBT guidelines as reference material for their guidance.

4.3.2 UCBs should promptly detect any cyber intrusions (unauthorised entries) so as to respond/recover/contain impact of

Swabhimani Sahakari, Monthly, Publishing Date 05th, Posting Day 09th.
Posted at Bangalore PSO, Mysore Road, Bangalore 560026
Registered No. KA/BGW/1744/2017-19. RNI No. KARBIL - 2004/18001/Pages 40



cyber-attacks. Among other things, UCBs, especially those offering services such as internet banking, mobile banking, mobile wallet, RTGS/NEFT/IMPS, SWIFT, debit cards, credit cards etc., should take necessary detective and corrective measures/steps to address various types of cyber threats6 viz. denial of service (DoS), distributed denial of services (DDoS), ransomware/crypto ware, destructive malware, business email frauds including spam, email phishing, spear phishing, whaling, vishing frauds, drive-by downloads, browser gateway fraud, ghost administrator exploits, identity frauds, memory update frauds, password related frauds, etc.

**5. Organisational Arrangements**

UCBs should review the organisational arrangements so that the security concerns are brought to the notice of suitable/ concerned officials to enable quick action.

**6. Cyber Security awareness among Top Management/Board/ other concerned parties**

Managing cyber risk requires the commitment of the entire organization to create a cyber-safe environment. This will require a high level of awareness/familiarisation among staff at all levels including Board and Top Management. UCBs should actively promote among their customers, vendors, service providers and other concerned parties an understanding of its cyber security objectives. Security awareness among customers, employees, vendors, service providers, etc. about the potential impact of cyber-attacks helps in cyber security preparedness of UCBs.

**7. Ensuring protection of customer information**

UCBs, as owners of customer sensitive data, should take appropriate steps in preserving the Confidentiality, Integrity and Availability of the same, irrespective of whether the data is stored/ in transit within themselves or with the third-party vendors; the confidentiality of such custodial information should not be compromised in any situation. To achieve this, suitable systems and processes across the data/information lifecycle need to be put in place by UCBs. As regards customers, UCBs may educate and create awareness among them with regard to cyber security risks.

**8. Supervisory reporting framework**

UCBs should report immediately all unusual cyber security incidents (whether they were successful or mere attempts) to Department of Co-operative Bank Supervision, Central Office, C-9, 1st Floor, BKC, Mumbai – 400051 by email, giving full details of the incident. A 'NIL' report shall be submitted on quarterly basis in case of no cyber security incidents.

9. A copy of this circular shall be placed before the Board of Directors/Administrator in its ensuing meeting and a policy on Cyber Security should be framed by the Board/Administrator immediately. After framing of the policy, UCBs are advised to implement basic Cyber Security Controls as indicated in Annex I and report the same to respective Regional Offices of Department of Co-operative Bank Supervision on or before March 31, 2019.

II. Directions, Withdrawals, Penalties & Cancellation of Licences of Urban Co-operative Banks & Banks.

**1. Oct 03, 2018 :** Millath Co-operative Bank Limited, Davangere, Karnataka – Penalised ₹ 15.00 lakh (Rupees fifteen lakh only) for violating RBI directives/guidelines

**2. Oct 03,2018 :** Reserve Bank of India imposes monetary penalty on Federal Bank Limited of ₹ 50 million for non-compliance with the directions issued by RBI

**3. Oct 03, 2018 :** RBI Directions issued to Shri Ganesh Sahakari Bank Ltd, Nashik, Maharashtra further extended upto December 29, 2018

**4. Oct 04, 2018 :**The Bijnor Urban Co-operative Bank Ltd., Bijnor – Penalised

**5. Oct 05, 2018 :** The Ananthapuramu Co-operative Urban Bank Ltd., Ananthapuramu, Andhra Pradesh – Penalised.

**6. Oct 05, 2018 :** RBI imposes penalty on The Navanirman Co-operative Urban Bank Ltd., Hyderabad Telangana

**7. Oct 05, 2018 :** RBI extends Directions to The Vaish Co-operative Commercial Bank Ltd., New Delhi,

**8. Oct 09, 2018 :** RBI cancels the licence of Navodaya Urban Co-operative Bank Ltd., Nagpur, Maharashtra.

**9. Oct 09, 2018 :** Sir M Vishvesvaraya Co-operative Bank Ltd., Bengaluru, Karnataka – Penalised

**10.Oct 09, 2018 :** Reserve Bank of India imposes monetary penalty on Indian Mercantile Co-operative Bank Limited

**11.Oct 10, 2018 :** Mathura Zila Sahkari Bank Ltd., Mathura, Uttar Pradesh – Penalised

**12. Oct 11, 2018 :**Hardoi Zila Sahakari Bank Ltd., Hardoi, Uttar Pradesh – Penalised

**13. Oct 17, 2018 :** National Urban Co-operative Bank Limited, New Delhi – Penalised

**14. Oct 17, 2018 :** Urban Co-operative Bank Ltd., Basti (U.P.) - Penalised

**15. Oct 17, 2018 :** RBI issues Directions to The City Co-operative Bank Ltd., Mumbai, Maharashtra

**16. Oct 25, 2018 :** Mandya City Co-operative Bank Ltd., Mandya, Karnataka – Penalised by RBI a monetary penalty

**17. Oct 29, 2018 :** RBI issues Directions to The Needs of Life Co-operative Bank Ltd. Mumbai, Maharashtra.

**18. Oct 31, 2018 :** RBI imposes monetary penalty

**Source: www.rbi.org.in**

ಕೇಂದ್ರ ಕಛೇರಿ : ದೂರವಾಣಿ ಸಂಖ್ಯೆಗಳು : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ : ನಂ. 62, 2ನೇ ಮಹಡಿ, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ, (ಮಾರ್ಗೋಸಾ ರಸ್ತೆ), ಪೈಪ್‌ಲೈನ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055. ದೂ. : 080–23449933/34.
ಬೆಂಗಳೂರು ವಿಭಾಗೀಯ ಕಛೇರಿ : ನಂ. 141, 1ನೇ ಮೈನ್, 1ನೇ ಕ್ರಾಸ್, ಡಾ.ರಾಜ್‌ಕುಮಾರ ರಸ್ತೆ, 1–ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010. ದೂ : 080 23525546
ಮೈಸೂರು ವಿಭಾಗೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು – 570004. ದೂ: 0821 2332299
ಬೆಳಗಾವಿ ವಿಭಾಗೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ : 0831–2401551
ಕಲಬುರಗಿ ವಿಭಾಗೀಯ ಕಛೇರಿಯ : ನಂ. 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ – 585102. ದೂ: 08472–270222.

Edited, Printed and Published by Sharangouda G. Patil – Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010